ಸಂಪುಟ 23 ಸಂಚಿಕೆ 24-25
ಜೂನ್ 24, 2001 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ


ಪೆಕ್ಸ್‌ರಂಗ

ಪೀಪಲ್ಸ್ ಫ್ರಂಟ್ ಪ್ರಣಾಳಿಕೆ




ಜನತೆಯ ಪರ್ಯಾಯ






ನೇಪಾಳ: ಅರಮನೆ ಹತ್ಯಾಕಾಂಡ

ಪೌರ ಸಂಸ್ಥೆ ಮೀಸಲಾತಿ:



ಕೃಷ್ಣ ಸರ್ಕಾರಕ್ಕೆ ಹೈಕೋರ್ಟ್ ಛೀಮಾರಿ




ಮುಗಿದ ಹೆಂಚಿನ ಮುಷ್ಕರ ನಿಲ್ಲದ ಮಾಲೀಕರ ಕಿರುಕುಳ

ಸಿನಿಮಾ 'ಚಿತ್ರಾ'



ಒಂಭತ್ತು ರಾಜ್ಯ ಸರ್ಕಾರಗಳ ವಜಾ

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 67

ಕಳೆದ ಸಂಚಿಕೆಯಲ್ಲಿ ಗೋಹತ್ಯೆ ವಿರೋಧಿಸಿ ಆಚಾರ್ಯ ವಿನೋಭಾ ಬಾವೆಯವರ ಉಪವಾಸ ಸತ್ಯಾಗ್ರಹ ಅಂತ್ಯ, ಮುರಾರ್ಜಿ ದೇಸಾಯಿ ಸರ್ಕಾರದ ಪತನದ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಇಂದಿರಾಗಾಂಧಿ ವಿರುದ್ಧದ ಎಡ ಶಕ್ತಿಗಳ ಬೆಂಬಲಿಸಲು ಸಿಪಿಐ ನಿರ್ಧಾರ, ಬಂಗಾಳದಲ್ಲಿ ಎಡರಂಗಕ್ಕೇ 37 ಸ್ಥಾನ, ಕೇರಳದಲ್ಲಿ ಎಲ್‌ಡಿಎಫ್‌ಗೆ ಗೆಲುವು, ಇ.ಕೆ.ನಾಯನಾರ್ ಮುಖ್ಯಮಂತ್ರಿ, ಸರ್ವಾಧಿಕಾರದ ಅಪಾಯ ಮತ್ತೆ ತಲೆ ಎತ್ತಿದ್ದು, 9 ರಾಜ್ಯ ಸರ್ಕಾರಗಳ ವಜಾ ಈ ಬಗ್ಗೆ ಓದಿ...

ಯಾವುದೇ ಸಾಮಾನ್ಯ ಸೈದ್ಧಾಂತಿಕ ತಳಹದಿ ಇಲ್ಲದ್ದರಿಂದ ಜನತಾಪಕ್ಷ ನಾನಾ ಮುಖಂಡರ ನಡುವೆ ವ್ಯಯಕ್ತಿಕ ದ್ವೇಷಾಸೂಯೆ ಮೇಲುಗೈ ಪಡೆಯತೊಡಗಿತು. ಪ್ರಧಾನಮಂತ್ರಿ ಸ್ಥಾನದ ಬಗ್ಗೆಯೇ ಮೂಲಭೂತ ತಪ್ಪು ತಿಳಿವಳಿಕೆಯೂ ಇತ್ತು. ಇದೇ ಅವಧಿಯಲ್ಲಿ ಹಿಂದೂ ಕೋಮುವಾದವೂ ತಲೆಯೆತ್ತಿತು. ಆರೆಸ್ಸೆಸ್ ಮತ್ತು ಜನಸಂಘ ಪ್ರಭಾವಯುತವಾದವು. ಆಡಳಿತವನ್ನು ನಡೆಸುವಲ್ಲಿ ಅದು ಸ್ಪಷ್ಟವಾಗಿ ಎದ್ದುಕಾಣುತ್ತಿತ್ತು.

ಅನೇಕ ರಾಜ್ಯಗಳಲ್ಲಿ ಕೋಮು ದಂಗೆಗಳು ನಡೆದವು. ಭಾರತೀಯ ಲೋಕದಳ, ಸಮಾಜವಾದಿಗಳು ಮತ್ತು ಬಹುಗುಣ ಬಣ ಜನತಾಪಕ್ಷದ ಒಳಗಡೆಯೇ ಆರೆಸ್ಸೆಸ್-ಜನಸಂಘ ಕೂಟದ ವಿರುದ್ಧ ಸಂಘರ್ಷ ನಡೆಸಿತು. ಅಂತಿಮವಾಗಿ ಕೇಂದ್ರ ಗೃಹ ಸಚಿವ ಚರಣ್ ಸಿಂಗ್ ಜನತಾಪಕ್ಷದಿಂದ ಹೊರಬಂದು 1979 ರ ಜುಲೈನಲ್ಲಿ ಜನತಾಪಕ್ಷ (ಜಾತ್ಯಾತೀತ) ವನ್ನು ಸ್ಥಾಪಿಸಿದರು. ಮೊರಾರ್ಜಿ ದೇಸಾಯಿ ಬಹುಮತದ ಬೆಂಬಲವನ್ನು ಕಳೆದುಕೊಂಡರು. ಕೋಮುವಾದಿ ಶಕ್ತಿಗಳು ಮೇಲುಗೈ ಪಡೆಯುತ್ತಿರುವುದನ್ನು ಕಂಡು ನಮ್ಮ ಪಕ್ಷ ಕೂಡ ಮೊರಾರ್ಜಿ ಸರಕಾರ ಮುಂದುವರಿಯುವುದನ್ನು ವಿರೋಧಿಸಿತು. ಕಾಂಗ್ರೆಸ್(ಐ) ಕೂಡ ಸರಕಾರವನ್ನು ವಿರೋಧಿಸಿತ್ತು. ಆದರೆ ಅದು ವಿರೋಧಿಸಿದ್ದು ಬೇರೆಯೇ ಕಾರಣಕ್ಕೆ. ಜುಲೈ 15 ರಂದು ಮೊರಾರ್ಜಿ ರಾಜಿನಾಮೆ ನೀಡಿದರು. ಆಗ ನಾನು ಬಹುಶಃ ಪೋಲೆಂಡ್‌ನಲ್ಲಿದ್ದೆ. ನಾನು ತಕ್ಷಣವೇ ಭಾರತಕ್ಕೆ ಮರಳಿದೆ.

ಆಗ ನೀಲಂ ಸಂಜೀವರೆಡ್ಡಿ ರಾಷ್ಟ್ರಪತಿಯಾಗಿದ್ದರು. ಅವರು ಮಧ್ಯಂತರ ಚುನಾವಣೆಯನ್ನು ವಿರೋಧಿಸಿದರು. ಹೀಗಾಗಿ ನಾನಾ ಪಕ್ಷಗಳ ಮುಖಂಡರು ರಾಷ್ಟ್ರಪತಿ ಭವನಕ್ಕೆ ಭೇಟಿ ನೀಡಲು ಆರಂಭಿಸಿದರು. ಕಾಂಗ್ರೆಸ್‌ನ ಸ್ವರಣಸಿಂಗ್ ಬಣದ ಮುಖ್ಯಸ್ಥರಾದ ಚವಾಣ್ ಪ್ರತಿಪಕ್ಷ ನಾಯಕರಾಗಿದ್ದರು. ಅವರಿಗೆ ಬೇಕಾಗುವಷ್ಟು ಬೆಂಬಲ ಇರಲಿಲ್ಲ. ಆದರೆ ಅವರ ಬಣ ಚರಣ್ ಸಿಂಗ್‌ರನ್ನು ಬೆಂಬಲಿಸಿತು. ದೇವರಾಜ ಅರಸರನ್ನು ಕಾಂಗ್ರೆಸ್(ಐ) ನಿಂದ ವಜಾ ಮಾಡಲಾಯಿತು. ಅರಸು ತಮ್ಮ ಬೆಂಬಲಿಗರ ಜತೆ ಚವಾಣ್ ಗುಂಪನ್ನು ಸೇರಿದರು. ಬಿಜು ಪಟ್ನಾಯಕ್, ಜಾರ್ಜ್ ಫರ್ನಾಂಡೀಸ್ ಮತ್ತು ಎಚ್.ಎಸ್.ಬಹುಗುಣ ಮೂಲ ಜನತಾಪಕ್ಷದಿಂದ ಹೊರಬಂದು ಚರಣ್ ಸಿಂಗರಿಗೆ ಬೆಂಬಲ ಘೋಷಿಸಿದರು. ನಾವು ಕೂಡ ಸಿಂಗ್‌ಗೆ ಬೆಂಬಲ ಪ್ರಕಟಿಸಿದೆವು. ಇಂದಿರಾಗಾಂಧಿ ಮೌಖಿಕ ಆಶ್ವಾಸನೆ ನೀಡಿದರು. ಅಂತಿಮವಾಗಿ ಎಐಎಡಿಎಂಕೆ ಬೆಂಬಲ ಕೂಡ ಹೊಂದಿದ ಚರಣ್ ಸಿಂಗ್ ರಾಷ್ಟ್ರಪತಿಯನ್ನು ಭೇಟಿಯಾಗಿ ಸರಕಾರ ರಚಿಸುವ ಹಕ್ಕನ್ನು ಮಂಡಿಸಿದರು. ಸರಕಾರ ರಚಿಸಲು ಜುಲೈ 26 ರಂದು ಅವರನ್ನು ಆಹ್ವಾನಿಸಲಾಯಿತು. ಎರಡು ದಿನಗಳ ನಂತರ ಅವರು ಪ್ರಧಾನಮಂತ್ರಿ ಆದರು. ಚವಾಣ್ ಉಪಪ್ರಧಾನಿಯಾಗಿ ಅಧಿಕಾರ ಪ್ರಮಾಣ ಸ್ವೀಕರಿಸಿದರು.

ಆಗಸ್ಟ್ 20 ರಂದು ಲೋಕಸಭೆಯಲ್ಲಿ ವಿಶ್ವಾಸಮತ ಕೋರುವಂತೆ ಹೊಸ ಸರಕಾರಕ್ಕೆ ರಾಷ್ಟ್ರಪತಿ ಸೂಚಿಸಿದರು. ಇಂದಿರಾಗಾಂಧಿಗೆ ಬೇರೆಯೇ ಯೋಚನೆ ಇತ್ತು. ಆಗಸ್ಟ್ 18 ರಂದು ನಡೆದ ಕಾಂಗ್ರೆಸ್ ಕಾರ್ಯಸಮಿತಿ ಸಭೆ ಚರಣ್ ಸಿಂಗ್ ಸರಕಾರವನ್ನು ಬೆಂಬಲಿಸದಿರಲು ನಿರ್ಧರಿಸಿತು. ಕೇವಲ 23 ದಿನಗಳಲ್ಲಿ ಅದು ತನ್ನ ನಿಲುವನ್ನು ಬದಲಾಯಿಸಿತು. ಆಗಸ್ಟ್ 20 ರ ಲೋಕಸಭೆ ಅಧಿವೇಶನಕ್ಕೆ ಮುಂಚೆಯೇ ಚರಣ್ ಸಿಂಗ್ ರಾಜಿನಾಮೆ ನೀಡುವಂತೆ ಮಾಡಲಾಯಿತು. ಮಧ್ಯಂತರ ಚುನಾವಣೆಗೆ ಶಿಫಾರಸು ಮಾಡಲಾಯಿತು. ಉಸ್ತುವಾರಿ ಪ್ರಧಾನಿಯಾಗಿ ಮುಂದುವರಿಯಲು ಅವರಿಗೆ ರಾಷ್ಟ್ರಪತಿ ಸೂಚಿಸಿದರು. ಈ ಕ್ರಮಕ್ಕಾಗಿ ರಾಷ್ಟ್ರಪತಿ ರೆಡ್ಡಿ ಕೆಲವು ಟೀಕೆಗಳನ್ನು ಎದುರಿಸ ಬೇಕಾಯಿತು. ವಾಸ್ತವವಾಗಿ ಮೊರಾರ್ಜಿ ದೇಸಾಯಿಯವರೇ ರೆಡ್ಡಿಯವರನ್ನು ಬಹಿರಂಗವಾಗಿ ಟೀಕಿಸಿದರು.

1980 ರ ಜನವರಿ 3-6 ರ ಅವಧಿಯಲ್ಲಿ ಎರಡು ಹಂತಗಳಲ್ಲಿ ಚುನಾವಣೆ ನಡೆಯುವುದೆಂದು ಚುನಾವಣೆ ಆಯೋಗ ಪ್ರಕಟಿಸಿತು. ಎಲ್ಲಾ 'ಸರ್ವಾಧಿಕಾರ ವಿರೋಧಿ ಶಕ್ತಿಗಳಿಗೆ' ಈ ಚುನಾವಣೆ ಒಂದು ಪರೀಕ್ಷೆ ಎಂದು ನಮ್ಮ ಪಕ್ಷ ವರ್ಣಿಸಿತು.

ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟ ನಡೆಸಬೇಕಿದ್ದರೂ ಕಾಂಗ್ರೆಸ್ ಪಕ್ಷ ಪ್ರಮುಖ ಎದುರಾಳಿಯಾಗಿದ್ದ ಪಶ್ಚಿಮ ಬಂಗಾಳದಲ್ಲಿ ಜನವರಿ 6 ರಂದು ಮತದಾನ ನಡೆಯಿತು.

ರಾಷ್ಟ್ರಮಟ್ಟದಲ್ಲಿ ನಾವು ಅಷ್ಟೊಂದು ಬಲಿಷ್ಟರಲ್ಲದಿದ್ದರಿಂದ ಲೋಕದಳ ಮತ್ತು ಕಾಂಗ್ರೆಸ್(ಅರಸು) ಜತೆ ಸ್ಥಾನ ಹೊಂದಾಣಿಕೆ ಮಾಡಿಕೊಳ್ಳಲು ನಮ್ಮ ಪಕ್ಷ ನಿರ್ಧರಿಸಿತು. ಆದರೆ ಬಂಗಾಳದಲ್ಲಿ ಈ ಎರಡು ಪಕ್ಷಗಳ ಪ್ರತಿಕೂಲ ಪ್ರತಿಕ್ರಿಯೆಯಿಂದಾಗಿ ಅದು ಸಾಧ್ಯವಾಗಲಿಲ್ಲ. ಈ ನಡುವೆ, ತುರ್ತುಪರಿಸ್ಥಿತಿಗೆ ಬೆಂಬಲ ನೀಡಿದ್ದು ತಪ್ಪು ಎಂಬುದನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಐ) ಒಪ್ಪಿಕೊಂಡಿತು. ಅದು ಮೊದಲು ಪಕ್ಷದ ಅಧ್ಯಕ್ಷ ಸ್ಥಾನದಿಂದ ಎಸ್.ಎ.ಡಾಂಗೆಯವರನ್ನು ತೆಗೆದು ಹಾಕಿತು. ಆನಂತರ ಪಕ್ಷದಿಂದಲೇ ಉಚ್ಚಾಟಿಸಿತು. ಇಂದಿರಾಗಾಂಧಿ ವಿರುದ್ಧ ಎಡಶಕ್ತಿಗಳನ್ನು ಬೆಂಬಲಿಸಲು ಸಿಪಿಐ ನಿರ್ಧರಿಸಿತು. ಹೀಗಾಗಿ ಅವರ ಜತೆ ಸ್ಥಾನ ಹೊಂದಾಣಿಕೆ ಮಾಡಿಕೊಳ್ಳಲು ನಾವು ಮುಂದಾದೆವು.

ರಾಜ್ಯದ 42 ಲೋಕಸಭೆ ಕ್ಷೇತ್ರಗಳ ಪೈಕಿ 41 ರಲ್ಲಿ ಚುನಾವಣೆ ನಡೆಯಿತು. ಶ್ರೀರಾಮಪುರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿಯ ಹತ್ಯೆಯಾಗಿದ್ದರಿಂದ ಅಲ್ಲಿನ ಚುನಾವಣೆ ಮುಂದಕ್ಕೆ ಹೋಗಿತ್ತು. ಸಿಪಿಐ(ಎಂ) 30 ಕ್ಷೇತ್ರಗಳಲ್ಲಿ, ಆರೆಸ್ಪಿ ಮತ್ತು ಫಾರ್ವರ್ಡ್‌ಬ್ಲಾಕ್ ತಲಾ ನಾಲ್ಕರಲ್ಲಿ ಸ್ಪರ್ಧಿಸಿದವು. ಮೂರರಲ್ಲಿ ಸಿಪಿಐ ಕಣಕ್ಕಿಳಿಯುವುದೆಂದು ನಿರ್ಧಾರವಾಯಿತು. ಕಾಂಗ್ರೆಸ್(ಐ) ಎಲ್ಲ 41 ಸ್ಥಾನಗಳಲ್ಲಿ ಸ್ಪರ್ಧಿಸಿತು. ಆರಾಮಭಾಗ್‌ನಲ್ಲಿ ಜನತಾಪಕ್ಷದ ಪ್ರಫುಲ್ಲ ಚಂದ್ರ ಸೇನ್‌ರಿಗೆ ಕಾಂಗ್ರೆಸ್(ಐ) ಬೆಂಬಲ ನೀಡಿತು. ಕಾಂಗ್ರೆಸ್ ಪಕ್ಷ ವ್ಯಾಪಕ ಹಿಂಸಾಚಾರ ನಡೆಸಿತು. ಫಲಿತಾಂಶಗಳು ಪ್ರಕಟವಾಗುವವರೆಗೆ ಎಡಪಕ್ಷಗಳ 18 ಕಾರ್ಯಕರ್ತರ ಹತ್ಯೆಯಾಯಿತು. ಸರ್ವಾಧಿಕಾರಿ ಶಕ್ತಿಗಳ ಉದ್ದೇಶ ಹಾಗೂ ಬಲವನ್ನು ನಾವು ಸರಿಯಾಗಿಯೇ ಅಂದಾಜು ಮಾಡಿದ್ದೆವು.

ಮರಳಿದ ಇಂದಿರಾಗಾಂಧಿ

531 ಲೋಕಸಭಾ ಸ್ಥಾನಗಳ ಪೈಕಿ 425 ಸ್ಥಾನಗಳಲ್ಲಿ ಗೆದ್ದ ಕಾಂಗ್ರೆಸ್ ಭಾರಿ ಬಹುಮತದೊಂದಿಗೆ ಅಧಿಕಾರಕ್ಕೆ ಮರಳಿತು. ಸದನದ ಒಟ್ಟು ಸ್ಥಾನ 542 ಆಗಿದ್ದು 535 ರಲ್ಲಿ ಮತದಾನ ನಡೆದಿತ್ತು.

ಈ ರೀತಿಯ ಬಹುಮತ ಆಗಿನವರೆಗೆ ಒಂದು ದಾಖಲೆಯಾಗಿತ್ತು. ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾ ಹೊರತುಪಡಿಸಿ ಉಳಿದೆಲ್ಲ ಕಡೆ ಕಾಂಗ್ರೆಸ್ ಉತ್ತಮ ನಿರ್ವಹಣೆ ತೋರಿತು. ಚರಣ್ ಸಿಂಗ್ ನೇತೃತ್ವದ ಜನತಾ(ಎಸ್) ಅಥವಾ ಲೋಕದಳ 41 ರಲ್ಲಿ, ಜನತಾಪಕ್ಷ 31 ಹಾಗೂ ಅರಸು ಕಾಂಗ್ರೆಸ್ 13 ಸ್ಥಾನಗಳಲ್ಲಿ ಗೆದ್ದಿತು. ಸಿಪಿಐ(ಎಂ) 35 ಹಾಗೂ ಸಿಪಿಐ 11 ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸಿತು.

ಎಡರಂಗ-ಸಿಪಿಐ ಕೂಟ ಪ.ಬಂಗಾಳದಲ್ಲಿ 37 ಸ್ಥಾನಗಳನ್ನು ಗೆದ್ದಿತು. ಕಾಂಗ್ರೆಸ್‌ಗೆ ಸಿಕ್ಕಿದ್ದು ನಾಲ್ಕು ಮಾತ್ರ. 37 ರಲ್ಲಿ ಸಿಪಿಐ(ಎಂ) ಪಾಲು 28 ಸ್ಥಾನ. ಆರ್.ಎಸ್.ಪಿ. ನಾಲ್ಕು, ಫಾರ್ವರ್ಡ್ ಬ್ಲಾಕ್ ಮೂರು ಹಾಗೂ ಸಿಪಿಐ ಮೂರರಲ್ಲಿ ಗೆದ್ದವು. ಆರಾಮಬಾದ್ ಕ್ಷೇತ್ರದಿಂದ ನಮ್ಮ ಅಭ್ಯರ್ಥಿ ಬಿಜಯ್ ಮೋರಕ್ ಭಾರಿ ಅಂತರದಿಂದ ಗೆದ್ದಿದ್ದು ಬಲುದೊಡ್ಡ ವಿಜಯವಾಗಿತ್ತು. ಶ್ರೀರಾಮಪುರ ಕ್ಷೇತ್ರದಲ್ಲಿ ಫೆಬ್ರವರಿ 24 ರಂದು ನಡೆದ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿ ಒಂದು ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ವಿಜಯಶಾಲಿಯಾದರು. ರಾಜ್ಯದಲ್ಲಿ ನಾವು ಅಧಿಕಾರಕ್ಕೆ ಬಂದ ನಂತರದ ಪ್ರಥಮ ಚುನಾವಣೆ ಇದಾಗಿದ್ದ ಹಿನ್ನಲೆಯಲ್ಲಿ ಜನತೆ ಕಳಿಸಿದ ಸಂದೇಶ ಸರಿಯಾಗಿಯೇ ಇತ್ತು.

ಲೋಕಸಭೆ ಚುನಾವಣೆಗಳ ನಂತರ ಕೇರಳ ವಿಧಾನಸಭೆಗೆ ಚುನಾವಣೆ ನಡೆಯಿತು. ಸಿಪಿಐ(ಎಂ) ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗ (ಎಲ್,ಡಿ.ಎಫ್) ಜನವರಿ 21ರ ಚುನಾವಣೆಯಲ್ಲಿ ಸ್ಪಷ್ಟ ಬಹುಮತಗಳಿಸಿತು. ಕಾಂಮ್ರೇಡ್ ಇ.ಕೆ. ನಾಯನಾರ್ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ದೇಶಾದ್ಯಂತ ನಮ್ಮ ಪ್ರಭಾವ ಬೆಳೆಯುತ್ತಿತ್ತು.

9 ರಾಜ್ಯ ಸರಕಾರಗಳ ವಜಾ

ಸರ್ವಾಧಿಕಾರದ ಅಪಾಯ ಮತ್ತೆ ದೇಶವನ್ನು ಕಾಡತೊಡಗಿತು. ಇಂದಿರಾಗಾಂಧಿ ಒಂಬತ್ತು ರಾಜ್ಯಗಳ ಸರಕಾರಗಳನ್ನು ವಜಾ ಮಾಡಿದರು. ಪಶ್ಚಿಮ ಬಂಗಾಳದ ಎಡರಂಗ ಸರಕಾರವನ್ನು ಉರುಲಿಸುವ ಪ್ರಯತ್ನವೂ ನಡೆಯಿತು. 1972ರ ಅವಧಿಯಲ್ಲಿ ರಾಜ್ಯದಲ್ಲಿ ಕಾರುಬಾರು ನಡೆಸಿದ ಗೂಂಡಾಗಳನ್ನು ಕಾಂಗ್ರೆಸ್ ಛೂ ಬಿಟ್ಟಿತು. ಇಂದಿರಾಗಾಂಧಿ ಪ್ರಮಾಣ ವಚನ ಸ್ವೀಕರಿಸಿದ ಮೂರೇ ದಿನಗಳಲ್ಲಿ ಆಲಿಮುದ್ದಿನ ರಸ್ತೆಯಲ್ಲಿರುವ ಸಿಪಿಐ(ಎಂ) ರಾಜ್ಯ ಕೇಂದ್ರ ಕಛೇರಿ ಮೇಲೆ ಬಾಂಬ್ ಹಾಕಲಾಯಿತು. ಅದಕ್ಕೆ ಮುಂಚೆ, 1978ರ ಏಪ್ರಿಲ್ 12 ರಂದು ಕಾಂಗ್ರೆಸ್ ಗೂಂಡಾಗಳು ರೈಟರ್ಸ್ ಬಿಲ್ಡಿಂಗ್ಸ್ ಮೇಲೆಯೂ ದಾಳಿ ನಡೆಸಿದ್ದರು.

ಕಾಂಗ್ರೆಸ್ ಪಕ್ಷದ ಬೇಜವಾಬ್ದಾರಿತನಕ್ಕೆ ಲಂಗುಲಗಾಮಿಲ್ಲ ಹಾಗೂ ಪರಿಸ್ಥಿತಿ ಸ್ಫೋಟಕ ಹಂತಕ್ಕೆ ತಲುಪುತ್ತಿದೆ ಎನ್ನುವುದಕ್ಕೆ 1980ರ ಮಾರ್ಚ್ 31 ಹಾಗೂ ಏಪ್ರಿಲ್ 3ರ ಪ್ರಕರಣಗಳೇ ಸಾಕ್ಷಿ. ಏಪ್ರಿಲ್ 3 ರಂದು ಬಾಂಗ್ಲಾ ಬಂದ್ ಹೆಸರಿನಲ್ಲಿ ಬೀದಿ ಬೀದಿಯಲ್ಲಿ ಹಿಂಸೆ ತಾಂಡವವಾಡಿತು. ಪ್ರಯಾಣಿಕರು ತುಂಬಿದ್ದ ಬಸ್‌ಗಳ ಮೇಲೆ ಪೆಟ್ರೋಲ್ ಬಾಂಬ್‌ಗಳನ್ನು ಎಸೆಯಲಾಯಿತು. ಕಾಂಗ್ರೆಸ್‌ನ ಈ ಗೂಂಡಾಗಿರಿಗೆ ಮೂರು ಮಹಿಳೆಯರ ಸಹಿತ 15 ಜನರು ಬಲಿಯಾದರು. ಜನರು ಸಾವಿದ್ದಲ್ಲಿಗೆ ಧಾವಿಸಿ ಬಂದರು.

(ಮುಂದುವರಿಯುವುದು)

ಮುಗಿದ ಹಂಚು ಕಾರ್ಮಿಕರ ಮುಷ್ಕರ.....

ಪುಟ 7 ರಿಂದ

ಗೋಳಾಡಬೇಕಾಯಿತು. ಕ್ವಾಟ್ರಸ್‌ನಲ್ಲಿರುವ ಕಾರ್ಮಿಕರೇ ಹೋರಾಟಕ್ಕೆ ನಾಯಕತ್ವ ಕೊಟ್ಟವರು ಎನ್ನುವ ಕಾರಣಕ್ಕೆ ಈ ಸೇಡಿನ ಕ್ರಮ. ಒಪ್ಪಂದದಲ್ಲಿ ಸೇಡಿನ ಕ್ರಮ ಕೈಗೊಳ್ಳುವುದಿಲ್ಲ ಎಂದು ಬರೆದು ಕೊಟ್ಟಿದ್ದಕ್ಕೆ ಏನೂ ಅರ್ಥವಿಲ್ಲವೇ?

ಕುಂಟುನೆಪ

ಎಲ್ಲಾ ಕಾರ್ಖಾನೆಗಳು ಪ್ರಾರಂಭವಾದರೂ ಆರ್.ಎನ್.ಶೆಟ್ಟಿಯವರ ಕಾರ್ಖಾನೆ ಪ್ರಾರಂಭವಾಗಲು ಹೆಚ್ಚು ವಿಳಂಬವಾಯಿತು. ಕಾರ್ಖಾನೆ ಪ್ರಾರಂಭ ಮಾಡಲು ಆರ್ಥಿಕ ಬಿಕ್ಕಟ್ಟು ಎನ್ನುವ ಕುಂಟು ನೆಪ. (ಆರ್.ಎನ್.ಶೆಟ್ಟರಿಗೆ 200 ಜನ ಕಾರ್ಮಿಕರಿರುವ ಕಾರ್ಖಾನೆ ನಡೆಸಲಾರದಷ್ಟು ಬಿಕ್ಕಟ್ಟಿದೆ ಎಂದರೆ ನಂಬಬಹುದೇ? ಸುಮಾರು ಲಕ್ಷಾಂತರ ರೂಪಾಯಿಗಳ ಹಂಚು ಕಾರ್ಖಾನೆಯಿಂದ ಮಾರಾಟ ಆಗಿರುವಾಗ) ಇನ್ನು ಹಲವರಿಗೆ ಸಿಐಟಿಯು ಸಂಘ ಬಿಟ್ಟರೆ ನಿಮಗೆ ಕೆಲಸ ಕೊಡುವುದಾಗಿ ಆಮಿಷ, ದಬಾವಣೆ. ಕೆಲವು ದಿನ ವಿಳಂಬಮಾಡಿದರೆ ಹಲವು ಕಾರ್ಮಿಕರು ಸಿಐಟಿಯು ಬಿಟ್ಟು ಬರುತ್ತಾರೆ ಎನ್ನುವ ಆಲೋಚನೆ. ಆದರೆ 10-12 ಜನರನ್ನು ಹೊರತು ಪಡಿಸಿ ಯಾರೂ ಆರ್.ಎನ್.ಶೆಟ್ಟರ ದೊಡ್ಡಸ್ತಿಕೆಯನ್ನು ನೋಡಿ ಸಂಘ ಬಿಡಲಿಲ್ಲ. ಮನೆ ಹೋದರೂ ಹೋಗಿ ಕೈ ಚಾಚಲಿಲ್ಲ. ಇದೇ ಕಾರ್ಖಾನೆಯಲ್ಲಿ ಹಿಂದೊಮ್ಮೆ 5-6 ತಿಂಗಳು ಮುಷ್ಕರ ನಡೆದರೂ ಕಾರ್ಮಿಕರು ಸೋಲಲಿಲ್ಲ ಎನ್ನುವುದನ್ನು ನೆನಸಿಕೊಂಡಾದರೂ ಸುಮ್ಮನಿರಬಹುದಾಗಿತ್ತು.

ಅಷ್ಟಕ್ಕೆ ಸುಮ್ಮನಾಗಲಿಲ್ಲ. ಇಲ್ಲಿಯ ಆಡಳಿತ ವರ್ಗ ಕೆಲಸಗಾರರ ಕೆಲಸವನ್ನು ಬದಲಾಯಿಸಿದರು. ಸಿಐಟಿಯು ಬಿಡಲು ಹಲವು ಆಮಿಷ ಒಡ್ಡಲಾಗುತ್ತಿದೆ. ಇದು ಆರ್.ಎನ್.ಶೆಟ್ಟರ ನೇತೃತ್ವದ ಮುರ್ಡೇಶ್ವರ ಕಾರ್ಖಾನೆಯ ಕತೆ ಮಾತ್ರ ಅಲ್ಲ ಎಲ್ಲಾ ಕಾರ್ಖಾನೆಗಳ ಕತೆ ಕೂಡ.

ತಕ್ಷಣ ಪ್ರತಿ ಕಾರ್ಖಾನೆಗೆ ಭೇಟಿ ಕೊಟ್ಟು ಪರಿಶೀಲಿಸಿ ಕಾನೂನು ಕ್ರಮ ಕೈಗೊಳ್ಳುವ ವಿಭಾಗೀಯ ಕಾರ್ಮಿಕಾಧಿಕಾರಿ ಮತ್ತು ಜಿಲ್ಲಾ ಕಾರ್ಮಿಕಾಧಿಕಾರಿಗಳು ಇನ್ನೂ ಪತ್ತೆ ಇಲ್ಲ. ಜನಪ್ರತಿನಿಧಿಗಳು, ಸಚಿವರುಗಳ ಕೃಪಾಶೀರ್ವಾದದ ಜೊತೆ ಕಾರ್ಮಿಕರ ಬದುಕಿನೊಂದಿಗೆ ಆಟ ಆಡುತ್ತಿರುವ ಮಾಲಕ ವರ್ಗ ವರ್ಗಸ್ವಭಾವಕ್ಕ ನುಗುಣವಾಗಿ ತಮ್ಮೆಲ್ಲ ದ್ವೇಷ, ಬಿನ್ನಾಭಿಪ್ರಾಯ ಮರೆತು ಒಂದಾಗುತ್ತಿದ್ದಾರೆ. ಸಿಐಟಿಯುವನ್ನು ಮುಗಿಸಲು ಮತ್ತು ಕಾರ್ಮಿಕರಿಗೆ ಮೋಸ ಮಾಡಲು ಇರುವ ವಿವಿಧ ಮಾರ್ಗೋಪಾಯಗಳನ್ನು ಕುರಿತು ಗಂಭೀರವಾಗಿ ಚಿಂತಿಸುತ್ತಿದ್ದಾರೆ.

ಮುಷ್ಕರದ ಸಂದರ್ಭದಲ್ಲಿ ಹಂಚಿನ ಉದ್ಯಮದ ಬಗ್ಗೆ ಪ್ರೀತಿ ವ್ಯಕ್ತಪಡಿಸಿದ ಜನ, ಪತ್ರಿಕೆಗಳು ಈಗ ಮಾತನಾಡಬೇಕಾಗಿದೆ. ಕಾರ್ಮಿಕರಿಗೆ ಸಿಗಬೇಕಾದ ಸೌಲಭ್ಯವನ್ನು ಕೊಡಿಸುವಲ್ಲಿ ಸಾರ್ವಜನಿಕರು ಯಾರೇ ಮುಂದಾದರೂ ಕಾರ್ಮಿಕರಂತೂ ಸ್ವಾಗತಿಸುತ್ತಾರೆ.

ಪೌರಸಂಸ್ಥೆ ಅಧ್ಯಕ್ಷ, ಉಪಾಧ್ಯಕ್ಷರ ಮೀಸಲಾತಿ: ಹೈಕೋರ್ಟ್‌ನಿಂದ ಛೀಮಾರಿ ಹಾಕಿಸಿಕೊಂಡ ಕೃಷ್ಣ ಸರ್ಕಾರ

ಪೌರ ಸಂಸ್ಥೆ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳ ಆಯ್ಕೆಗೆ ಕರ್ನಾಟಕ ಸರ್ಕಾರ ನಿಗದಿಗೊಳಿಸಿದ ಮೀಸಲಾತಿ ಸಂವಿಧಾನದ ವಿಧಿಗಳಿಗೆ ವಿರುದ್ಧವಾಗಿದೆ ಹಾಗೂ ರಾಜಕೀಯ ಪಕ್ಷಪಾತದಿಂದ ಕೂಡಿದೆಯೆಂದು ರಾಜ್ಯದ ಹೈಕೋರ್ಟ್ ತೀರ್ಪು ನೀಡಿ ಸರ್ಕಾರ ಹೊರಡಿಸಿದ್ದ ಆದೇಶವನ್ನು ರದ್ದುಗೊಳಿಸಿದೆ. ಮತ್ತು ಸಂವಿಧಾನಬದ್ಧವಾಗಿ ನಿಯಮಾವಳಿಗಳನ್ನು ರೂಪಿಸಲು ಸೂಚಿಸಿದೆ.



ಪಾರದರ್ಶಕತೆ, ನಿಷ್ಪಕ್ಷಪಾತತನದ ಬಗ್ಗೆ ಸದಾ ಬೊಗಳೆ ಹೊಡೆಯುತ್ತಿದ್ದ ಕೃಷ್ಣರ ಸರ್ಕಾರಕ್ಕೆ ಹಾಕಿದ ಛೀಮಾರಿ ಇದು. ಆಡಳಿತ ವಿಕೇಂದ್ರೀಕರಣದ ಹಾಗೂ ಜನರ ಕೈಗೆ ನಾಗರೀಕ ಅಧಿಕಾರ ನೀಡುವ ದಿಶೆಯಲ್ಲಿ ಕಳೆದ ತಿಂಗಳಲ್ಲಿ 148 ಪುರ, ನಗರ ಸಭೆಗಳಿಗೆ, ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಯಿತು. ಆಗಲೂ ಸಹ ಸ್ಥಾನಗಳ ಸ್ಪರ್ಧೆಯಲ್ಲಿ ಮೀಸಲಾತಿ ನಿಗದಿ ಮಾಡುವಾಗಲೂ ತಮ್ಮ ಇಷ್ಟಾನಿಷ್ಟತೆ ಪ್ರಕಾರವೇ ಹಂಚಲಾಯಿತು ಎಂಬ ದೂರು ಕೇಳಿಬಂತು. ಈಗ ಆಯ್ಕೆಯಾದ ಪುರ, ನಗರಸಭೆಗಳಿಗೆ ಅಧ್ಯಕ್ಷ-ಉಪಾಧ್ಯಕ್ಷರನ್ನು ಆರಿಸಿಕೊಳ್ಳಬೇಕಿತ್ತು.

ಸಾಮಾಜಿಕ ನ್ಯಾಯಕ್ಕೆ ತಾನು ಬದ್ಧನಾಗಿರುವುದಾಗಿ ಹೇಳಿದ ಸರ್ಕಾರ ಮೀಸಲಾತಿ ನಿಗದಿ ಪಡಿಸಲು ಸಂಪುಟದರ್ಜೆ ಸಚಿವ ಕೆ.ಹೆಚ್.ರಂಗನಾಥ್ ನೇತೃತ್ವದ ಉಪಸಮಿತಿಯನ್ನು ರಚಿಸಿತು. ಈ ಸಮಿತಿ ನೀಡಿದ ವರದಿ ಅನುಸರಿಸಿ ಆದೇಶವನ್ನು ಹೊರಡಿಸಿತು. ಆದರೆ ಈ ಮೀಸಲಾತಿಯನ್ನು ಒಪ್ಪದ ಕೆಲವು ಶಾಸಕರು, ಸಚಿವರು ಕೆಲವು ನಗರಸಭೆಗಳ ಪದಾಧಿಕಾರಿಗಳ ಮೀಸಲಾತಿಯನ್ನು ಬದಲಾಯಿಸಬೇಕೆಂದು ಪಟ್ಟು ಹಿಡಿದು ಮುಖ್ಯಮಂತ್ರಿಗಳ ಮೇಲೆ ಒತ್ತಡ ತಂದು ಮಾರ್ಪಾಡು ಮಾಡಿ ಜೂನ್ 2 ರಂದು ಎರಡನೇ ಆದೇಶ ಹೊರಡಿಸಿದರು. ಇಂತಹವುಗಳು 16 ಸಂಸ್ಥೆಗಳಿವೆ. ಇಂತಹ ಒತ್ತಡ ತರುವಲ್ಲಿ ಸಚಿವ ಡಿ.ಕೆ.ಶಿವಕುಮಾರ್, ಶಾಸಕ ಜೆ.ಡಿ.ನಾಯ್ಕ(ರಾಯಚೂರು) ಕುಮಟಾದ ಶಾಸಕ ಮೋಹನ್ ಶೆಟ್ಟಿ, ಬನ್ನೂರು ಶಾಸಕ ಮಾದನಾಯ್ಕ ಅವರುಗಳು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದರೆ ಮುಖ್ಯಮಂತ್ರಿಗಳು ಅವುಗಳ ಮೇಲೆ ಷರಾ ಸಹ ಹಾಕಿದ್ದಾರೆ. ಇದರ ವಿರುದ್ಧ ಕೆಲವರು ಹೈಕೋರ್ಟ್‌ನಲ್ಲಿ ರಿಟ್ ಹಾಕಿದರು.

ಇದನ್ನು ತೀವ್ರವಾಗಿ ಪರಿಗಣಿಸಿರುವ ನ್ಯಾಯಮೂರ್ತಿ ವಿ.ಗೋಪಾಲಗೌಡರವರು ಸ್ಪಷ್ಟವಾಗಿ ಇದು ರಾಜಕೀಯ ಪ್ರೇರಿತವೆಂದು ಟೀಕಿಸಿದ್ದಾರೆ. ನಗರಾಡಳಿತ ಸಚಿವರಿದ್ದು, ಇನ್ನೊಬ್ಬ ಸಚಿವರಿಗೆ ಇದನ್ನು ವಹಿಸಿದ್ದೇಕೆ ಎಂದೂ ಪ್ರಶ್ನಿಸಿದ್ದಾರೆ.

ಕೃಷ್ಣರವರ ಕಾಂಗ್ರೆಸ್ ಸರ್ಕಾರ ಫಲಿತಾಂಶ ಪ್ರಕಟವಾದ ನಂತರ, ಪ್ರಜಾಸತ್ತಾತ್ಮಕ ಆಯ್ಕೆಗೆ ಅವಕಾಶವನ್ನೇ ನೀಡದೆ ತಮ್ಮ ಪಕ್ಷದ, ತಮ್ಮ ಬೆಂಬಲಿಗರ ಹಿಡತದಲ್ಲಿ ಇರಬೇಕೆಂಬ ಅತ್ಯಂತ ಸಂಕುಚಿತ, ಸ್ಥಾಪಿತ ಹಿತಾಸಕ್ತಿ ಆಧಾರದಲ್ಲೇ ಕಾರ್ಯವೆಸಗಿರುವುದು ಸ್ಪಷ್ಟವಾಗಿದೆ. ಮೊದಲ ಆದೇಶದ ಹಂತದಲ್ಲಿಯೂ ಈ ಎಲ್ಲಾ ಕಸರತ್ತು ನಡೆದಿದೆ.

ಕಿತ್ತುಕೊಂಡ ಚುನಾವಣಾ ಆಯೋಗದ ಅಧಿಕಾರ

ಕಾಂಗ್ರೆಸ್ ಅಧಿಕಾರಕ್ಕೆ ಬಂದ ತಕ್ಷಣವೇ ಸ್ಥಳೀಯ ಸಂಸ್ಥೆಗಳಿಗೆ ಮೀಸಲಾತಿ ನಿಗದಿ ಪಡಿಸುವ ಅಧಿಕಾರವನ್ನು ಚುನಾವಣಾ ಆಯೋಗದಿಂದ ಕಿತ್ತುಕೊಂಡಿತು. ಹೀಗೆ ತಾನು ಸರ್ವಾಧಿಕಾರತ್ವ ಬಿಟ್ಟಿಲ್ಲವೆಂದು ತೋರಿಸಿತು. ಈಗ ಅಧಿಕಾರ ದಾಹಕ್ಕೆ ಸಂವಿಧಾನಾತ್ಮಕ ಅಂಶಗಳನ್ನು ಲೆಕ್ಕಿಸುವುದಿಲ್ಲ ಎಂಬುದನ್ನು ಪುನರುಚ್ಚರಿಸಿ ಮುಖಭಂಗಕ್ಕೀಡಾಗಿದೆ.

ಇನ್ನಾದರೂ ಕೃಷ್ಣರ ಸರ್ಕಾರ ತನ್ನ ಸರ್ವಾಧಿಕಾರದ, ಪಕ್ಷಪಾತದ ತೀರ್ಮಾನ ಕೈ ಬಿಟ್ಟು ಮೀಸಲಾತಿ ನಿಗದಿಯ ಅಧಿಕಾರವನ್ನು ಚುನಾವಣಾ ಆಯೋಗಕ್ಕೆ ಒಪ್ಪಿಸಬೇಕು. ಇಲ್ಲವಾದರೆ ಮತ್ತೆ ಅದೇ ಪಕ್ಷಪಾತತನದ, ಸಂವಿಧಾನ ಹಾಗೂ ಸ್ಥಳೀಯ ಸಂಸ್ಥೆಗಳ ಆಶಯಗಳಿಗೆ ವಿರುದ್ಧವಾಗಿ ಹೋಗಲಾರರು ಎಂದು ಹೇಳಲು ಸಾಧ್ಯವಿಲ್ಲ.

ಮೆಕ್ಕೆ ಜೋಳ ಖರೀದಿಸಿದ ಹಣ ನೀಡದೇ ಸತಾಯಿಸುತ್ತಿರುವ ಸರ್ಕಾರ

ಮೆಕ್ಕೆಜೋಳವನ್ನು ಮಾರಿ ನಾಲ್ಕಾರು ತಿಂಗಳಾದರೂ ಅದನ್ನು ಖರೀದಿಸಿದ್ದ ಸರ್ಕಾರ ಹಣವನ್ನೇ ನೀಡಿಲ್ಲವೆಂದು ಪ್ರತಿಭಟಿಸಿ ಕೂಡಲೇ ಹಣ ಬಿಡುಗಡೆ ಮಾಡಬೇಕೆಂದು ರೈತರು ದಾವಣಗೆರೆ ಮತ್ತಿತರೆಡೆ ಚಳುವಳಿಗೆ ಇಳಿದಿದ್ದಾರೆ. ಉತ್ತಮ ಬೆಲೆಯೂ ಸಿಗದೆ, ಕಂಗಾಲಾಗಿದ್ದ ರೈತರು ಈ ಹಿಂದೆ ರಾಜ್ಯದಾದ್ಯಂತ ಹೋರಾಟ ಮಾಡಿದ ಬಳಿಕವೇ ಮೆಕ್ಕೆ ಜೋಳ ಖರೀದಿಸಲು ಸರ್ಕಾರ ಮುಂದಾಗಿತ್ತು. ರೈತರ ಹಿತ ಕಾಯಲು ಬದ್ಧವೆಂದು ಹೇಳಿದ್ದ ಸರ್ಕಾರ ಬೆಲೆ ಕುಸಿಯಲು ಕೇಂದ್ರ ಸರ್ಕಾರದ ಮುಕ್ತ ಆಮದು-ರಫ್ತು ನೀತಿಗಳ ವಿರುದ್ಧ ಹೋರಾಡುವ ರಾಜಕೀಯ ಇಚ್ಛಾ ಶಕ್ತಿಯನ್ನು ತೋರಿಸಲಿಲ್ಲ. ತಾನೇ ಈಸಮಸ್ಯೆ ಬಗೆಹರಿಸುವುದಾಗಿ, ಆವರ್ತ ನಿಧಿ ಸ್ಥಾಪಿಸಿದ್ದಾಗಿ ಹೇಳಿಕೊಂಡಿತು. ಆದರೆ ಕೇಂದ್ರದಿಂದ ಹೆಚ್ಚಿನ ನೆರವನ್ನು ಆಂಧ್ರ ಪಡೆದುಕೊಂಡಂತೆ ಪಡೆಯಲು ಯತ್ನಿಸಲಿಲ್ಲ. ಹಾಗೆ ನೋಡಿದರೆ ಕೃಷ್ಣ ಸರ್ಕಾರ ಆರಂಭದಿಂದಲೂ ವಾಜಪೇಯಿ ಸರ್ಕಾರದೊಂದಿಗೆ ಬಹಳ ಮೃದುವಾದ ಧೋರಣೆಯನ್ನೇ ತಳೆದಿದೆ. ಉದಾರೀಕರಣ, ಜಾಗತೀಕರಣ ನೀತಿಗಳನ್ನು ಅನುಸರಿಸುತ್ತಿರುವ ವಾಜಪೇಯಿ-ಕೃಷ್ಣರ ಸರ್ಕಾರಗಳು ಪರಸ್ಪರ ಸಹಕಾರ ಬೆಸೆದಿವೆ. ಆದರೆ ಇದರ ಪರಿಣಾಮ ರಾಜ್ಯ ರೈತರು ನರಳಬೇಕಾಗಿದೆ.

ಈಗಾಗಲೇ ಮುಂಗಾರು ಮಳೆ ಆರಂಭಗೊಂಡಿದ್ದು ಬಿತ್ತನೆಯಂತಹ ಕೃಷಿ ಕೆಲಸಗಳಲ್ಲಿ ರೈತರು ತೊಡಗಬೇಕು. ಆದರೆ ಹಿಂದಿನ ಸಾಲ ತೀರಿಸದೇ, ಹೊಸ ಬೀಜ, ಗೊಬ್ಬರ ಖರೀದಿಸದೇ ಕೃಷಿ ಮಾಡುವುದಾದರೂ ಹೇಗೆ? ರೈತರು ಕಣ್ಣೆದುರಿದ್ದರೂ ಕೃಷ್ಣ ಸರ್ಕಾರ ಕಣ್ಣು ಮುಚ್ಚಿದೆ. ಆದ್ದರಿಂದ ಅಲ್ಪಸ್ವಲ್ಪ ಹಣ ಬಿಡುಗಡೆ ಮಾಡಿ ಕಾಲ ತಳ್ಳದೆ ಸರ್ಕಾರ ಪ್ರಥಮ ಆದ್ಯತೆಯೆಂದು ಪರಿಗಣಿಸಿ ಪೂರ್ತಿ ಹಣ ನೀಡಲೇ ಬೇಕು. ಇಲ್ಲವಾದಲ್ಲಿ ಪರಿಸ್ಥಿತಿ ಗಂಭೀರವಾಗಲಿದೆ.

ಕರ್ನಾಟಕ ಈ ವಾರ ಒಂದು ನೋಟ

ಎಸ್.ವೈ. ಗುರುಶಾಂತ್

ನರಹಂತಕನ ಬೇಟೆ ಆರಂಭ: ಒಗ್ಗಟ್ಟಿನ ಕಾರ್ಯಾಚರಣೆ ಅಗತ್ಯ

ಕುಖ್ಯಾತ ಕಾಡುಗಳ್ಳ, ನರಹಂತಕ ವೀರಪ್ಪನ್ ವಿರುದ್ಧ ಕಾರ್ಯಾಚರಣೆ ಮತ್ತೇ ಆರಂಭಿಸಲು ನಿರ್ಧರಿಸಲಾಗಿದೆ. ತಮಿಳುನಾಡಿನಲ್ಲಿ ಕರುಣಾನಿಧಿ ಚುನಾವಣೆಯಲ್ಲಿ ಧೂಳೀಪಟಗೊಂಡು ಜಯಲಲಿತಾ ಅಧಿಕಾರಕ್ಕೆ ಬಂದಿರುವುದು ಈ ಕಾರ್ಯಾಚರಣೆಗೆ ಮಹತ್ವವಿದೆಯೆಂದು ವರ್ಣಿಸಲಾಗುತ್ತಿದೆ.

ಈ ಕಾರ್ಯಾಚರಣೆ ಪಡೆಯ (ಎಸ್‌ಟಿಎಫ್) ನ ನೇತೃತ್ವವನ್ನು ಹಿಂದೆ ವೀರಪ್ಪನ್‌ನನ್ನು ಹಿಡಿಯಲು ಗಣನೀಯ ಪ್ರಗತಿ ಸಾಧಿಸಿದ್ದಾರೆನ್ನಲಾಗುವ ಹಿರಿಯ ಪೋಲೀಸ್ ಅಧಿಕಾರಿ ದಾವರಂಗೆ ವಹಿಸಲಾಗಿದೆ. ಮತ್ತು ಈ ಜಂಟಿ ಕಾರ್ಯಾಚರಣೆ ನೇತೃತ್ವ ವಹಿಸಲಿದ್ದಾರೆ.

ಆದರೆ ಈ ನಡುವೆ ಕರ್ನಾಟಕದ ವಿಶೇಷ ಕರ್ತವ್ಯ ದಳಕ್ಕೆ ಕೆಂಪಯ್ಯನವರನ್ನು ದಂಡನಾಯಕರಾಗಿ ನೇಮಿಸಿರುವ ಬಗ್ಗೆ ಹಲವು ಆಕ್ಷೇಪಣೆಗಳೂ ವ್ಯಕ್ತವಾಗಿವೆ. ಕೆಂಪಯ್ಯನವರು ಡಾ|| ರಾಜ್‌ರವರ ಆಪ್ತರೆಂದೂ, ಈ ಹಿಂದೆ ವೀರಪ್ಪನ್‌ನ ಸಹಚರನಿಗೆ ಜಾಮೀನು ಕೊಡಿಸಲು ಮುಂದಾಗಿದ್ದರೆಂದೂ ಹೇಳಲಾಗುತ್ತಿದೆ. ಇವೇನೇ ಇರಲಿ, ವೀರಪ್ಪನ್ ಹಾಗೂ ತಂಡದ ವಿರುದ್ಧ ನಿಷ್ಠುರ ಕಾರ್ಯಾಚರಣೆ ಆಗಲೇಬೇಕು. ಇದಕ್ಕೆ ಅತ್ಯಗತ್ಯವಾಗಿರುವುದು ರಾಜಕೀಯ, ಆಡಳಿತಾತ್ಮಕ ದೃಢನಿರ್ಧಾರ. ಬದಲಾಗಿ ವೀರಪ್ಪನ್ ಅಥವಾ ಅಂತಹವರು ಆಳುವವರ ಸೃಷ್ಟಿಯಾಗಿ, ಅವರ ಅತ್ಯಗತ್ಯ ಪೂರೈಸುವವರಾಗಿ ಇರುವ ಸ್ಥಿತಿ ಮುಂದುವರಿದರೆ ಇದು ಅಸಾಧ್ಯವಾದೀತು. ಆದ್ದರಿಂದ ನಾಡಿನ, ಜನತೆಯ ಹಿತಾಸಕ್ತಿಯಿಂದ ಯಶಸ್ವಿ ಒಗ್ಗಟ್ಟಿನ ಕಾರ್ಯಾಚರಣೆ ನಡೆಯಬೇಕು.

ಖಾಸಗಿ ಧಣಿಗಳ ಮಡಿಲಿಗೆ ಪ್ರಾಥಮಿಕ ಶಿಕ್ಷಣ

ಮನಬಂದಂತೆ ಶುಲ್ಕ ಹಾಗೂ ಡೊನೇಶನ್ ಸುಲಿಗೆ ಮಾಡಲು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಮುಕ್ತ ಅವಕಾಶ ಕಲ್ಪಿಸಿರುವ ಕೃಷ್ಣರ ಸರ್ಕಾರ ಈಗ ಪ್ರಾಥಮಿಕ ಶಿಕ್ಷಣದ ಹೊಣೆಯನ್ನು ಉಳ್ಳವರ ಮಡಿಲಿಗೆ ಹಾಕುವ ನಿರ್ಧಾರ ಕೈಗೊಂಡಿದೆ.

ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವುದು ಮತ್ತು ಶಾಲೆಯಿಂದ ಹೊರಗೆ ಇಳಿದಿರುವ ಸುಮಾರು 12 ಲಕ್ಷ ಮಕ್ಕಳನ್ನು ಮತ್ತೆ ಶಾಲೆಗೆ ಸೇರಿಸಲು 'ವಿಪ್ರೊ' ಕಂಪನಿಯ ಮಾಲೀಕ ಅಜಿಂ ಪ್ರೇಮ್‌ಜಿ ಜೊತೆಗೆ ಕೃಷ್ಣವರು ಒಪ್ಪಂದ ಮಾಡಿಕೊಂಡಿದ್ದಾರೆ.

ಪ್ರಾಥಮಿಕ ಶಿಕ್ಷಣದ ಬಗ್ಗೆ ಅಪಾರ ಕಳಕಳಿ ವ್ಯಕ್ತಪಡಿಸಿರುವ ಮುಖ್ಯಮಂತ್ರಿಗಳು ಉನ್ನತ ಶಿಕ್ಷಣಕ್ಕೆ ಶೇ 15 ರಷ್ಟು ಹಣ ಕಡಿತ ಮಾಡಿ, ಪ್ರಾಥಮಿಕ ಶಿಕ್ಷಣಕ್ಕೆ ನೀಡಬೇಕೆಂದಿತ್ತೆಂದೂ ಅಲ್ಲಿ ಪ್ರತಿಭಟನೆ ಬಂದು ಸಾಧ್ಯವಾಗಲಿಲ್ಲವೆಂದು ಕೊರಗಿದ್ದಾರೆ! ಪ್ರಾಥಮಿಕ ಶಿಕ್ಷಣವನ್ನು ಉನ್ನತ ಶಿಕ್ಷಣಕ್ಕೆದುರಾಗಿ ನೋಡುವುದೇ ಖಂಡನಾರ್ಹ. ಉನ್ನತ ಶಿಕ್ಷಣಕ್ಕೆ ಕಡಿತವೆಂದರೆ ಈಗಾಗಲೇ ಇರುವ ದುಬಾರಿ ಶಿಕ್ಷಣ ಶುಲ್ಕಗಳ ಹೊರೆ ಇನ್ನೂ ಹೆಚ್ಚಿಸುವುದು ಎಂದರ್ಥ. ಶಿಕ್ಷಣದ ಬಗ್ಗೆ ಕಾಳಜಿ ಇರುವ ಕೃಷ್ಣ ಮಾಹಿತಿ ತಂತ್ರಜ್ಞಾನ, ಸಾರಾಯಿ ಲಾಬಿಗಳಿಗೆ ಸಾವಿರಾರು ಕೋಟಿ ದಾನ ನೀಡುವ ಬದಲು ಬಜೆಟ್‌ನಲ್ಲಿ ಹೆಚ್ಚಿನ ಹಣ ಮೀಸಲಿಡಬಹುದಿತ್ತಲ್ಲ.

ಖಾಸಗಿಯವರಿಗೆ ಶಿಕ್ಷಣದ ಹೊಣೆ ಹೊರಿಸುವುದು ಅತ್ಯಂತ ಅಪಾಯಕಾರಿಯಾದುದು.

ಖಾಸಗಿ ಕಂಪನಿಗಳಿಗೆ ರಕ್ಷಣಾ ಕ್ಷೇತ್ರ ನೀಡಿಕೆ ಕಾರ್ಮಿಕಕಾನೂನು ತಿದ್ದುಪಡಿಗಳಿಗೆ ಪ್ರತಿಭಟಿಸಲು ಕರೆ

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈಗಿರುವ ಕಾರ್ಮಿಕ ಕಾನೂನುಗಳನ್ನು ಕೈಬಿಟ್ಟು, ಕಾರ್ಮಿಕ ವಿರೋಧಿ ಮತ್ತು ಮಾಲಕರ ಪರವಾದ ಕಾನೂನುಗಳನ್ನು ತರಲು ಹೊರಟಿದೆ.

ಕೇಂದ್ರ ಮುಂಗಡ ಪತ್ರವನ್ನು ಮಂಡಿಸಿದಾಗ ಹಾಗೂ ಇತ್ತೀಚಿಗೆ 37ನೇ ಭಾರತ ಕಾರ್ಮಿಕ ಕಾನ್ಫರೆನ್ಸ್ ಸೇರಿದಾಗಲೂ ಕೇಂದ್ರ ಸರ್ಕಾರ ಕಾರ್ಮಿಕ ಕಾನೂನುಗಳನ್ನು ಬುಡಮೇಲು ಮಾಡಿ ಉದ್ದಿಮೆ ಪರವಾದ ಕಾನೂನುಗಳನ್ನು ಜಾರಿಗೆ ತರುವ ತನ್ನ ಉದ್ದೇಶವನ್ನು ಪ್ರಕಟಿಸಿದೆ.

ಖಾಸಗೀಕರಣದ ಹುಚ್ಚು ಸಾಹಸವನ್ನು ಮುಂದುವರಿಸುತ್ತಿರುವ ಕೇಂದ್ರ ಸರ್ಕಾರವು ರಕ್ಷಣ ಕೈಗಾರಿಕೆಗಳನ್ನು ಸಹಾ ಖಾಸಗೀಕರಣಗೊಳಿಸಲು ಹೊರಟಿದ್ದು, ಅದನ್ನು ಬಿಜೆಪಿ ಪರವಾಗಿರುವ ಬಿಎಂಎಸ್ ಸಂಘಟನೆಯೂ ಸಹ ವಿರೋಧಿಸಿದೆ. ಇದರ ವಿರುದ್ಧವಾಗಿ ರಕ್ಷಣಾ ಸಾಮಗ್ರಿ ಉತ್ಪಾದಿಸುವ ಸಾರ್ವಜನಿಕ ಕ್ಷೇತ್ರಗಳಿರುವ ಬೆಂಗಳೂರು ಮತ್ತು ಕೆಜಿಎಫ್‌ನಲ್ಲಿ ತೀವ್ರತರ ಪ್ರಚಾರಾಂದೋಲನ, ಬಹಿರಂಗ ಸಭೆ ನಡೆಸಲು ಇತ್ತೀಚಿಗೆ ಸೇರಿದ್ದ ಸಿಪಿಐ(ಎಂ) ರಾಜ್ಯ ಸಮಿತಿ ಸಭೆ ನಿರ್ಧರಿಸಿದೆ

ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ಕ್ರಮಗಳನ್ನು ತಡೆಯಲು ಬಿಎಂಎಸ್ ಮತ್ತು ಐಎನ್‌ಟಿಯುಸಿ ಒಳಗೊಂಡಂತೆ ಎಲ್ಲಾ ಕೇಂದ್ರ ಕಾರ್ಮಿಕ ಸಂಘಗಳು, ಸಿಐಟಿಯು ಮತ್ತಿತರ ಎಡ ಕೇಂದ್ರ ಕಾರ್ಮಿಕ ಸಂಘಟನೆಗಳು ಬಹಿರಂಗವಾಗಿ ದೇಶವ್ಯಾಪಿ ಹೋರಾಟಕ್ಕೆ ಇಳಿಯಲು ಮುಂದೆ ಬಂದಿರುವುದು ಒಂದು ಸ್ವಾಗತಾರ್ಹ ಬೆಳವಣಿಗೆ.

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯು ಈ ಬೆಳವಣಿಗೆಯನ್ನು ಸ್ವಾಗತಿಸುತ್ತದೆ. ಈ ಜಂಟಿ ಹೋರಾಟದ ಅಂಗವಾಗಿ ಏರ್ಪಡಿಸಲಾಗುವ ಜಂಟಿ ಸಮಾವೇಶಗಳನ್ನು ಸಾರ್ವಜನಿಕ ಸಭೆಗಳನ್ನು ಯಶಸ್ವಿಗೊಳಿಸಬೇಕೆಂದು ಹಾಗೂ ಸಾರ್ವಜನಿಕರ ನಡುವೆ ವ್ಯಾಪಕ ಪ್ರಚಾರಾಂದೋಲನ ನಡೆಸಬೇಕಾಗಿದೆ.

ಕೇಂದ್ರ ಸರಕಾರವು ಇಂತಹ ಕಾರ್ಮಿಕ ವಿರೋಧಿ ಕ್ರಮಗಳನ್ನು ಮುಂದುವರಿಸುತ್ತಿರುವಾಗಲೇ ರಾಜ್ಯ ಸರಕಾರವು ಕಾರ್ಮಿಕ ವಿರೋಧಿ ನೀತಿಗಳನ್ನು ಜಾರಿಗೆ ತರುವುದರ ವಿಷಯದಲ್ಲಿ ಕೇಂದ್ರ ಸರಕಾರವನ್ನು ಮೀರಲು ಪ್ರಯತ್ನಿಸುತ್ತಿರುವುದು ಕಂಡುಬರುತ್ತದೆ.

ಇದರ ಅಂಗವಾಗಿ ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ಕಾರ್ಮಿಕ ಕಾನೂನುಗಳನ್ನು ರದ್ದುಗೊಳಿಸಲು ನಿರ್ಧರಿಸಿದೆ. ಪ್ರಸಕ್ತ ಕಾರ್ಮಿಕ ಕಾನೂನುಗಳ ಬದಲಾಗಿ ಒಂದು ಕಾನೂನನ್ನು ಜಾರಿಗೆ ತಂದು ಕಾರ್ಮಿಕರ ಸಂವಿಧಾನಬದ್ಧ ಹಕ್ಕುಗಳನ್ನು ಕಿತ್ತುಕೊಳ್ಳಲು ಹೊರಟಿದೆ. ಎಲ್ಲಾ ಕಾರ್ಮಿಕ ಸಂಬಂಧಿ ವಿಚಾರಗಳನ್ನು ಕೈಗಾರಿಕೆ ಮತ್ತೆ ವಾಣಿಜ್ಯ ಇಲಾಖೆಯ ಅಡಿಯಲ್ಲಿ ಉದ್ಯೋಗ ಮಿತ್ರ ಎಂಬ ಏಕಗವಾಕ್ಷಿ ಮೂಲಕ ಇತ್ಯರ್ಥಪಡಿಸುವುದು ಸರಕಾರದ ಉದ್ದೇಶವಾಗಿದ್ದು, ಇದರಿಂದಾಗಿ ಕಾರ್ಮಿಕ ಇಲಾಖೆಯು ಅಧಿಕ ಜವಾಬ್ದಾರಿಗಳನ್ನು ಕಳೆದುಕೊಳ್ಳಲಿದೆ.

ಈಗಿರುವ ಬಹುತೇಕ ಕಾರ್ಮಿಕ ಕಾನೂನುಗಳು ಜಾರಿಯಾಗದೇ ಕಾರ್ಮಿಕರ ಬಹುದೊಡ್ಡ ವಿಭಾಗ ಮುಖ್ಯವಾಗಿ ಅಸಂಘಟಿತ ಕಾರ್ಮಿಕ ವಿಭಾಗ, ಈ ಕಾನೂನುಗಳ ಕನಿಷ್ಠ ಸೌಲಭ್ಯಗಳನ್ನು ಸಹಾ ಪಡೆಯುವಲ್ಲಿ ವಂಚಿತರಾಗಿರುತ್ತಾರೆ.

ಕಾರ್ಮಿಕ ಕಾನೂನುಗಳ ಜಾರಿಗಾಗಿ, ಈ ಕಾರ್ಮಿಕ ವಿಭಾಗಗಳನ್ನು ಸಕ್ರಿಯಗೊಳಿಸುವುದು ಅಗತ್ಯವಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿಮಾಡಲು ಹಾಗೂ ಕಡಿತಮಾಡಲು ಹೊರಟಿರುವುದರಲ್ಲಿ ಇರುವ ಮೋಸವನ್ನು ಜನತೆ ಅರ್ಥಮಾಡಿಕೊಳ್ಳಬೇಕೆಂದು ಹಾಗೂ ಸರಕಾರಗಳ ಈ ಕ್ರಮಗಳನ್ನು ತಡೆಯಲು ಕಾರ್ಮಿಕರ ಜತೆಯಲ್ಲಿ ವ್ಯಾಪಕ ಚಳುವಳಿಗೆ ಮುಂದಾಗಬೇಕು.

ಪುನಶ್ಚೇತನದತ್ತ ಬಂಡಾಯ ಸಾಹಿತ್ಯ ಸಂಘಟನೆ

ಬಂಡಾಯಸಾಹಿತ್ಯ ಚಳುವಳಿಯನ್ನು ಮತ್ತೆ ಪುನಶ್ಚೇತನಗೊಳಿಸುವ ಪ್ರಯತ್ನದ ಭಾಗವಾಗಿ ರಾಜ್ಯಮಟ್ಟದ ಚಿಂತನಾ ಸಭೆ ಇತ್ತೀಚೆಗೆ ಬೆಂಗಳೂರಿನಲ್ಲಿ (ಜೂನ್ ೧೦) ಜರುಗಿತು. ಇದೊಂದು ಉತ್ಸಾಹದಾಯಕ ಸಭೆ ಕೇವಲ ಚಿಂತನೆಗಷ್ಟೇ ಸೀಮಿತಗೊಳ್ಳದೆ ಕ್ರಿಯಾಶೀಲರಾಗಿ ಜನರನಡುವೆ ತೊಡಗಿಕೊಳ್ಳುವ ರೂಪುರೇಷೆಗಳನ್ನು ನಿರ್ಧರಿಸಿದೆ.

ಬಂಡಾಯ ಸಾಹಿತ್ಯ ಚಳುವಳಿ ಮತ್ತೆ ಕ್ರಿಯಾಶೀಲವಾಗಬೇಕಾದ ಕೆಲವು ಸಂದರ್ಭಗಳನ್ನು ಲೇಖಕರಾದ ಡಾ. ಆರ್.ವಿ. ಭಂಡಾರಿಯವರು ಇಲ್ಲಿ ವಿವರಿಸಿದ್ದಾರೆ.

1980 ನೇ ದಶಕವೆಂದರೆ ಒಂದು ಬಗೆಯ ಜಾಗೃತಿಯ ದಶಕ ಎನ್ನಬಹುದು. ರೈತ ಚಳುವಳಿ, ಕಾರ್ಮಿಕ ಚಳುವಳಿ, ದಲಿತ ಚಳುವಳಿ, ರಾಜಕೀಯ ಚಳುವಳಿಯೇ ಮೊದಲಾದವು ಕಾಣಿಸಿಕೊಂಡ ದಶಕ. ಅದೇ ಹೊತ್ತಿಗೆ 'ಬಂಡಾಯ ಸಾಹಿತ್ಯ' ಸಂಘಟನೆ ಹುಟ್ಟಿಕೊಂಡಿತು. ಅದು ದೃಶ್ಯಾತ್ಮಕವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಪಟ್ಟಭದ್ರ ಹಿತಾಸಕ್ತರ ವಿರುದ್ಧವೂ, ನವ್ಯ ಸಾಹಿತ್ಯ ಪರಂಪರೆ ಪ್ರತಿಭಟನಾತ್ಮಕವೂ ಹುಟ್ಟಿತೆಂಬಂತೆ ಕಾಣಬಹುದಾದರೂ ಆ ದಶಕದ ಸಾಮಾಜಿಕ ಸಂಚಲನೆಯ ಒಳ ಒತ್ತಡದಿಂದಲೇ ಹುಟ್ಟಿಬಂದುದು ಅದರ ನಿಜ ಸ್ವರೂಪವಾಗಿದೆ.

ಜನಪರ ಆಂದೋಲನ

ಹಾಗೆ ಹುಟ್ಟಿಕೊಂಡ ಬಂಡಾಯ ಸಾಹಿತ್ಯ ಸಂಘಟನೆ ಕೇವಲ ಸಾಹಿತ್ಯ ನಿರ್ಮಿತಿಯ ಜನಪರ ಕಾಳಜಿಯನ್ನೊಳಗೊಂಡಿದ್ದಾಗಿರದೆ ಇಡಿಯಾಗೇ ಜನಪರವಾದ ಸಾಂಸ್ಕೃತಿಕ, ಕಾಳಜಿಯ ಅಭಿವ್ಯಕ್ತಿಯಾಗಿ ಮುಂದುವರಿಯಿತು. "ಶೋಷಿತ ಜನತೆಯ ಪರವಾದ ನಿಲುವುಗಳನ್ನು ಸಾಂಸ್ಕೃತಿಕ ಕ್ಷೇತ್ರದಲ್ಲಿ ಭದ್ರವಾಗಿ ನೆಲೆಗೊಳಿಸುವುದು ನಮ್ಮ ಮುಖ್ಯ ಗುಂಪುಗಳಲ್ಲೊಂದಾಗಿರಬೇಕು. ನಮ್ಮ ಹೋರಾಟ ಪ್ರಧಾನವಾಗಿ ಸಾಂಸ್ಕೃತಿಕ ಕ್ಷೇತ್ರಕ್ಕೆ ಸಂಬಂಧಿಸಿದ್ದು. ದೇಶದ ರಾಜಕೀಯ ಮತ್ತು ಸಾಂಸ್ಕೃತಿಕ ಸಂದರ್ಭಗಳು ಪರಸ್ಪರ ಸಂಬಂಧ ಉಳ್ಳವು ಎಂಬ ನಿಲುವಿನಿಂದ ಹೊರಟಿದ್ದು. ಸಾಹಿತಿಗೆ ಸಾಮಾಜಿಕ, ರಾಜಕೀಯ ಪ್ರಜ್ಞೆ ಇರಬೇಕೆಂಬ ಆಶಯ ಇಲ್ಲಿ ಮುಖ್ಯವಾದದ್ದು. ಅಸ್ಪೃಶ್ಯತೆ, ಜಾತಿ ಪದ್ಧತಿ ಮತ್ತು ಲಿಂಗಬೇಧ ನೀತಿಯ ವಿರುದ್ಧ ಹೋರಾಟವನ್ನು ಕಟ್ಟುವುದು ನಮ್ಮ ಉದ್ದೇಶಗಳಲ್ಲಿ ಒಂದು. ಎಲ್ಲಾ ಜನಪರ ನಿಲುವುಗಳಿಗೆ ನಮ್ಮ ಬೆಂಬಲ. ಜನಪರವಾದ ಸಾಂಸ್ಕೃತಿಕ ಹೋರಾಟ ನಮ್ಮ ಮುಖ್ಯ ನೆಲೆ. ಇಂಥ ಒಲವಿನ ಸಾಹಿತ್ಯ ಸೃಷ್ಟಿ ಹೋರಾಟದ ಮುಖ್ಯ ದಾಖಲೆ" (ಬಂಡಾಯ ಸಾಹಿತ್ಯ ಸಂಘಟನೆ ಪ್ರಣಾಳಿಕೆ ಮತ್ತು ಸಂವಿಧಾನ 1982) ಹೀಗೆ ಹೊರಟ ಸಂಘಟನೆ ಒಂದು ಆಂದೋಲನದಂತೆ ಕೆಲಸ ಮಾಡಿತು. ವ್ಯಕ್ತಿ ಕೇಂದ್ರಿತವಾದ ಸಾಂಸ್ಕೃತಿಕ ನಿಲುವನ್ನು ಸಮೂಹ ಕೇಂದ್ರಿತ(ಮಾನವೀಯ ಕೇಂದ್ರಿತ) ನಿಲುವನ್ನಾಗಿ ಮಾರ್ಪಡಿಸುವುದರಲ್ಲಿ ಗಣನೀಯವಾಗಿ ಶ್ರಮಿಸಿತು. ಮತ್ತು ಅದು ತನ್ನ ಪ್ರಭಾವವನ್ನು ಕಿರಿಯರ ಮೇಲಷ್ಟೇ ಅಲ್ಲ ಹಿರಿಯ ಲೇಖಕರು ಸಹ ತಿದ್ದಿಕೊಳ್ಳುವಂತೆ ಆದುದಕ್ಕೆ ಎಂಬತ್ತರ ದಶಕದ ನಂತರದ ಸಾಹಿತ್ಯ ಸಾಕ್ಷಿಯಾಗಿದೆ.

ವಸ್ತುನಿಷ್ಠ ವಿಮರ್ಶೆ ಅಗತ್ಯತೆ

ಈ ಪರಿವರ್ತನೆಯೊಡನೆ ಬಂಡಾಯ ಸಾಹಿತ್ಯ ಸಂಘಟನೆಯ ಮೊದಲಿನ ಹೋರಾಟದ ಕಾವು ಮಂದಗೊಳ್ಳುತ್ತ ಬಂದು, ಅದು ಸ್ಥಗಿತಗೊಂಡಿದೆ ಎಂಬಂಥ ಸ್ಥಿತಿಗೆ ಬಂತು. ಇದಕ್ಕೆ ಅನೇಕ ಕಾರಣಗಳನ್ನು ಹೇಳಲಾಗುತ್ತದೆ. ಇವುಗಳಲ್ಲಿ ಮುಖ್ಯವಾದುದು-ಮುಂದಾಳುಗಳು ನಿಷ್ಕ್ರಿಯರಾದರು ಮತ್ತು ಸರಕಾರದೊಡನೆ ರಾಜಿಯಾಗಿ ಅಧಿಕಾರ ಸ್ಥಾನ ಪಡೆದರು, ಹೀಗಾಗಿ ಸಂಘಟನೆ ಸ್ಥಗಿತವಾಯಿತು ಎಂಬುದು. ಈ ಹೇಳಿಕೆ ಅಥವಾ ವಿಮರ್ಶೆಯ ರೀತಿ ಬಂಡಾಯ ಪ್ರಣಾಳಿಕೆಗೆ ವಿರುದ್ಧವಾದ ವ್ಯಕ್ತಿಕೇಂದ್ರಿತ ನಿಲುವಿನಿಂದ ಹೊರಟದ್ದು. ಮೇಲು ಪದರಿನಲ್ಲಿ ಹೀಗೆ ಕಾಣಲು ಸಾಧ್ಯವಾದರೂ ಇದು ವಸ್ತುನಿಷ್ಠ ವಿವರಣೆ-ವಿಶ್ಲೇಷಣೆ ಆಗುವುದಿಲ್ಲ. ಸಾಂಸ್ಕೃತಿಕ ಸಂದರ್ಭಕ್ಕೂ ರಾಜಕೀಯ ಸಂದರ್ಭಕ್ಕೂ ಇರುವ ಸೂಕ್ಷ್ಮ ಸಂಬಂಧದ ವಿಶ್ಲೇಷಣೆ ಬೇಕಾಗುತ್ತದೆ. ಅದರಂತೆ ಸಂಘಟನೆ ವ್ಯಕ್ತಿಕೇಂದ್ರಿತ ನಿಲುವು ಹೊಂದಿದ್ದಾಗಿರಲಿಲ್ಲ ಎಂಬುದೂ ಮುಖ್ಯ. ಒಂದು ವೇಳೆ ಈ ರೀತಿ ವಿವರಿಸುವುದಾದರೂ ಉಳಿದವರಲ್ಲಿ ಕ್ರಿಯಾಶೀಲತೆ ಇದ್ದಿರಲಿಲ್ಲವೇ? ಅವರಿಗೆ ಮುಂದಾಳ್ತನ ನೀಡಲು ಏನು ಅಡ್ಡಿ ಇತ್ತು ಎಂಬುದನ್ನು ಗಮನಿಸಬೇಕಾಗುತ್ತದೆ. ಇದರೊಟ್ಟಿಗೆ ನೇತಾರರಿಗೆ ಅವರದೇ ಆದ ಸಾಮರ್ಥ್ಯ, ಪ್ರಭಾವ ಇರುವುದರಿಂದ ಅವರು ತನಗೆ ತಾನಾಗೇ ತೆಗೆದುಕೊಳ್ಳಬೇಕಾದ ಜವಾಬ್ದಾರಿ, ನಡವಳಿಕೆಯ ಬಗ್ಗೆ ಗಂಭೀರವಾದ ನಿಲುವು ಇರಬೇಕಾಗಿರುವುದು ಅಪೇಕ್ಷಣೀಯವೆ.

ಅದೇನೇ ಇದ್ದರೂ ಅದರ ವಿವರಣೆ ಇಲ್ಲಿಯ ಉದ್ದೇಶವಲ್ಲ. ಆದರೆ 2001 ಜೂನ್ 10 ರಂದು ಬೆಂಗಳೂರಿನಲ್ಲಿ 'ಬಂಡಾಯ ಸಾಹಿತ್ಯ ಸಂಘಟನೆ'ಯ ಪುನಶ್ಚೇತನದ ಸಭೆ ನಡೆದ ಹಿನ್ನೆಲೆಯಲ್ಲಿ ಮತ್ತೆ ಸಂಘಟನೆಯ ಅವಶ್ಯಕತೆ ಯಾಕೆ ಎನ್ನುವುದು ಒಂದು ಧನಾತ್ಮಕವಾದ ಅವಲೋಕನ ಇಲ್ಲಿಯ ಉದ್ದೇಶ.

ಬಂ.ಸಾ.ಸಂ.ಎಲ್ಲಾ ಎಡಪಂಥೀಯ ಸಾಂಸ್ಕೃತಿಕ ಆಶಯ ಹೊಂದಿದ ಸಂಘಟನೆ ಎಂಬುದು ಮುಖ್ಯವಾದುದು. ಅಲ್ಲದೆ ಅದು ದೇಶದ ರಾಜಕೀಯ ಪರಿಸ್ಥಿತಿ ಹಾಗೂ ಜನ ಚಳುವಳಿಯೊಡನೆ ಸಂಬಂಧ ಉಳ್ಳದ್ದು ಎಂಬುದೂ ಬಹಳ ಮಹತ್ವದ್ದು. ಆದ್ದರಿಂದ ಇಂದಿನ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧ ಎಂತಹದು ಎಂಬುದು ಮತ್ತು ಅದು ಕೇವಲ ಕವಿ ಕಲಾವಿದರಿಗೆ ಮಾತ್ರ ಸಂಬಂಧಿಸಿದ್ದು ಎನ್ನುವುದಾಗಿರದೆ ಜನಪರ ಕಾಳಜಿಯ ಎಲ್ಲಾ ಬುದ್ಧಿಜೀವಿಗಳ, ಅವರು ಯಾವುದೇ ಸೈದ್ಧಾಂತಿಕ ಹಿನ್ನೆಲೆಯವರಾಗಿದ್ದರೂ ಅವರ ಜವಾಬ್ದಾರಿಗೆ ಸಂಬಂಧಿಸಿದ್ದು ಆಗಿರಬೇಕಾದುದು ಇಂದಿನ ಸಂದರ್ಭದ ಒತ್ತಾಯವಾಗಿದೆ.

ಉಲ್ಬಣಗೊಂಡ ಕೋಮುವಾದ

ಇಂದು ನಮ್ಮೆದುರು ಕೋಮುವಾದ ಪೆಡಂಭೂತದ ಹಾಗೆ ಎದ್ದು ನಿಂತಿದೆ ಎಂಬುದನ್ನು ಗಮನಿಸಬೇಕು. ಈ ಕೋಮುವಾದಕ್ಕೆ ರಾಜಕೀಯ ಬೆಳವಣಿಗೆಗೂ ಇರುವ ಒಳ ಸಂಬಂಧವನ್ನು ಹೀಗೆ ವಿವರಿಸಲಾಗುತ್ತದೆ. 'ರಾಜಕೀಯ ಅಧಿಕಾರಕ್ಕಾಗಿ ಒಂದು ಧರ್ಮದ ಅನುಯಾಯಿಗಳನ್ನು ಇನ್ನೊಂದು ಧರ್ಮದ ವಿರುದ್ಧ ಎತ್ತಿ ಕಟ್ಟುವುದು ಮತ್ತು ಬಹುಸಂಖ್ಯಾತರ ಸಂಸ್ಕೃತಿಗೆ ಅಲ್ಪಸಂಖ್ಯಾತರು ಹೊರಗಿನವರು ಎಂದು ವಾದಿಸಿ ಅವರ ಬಗ್ಗೆ ದ್ವೇಷ ತಿರಸ್ಕಾರಗಳನ್ನು ಬೆಳೆಸುವುದು ಕೋಮುವಾದ' (ಜಿ.ರಾಜಶೇಖರ ಮತ್ತು ಕೆ.ಫಣಿರಾಜ; ಮತ್ತು ಫಕೀರ ಮಹಮ್ಮದ್ ಕಟ್ಪಾಡಿ; ಕೋಮುವಾದದ ರಾಜಕೀಯ-2000) ಇದು ಬಾಬ್ರಿ ಮಸೀದಿ ವಿಧ್ವಂಸದಲ್ಲಿ ಒಂದು ರಾಜಕೀಯ ಸಾಧನೆಯ ಹಂತಕ್ಕೆ ತಳ್ಳಲ್ಪಟ್ಟಿದೆ. ಇದರಿಂದ ಕೇಂದ್ರ ಸರ್ಕಾರದಲ್ಲಿ ಅಧಿಕಾರವನ್ನು ಹಿಡಿವ ಸಂಘಪರಿವಾರದ ಬೆಂಬಲಿತ ಬಿಜೆಪಿ ಇನ್ನೊಂದು ನೆಲೆಯಲ್ಲಿ ಮುಖ್ಯವಾಗಿ ಸಾಂಸ್ಕೃತಿಕ ನೆಲೆಯಲ್ಲಿ ತನ್ನ ಉದ್ದೇಶಿತ ವಿಷಯವನ್ನು 'ಹಿಂದುತ್ವ' ಎನ್ನುವುದರ ಮುಖಾಂತರ ಹಂಚುತ್ತಿದೆ. ಅಥವಾ ಆರ್.ಎಸ್.ಎಸ್., ವಿಶ್ವ ಹಿಂದು ಪರಿಷತ್, ಶಿವಸೇನೆಯೇ ಮೊದಲಾದ ಕೋಮುವಾದಿ ಮತ್ತು ಮೂಲಭೂತವಾದಿ ಸಂಘಟನೆ ಬಿಜೆಪಿಯ ರಾಜಾಶ್ರಯದಲ್ಲಿ ಈ ಕೆಲಸವನ್ನು ಮುಂದುವರಿಸುತ್ತಿದೆ.

ಹಿಂದುತ್ವದ ಹೂಂಕಾರ

'ಹಿಂದುತ್ವ' ಈಗ ಕೇವಲ ನಗರದ ಸಮಸ್ಯೆಯಾಗಿರದೆ ಈ ನಗರಗಳ ಬೇರುಗಳಂತಿರುವ ಹಳ್ಳಿಯನ್ನು ವ್ಯಾಪಕವಾಗಿ ಪ್ರವೇಶಿಸಿದೆ. ಉದಾಹರಣೆಗೆ ನನ್ನ ಊರಿನ ವಿದ್ಯಮಾನ ಸಾಕ್ಷಿ. ನನ್ನ ಊರು ಒಂದು ಹಳ್ಳಿ. ಇಲ್ಲಿ ಬ್ರಾಹ್ಮಣ, ನಾಮಧಾರಿ, ಭಂಡಾರಿ, ಗೌಡ, ಶೆಟ್ಟಿ ಇತ್ಯಾದಿ ಜನರಿದ್ದಾರೆ. ಗುಡ್ಡ ಬೆಟ್ಟಗಳಿಂದ ಕೂಡಿದ ಹಳ್ಳಿ. ಇಲ್ಲಿ ಈಗ ಆರ್.ಎಸ್.ಎಸ್.ನ ಸ್ವಯಂ ಸೇವಕರ ಪ್ರವೇಶವಾಗಿದೆ. ಪ್ರತಿ ಜನವಸತಿಯಲ್ಲಿ ಕ್ಲಾಸು, ಕವಾಯತು ಶುರುವಾಗಿದೆ. ಈಗ ಅದು ಬ್ರಾಹ್ಮಣರನ್ನು ಮಾತ್ರ ತೆಕ್ಕೆಗೆ ತೆಗೆದುಕೊಂಡಿಲ್ಲ. ಶೂದ್ರ ಸಮುದಾಯವೆಲ್ಲವನ್ನು ತೆಗೆದುಕೊಂಡಿದೆ. 1925 ರಲ್ಲಿ ಮಹಾರಾಷ್ಟ್ರದಲ್ಲಿ ಆರ್.ಎಸ್.ಎಸ್. ಪ್ರಾರಂಭವಾದಾಗ ಅಲ್ಲಿ ಬ್ರಾಹ್ಮಣವಿರೋಧಿ ಚಳುವಳಿ ಪ್ರಬಲವಾಗಿ ನಡೆಯುತ್ತಿತ್ತು. "ಕೆಳ ಜಾತಿಗಳವರು ಮೇಲು ಜಾತಿಗಳ ವಿರುದ್ಧ ತಿರುಗಿಬೀಳುವುದನ್ನು ನೋಡಿದರೆ ಮುಸ್ಲಿಮ್ ವಿಷಸರ್ಪಗಳನ್ನು ಸವರಿ ಹಾಕಲಿಕ್ಕೆ ಕೆಳಜಾತಿಯವರ ಸಹಕಾರ ನಿರೀಕ್ಷಿಸುವ ಹಾಗಿಲ್ಲ. ಈ ಕಾರಣದಿಂದ ನಾವು ಯಾರನ್ನೂ ನಂಬಿ ಕೂರದೆ ಸ್ವಂತದ ತಯಾರಿ ಮಾಡಿಕೊಳ್ಳಬೇಕಾಗಿದೆ" ಎಂದು ಆರ್‌ಎಸ್‌ಎಸ್‌ನ ಇನ್ನೊಬ್ಬ ಸ್ಥಾಪಕ ನೇತಾರ ಕೆ.ಬಿ.ಹೆಡ್ಗೇವಾರ ಹೇಳಿದ್ದರು (ಪೂರ್ವೋಕ್ತ ಪು. 13) ಅಂದರೆ ಪ್ರಾರಂಭದಲ್ಲಿ ಈ ಆರ್‌ಎಸ್‌ಎಸ್ ಪೂರ್ತಿಯಾಗಿ ಬ್ರಾಹ್ಮಣ ಸಂಘಟನೆಯೇ ಆಗಿ ಅಸ್ತಿತ್ವದಲ್ಲಿ ಬಂತು. ಆದರೆ ಈಗ ಅದು ಇಡೀ ಶೂದ್ರ ಸಮಾಜದಲ್ಲೂ ಭದ್ರವಾಗಿ ಕಾಲೂರುತ್ತಿದೆ. ಹಾಗಂತ ಎಲ್ಲ ಕಡೆಯ ಬ್ರಾಹ್ಮಣರು ಇದನ್ನು ಒಪ್ಪಿಕೊಂಡಿದ್ದಾರೆ ಎಂದು ತಿಳಿಯಬಾರದು. ಪರಿಸರವಾದಿ ಚಳುವಳಿ ನಮ್ಮ ಜಿಲ್ಲೆಯಲ್ಲಿ ಒಂದು ಕ್ರಿಯಾಶೀಲ ಚಳುವಳಿ. ಅದು ಸ್ವಾಗತಾರ್ಹವಾದುದು ಕೂಡ ಹೌದು. ಇಲ್ಲಿಯ ಒಬ್ಬ ಸ್ವಾಮೀಜಿ ಪರಿಸರ ಸ್ವಾಮೀಜಿ ಎಂದೇ ಹೆಸರಾಗಿದ್ದಾರೆ. ಸಂಸ್ಕೃತ ತಿಳಿದವರು ಸುಸಂಸ್ಕೃತರು. ವೇದದಲ್ಲೇ ಭಾರತೀಯ ಸಂಸ್ಕೃತಿ ಇರುವುದು, ಇತ್ಯಾದಿ ಅವರ ಮಾತುಗಳನ್ನು ಸಂಸ್ಕೃತ ಶಿಬಿರವೇ ಮೊದಲಾದ ಚಟುವಟಿಕೆಯನ್ನು ನೋಡಿದರೆ ಅವರ ಹಿಂದೆ 'ಹಿಂದುತ್ವ' ಹೆಪ್ಪುಗಟ್ಟಿರುವುದನ್ನು ನೋಡಬಹುದು. ಇದು ಎಂತಹ ಸೂಕ್ಷ್ಮವೆಂದರೆ ಪರಿಸರ ಸಂರಕ್ಷಣೆಯ ಬಗೆಗಿನ ಅವರ ಕಾಳಜಿ ಗೌರವಾರ್ಹವಾದುದು. ಆದರೆ 'ಹಿಂದುತ್ವ' ದ ಪ್ರತಿಗಾಮಿತನದ ಅಪಾಯವನ್ನು ಕಡೆಗಣಿಸಲಾಗದು. ಇಂಥ ಸಂಬಂಧಗಳ ಅಪಾಯದ ಸೂಕ್ಷ್ಮತೆ ಗೋಚರವಾಗುವಂತಹದ್ದಲ್ಲ.

ಸಾಂಸ್ಕೃತಿಕ ಕೇಸರೀಕರಣ

ಈಗಾಗಲೇ ಕೇಂದ್ರ ಸರ್ಕಾರ ರೋಮಿಲಾ ಥಾಪರ್‌ರಂಥ ಜಾತ್ಯಾತೀತ ಮನೋಭಾವದ ಚರಿತ್ರಾಕಾರರನ್ನು ವಿದ್ಯಾಸಂಶೋಧನ ಇಲಾಖೆಯಿಂದ ತೆಗೆದು ಹಾಕಿದೆ. ಜ್ಯೋತಿಷ್ಯ, ಧಾರ್ಮಿಕ ಕರ್ಮಕಾಂಡವನ್ನು ವಿಶ್ವವಿದ್ಯಾಲಯದ ಪದವಿಗೆ ಅಧ್ಯಯನ ವಿಷಯವನ್ನಾಗಿ ಮಾಡಹೊರಟಿದೆ. ಅಂದರೆ ನಮ್ಮ ಅಧ್ಯಯನ ಸಂಶೋಧನೆ ಮತ್ತೆಲ್ಲ ಸಾಂಸ್ಕೃತಿಕ ಕ್ಷೇತ್ರವನ್ನು 'ಕೇಸರೀಕರಣ' ಗೊಳಿಸುವುದು ನಿಚ್ಚಳವಾಗಿದೆ. ಈಗ ಮಧುರೆಯ ಸಮೀಪದ ಕಡಲತಡಿಯಲ್ಲಿ ಗುರುತಿಸಲ್ಪಟ್ಟಿದೆ ಎನ್ನುವ ನಗರ ಸಿಂಧೂನದಿ ಸಂಸ್ಕೃತಿಗೇ ಸಂಬಂಧಿಸಿದ್ದು ಎಂದು ಮುರುಳಿ ಮನೋಹರ ಜೋಶಿ ಹೇಳಿಬಿಟ್ಟಿದ್ದಾರೆ!. ಅಂದರೆ ಅವರಿಗೆ ಆದರಿಂದ ಸಿಂಧು ಸಂಸ್ಕೃತಿ ಬೇರೆಯದಲ್ಲ, ಆರ್ಯರದ್ದೇ ಎಂದು ಸಾಧಿಸಿ(ಇದು ಆರ್ಯ ಸಂಸ್ಕೃತಿ ಎಂಬ ಗ್ರಹೀತದೊಂದಿಗೆ) ಆರ್ಯರು ಹೊರಗಿನಿಂದ ಬಂದವರಲ್ಲ, ಮುಸ್ಲಿಮರು ಹೊರಗಿನವರು ಎಂಬುದನ್ನು ಸಾಧಿಸಿ, ನಮ್ಮ ಸ್ವಾತಂತ್ರ್ಯ ಹೋರಾಟ ಹತ್ತೊಂಬತ್ತು ಮತ್ತು ಇಪ್ಪತ್ತನೇ ಶತಮಾನದ ಸಂಗತಿಯಲ್ಲ ಐದು ಸಾವಿರ ವರ್ಷದಿಂದ ಶುರುವಾದುದು ಎಂಬುದನ್ನು ಸ್ಥಾಪಿಸಬೇಕಾಗಿದೆ.

ಹೀಗೆ ಸಾಧಿಸುವ, ಹಂಚುವ ಜನಾಂಗೀಯ ದ್ವೇಷದ ಬಗ್ಗೆ ಜನ ಜಾಗೃತರಾಗಿ ಪ್ರತಿಭಟನೆಯಲ್ಲಿ ಕ್ರಿಯಾಶೀಲರಾಗದಿದ್ದರೆ ಜರ್ಮನ್‌ನಲ್ಲಿ ಹಿಟ್ಲರ್‌ನಿಂದ ಹೇಗೆ ಕೋಟ್ಯಾಂತರ ಯಹೂದಿಗಳನ್ನು ನಾಶ ಮಾಡಲು ಸಾಧ್ಯವಾಯಿತೋ ಇಲ್ಲಿಯೂ ಹಾಗೆ ಮುಸ್ಲಿಂ ಕ್ರಿಶ್ಚಿಯನ್ ಹಾಗೆಯೇ ಹಿಂದುಗಳೊಳಗೆ ದಲಿತರನ್ನೊಳಗೊಂಡು ಯಾವ ಗಡಿರೇಖೆಯಿಲ್ಲದ ಎಡಪಂಥೀಯ ಬುದ್ಧಿಜೀವಿಗಳನ್ನು ಕೊಲ್ಲಲು ಸಾಧ್ಯವಾಗುವಂತಹ ಪರಿಸ್ಥಿತಿ ಉಂಟಾಗುತ್ತದ್ದೆನ್ನುವ ರಾಜಶೇಖರ ಮತ್ತು ಫಣಿರಾಜರ ಮಾತಿನಲ್ಲಿ ಯಾವ ಅನುಮಾನವೂ ಇಲ್ಲ.

ಎರಡನೇಯ ಮಹಾ ಭೂತ ಜಾಗತಿಕ ವ್ಯಾಪಾರ ಸಂಘಟನೆ(ಡಬ್ಲ್ಯುಟಿಒ) ಮುಕ್ತ ಆರ್ಥಿಕ ನೀತಿಯ ದುಷ್ಫಲ ಈಗಲೇ ಕಾಣತೊಡಗಿದೆ. ಪ್ರತಿಯೊಂದಕ್ಕೂ ಭಾರತದ ಆರ್ಥಿಕ ನೀತಿಗೆ ಅಮೆರಿಕದ ಸಲಹೆಯನ್ನೇ ಅನುಸರಿಸುತ್ತಿದೆ. ನಮ್ಮ ರೈತರಿಗೆ ಪ್ರೋತ್ಸಾಹಧನ(ಸಬ್ಸಿಡಿ) ಕೊಡಬೇಕೆ ಬೇಡವೇ? ಕೊಟ್ಟರೆ ಎಷ್ಟು ಕೊಡಬೇಕು? ನಮ್ಮ ರೈತ ಯಾವುದನ್ನು ಬೆಳೆಯಬೇಕು? ನಾವು ಕಡ್ಡಾಯವಾಗಿ ಯಾವ ಯಾವ ಸರಕನ್ನು ವಿದೇಶಗಳಿಂದ ಕೊಳ್ಳಲೇಬೇಕು? ನಮ್ಮ ದೇಶದ ಔದ್ಯೋಗಿಕತೆಯ ರಕ್ಷಣೆಗಾಗಿ ಸುಂಕ ಹೇರಬೇಕೋ ಬೇಡವೋ? ಇತ್ಯಾದಿಗಳಿಗೆಲ್ಲಾ ನಾವು ಬಲಾಢ್ಯ ರಾಷ್ಟ್ರಗಳ ಮುಖ್ಯವಾಗಿ ಅಮೆರಿಕದ ಅನುಮತಿಯನ್ನು ಕೇಳಬೇಕಾಗಿದೆ. ಬಾಯಲ್ಲಿ ದೇಶೀಯತೆಯ ಬಗ್ಗೆ ಮಾತನಾಡುವ ಸರಕಾರ ಕೃತಿಯಲ್ಲಿ ದೇಶವನ್ನೇ ವಿದೇಶಕ್ಕೆ ಅಡ ಹಾಕಲು ಹೊರಟಿದೆ.

ಖಾಸಗೀಕರಣದಿಂದಾಗಿ, ವಿದೇಶಿ ಕಂಪನಿಯಿಂದಾಗಿ ಸರಕಾರ ಉದ್ಯೋಗ ಸೃಷ್ಟಿ ಮಾಡುವುದಿಲ್ಲ. ಹಾಗಿರುವಾಗ ಸಾಮಾಜಿಕ ನ್ಯಾಯವನ್ನು ಒದಗಿಸಿ ಕೊಡಬೇಕಾದ ಮೀಸಲಾತಿ ಎಲ್ಲಿ? ಅದೇನೇ ಇರಲಿ ನಮ್ಮ ದೇಶದ ಕಂಪನಿಗಳು ಕಾರ್ಮಿಕರನ್ನು ಹಾದಿಯ ಮೇಲೆ ಹಾಕುತ್ತಿದೆ. ಈ ಮುಕ್ತ ಆರ್ಥಿಕ ನೀತಿಯಿಂದ ರೈತರು, ಬಡವರು, ಆತ್ಮಹತ್ಯೆ ಮಾಡಿಕೊಳ್ಳತೊಡಗಿದ್ದಾರೆ. ಅಂಥ ಸಂದರ್ಭ ಇಂದಿನದು. ಲಿಂಗ ಅಸಮಾನತೆ, ಅತ್ಯಾಚಾರ, ಬಂಡವಾಳಶಾಹಿಗಳಿಂದ ಪರಿಸರ ನಾಶ, ಅಣ್ವಸ್ತ್ರಗಳ ಶೇಖರಣೆ ಇತ್ಯಾದಿಗಳಿಂದ ಪೃಥ್ವಿಯನ್ನು ಜೀವಿಗಳ ವಾಸಕ್ಕೆ ಅಸಾಧ್ಯವನ್ನಾಗಿ ಮಾಡಲಾಗುತ್ತಿದೆ.

ವಿಭಿನ್ನ ಪ್ರವೃತಿಗಳು

ಲಾಭ ಬಡುಕ ಮಾರುಕಟ್ಟೆಯೇ ಅಂತಿಮ ಎಂಬ ಗ್ರಾಹಕ ಸಂಸ್ಕೃತಿ ಮನುಷ್ಯನನ್ನು ಬಿಕಾರಿಯನ್ನಾಗಿ ಮಾಡುತ್ತದೆ. ಮನುಷ್ಯರ ಮಾನಸಿಕ ಸ್ವಾಸ್ಥ್ಯವನ್ನು ಕೆಡಿಸುತ್ತದೆ. ಇಂಥ ಸಂದರ್ಭ ಸಾಹಿತ್ಯವೆನ್ನುವುದನ್ನು ಅಸ್ವಾಸ್ಥ್ಯದ ಅಭಿವ್ಯಕ್ತಿ, ಅಸ್ತಂಗತತೆಯ ಅಭಿವ್ಯಕ್ತಿ ಮತ್ತು ವ್ಯಕ್ತಿ ಕೇಂದ್ರಿತ ಅಭಿವ್ಯಕ್ತಿಯನ್ನಾಗಿ ಮಾಡುತ್ತದೆ. ಏಟ್ಸ್ ಕವಿಯ ಒಂದು ಕವನದ ಸಾರಾಂಶ ಹೀಗಿದೆ: '144ನೇ ನಂಬರಿನ ಮನೆಯ ಮನುಷ್ಯ ಹೇಗಿದ್ದ? ಅವನು ಓದುತ್ತಿದ್ದ, ತಿನ್ನುತ್ತಿದ್ದ, ಕುಡಿಯುತ್ತಿದ್ದ, ಒಳ್ಳೆ ಮನೆಯೊಳಗಿದ್ದ. ಅದು ಸರಿ, ಅವನು ಸುಖವಾಗಿದ್ದನೇ? ಅದು ಪ್ರಸ್ತುತ ಪ್ರಶ್ನೆಯಲ್ಲ' ಹೀಗೆ ಮನುಷ್ಯನಿಗೆ ಒಂದು ಹೆಸರೂ ಸಹ ಇಲ್ಲದ ಹಾಗೆ ಚಹರೆ ರಹಿತನಾಗಿರುತ್ತಾನೆ. ಊಟ, ತಿಂಡಿ, ಎಲ್ಲಾ ಇದೆ. ಆದರೆ ಸುಖವಾಗಿದ್ದಾನಾ ಕೇಳಿದರೆ ಕವಿತೆ ಹೇಳುತ್ತದೆ, ಆ ಪ್ರಶ್ನೆ ಪ್ರಸ್ತುತವಲ್ಲ. ಇಂಥ ಬದುಕಿನ ಬಿಕ್ಕಟ್ಟು ಇಂದಿನದು.

ಇಂಥ ಪರಿಸ್ಥಿತಿಯಲ್ಲಿ ಎರಡು ಪ್ರವೃತ್ತಿಗಳು ತಲೆ ಎತ್ತುತ್ತವೆ. ಒಂದು ಅರಾಜಕತೆ, ಲೋಲುಪತೆ ಮತ್ತು ಅಸಹಾಯಕತೆ. ಎರಡನೆಯದು ಭವಿಷ್ಯದಲ್ಲಿ ವಿಶ್ವಾಸ, ಹೋರಾಟದ ಕೆಚ್ಚು, ಜನಾಂಗೀಯ ಪ್ರೀತಿ, ಸಾಮಾಜಿಕತೆ, ಒಟ್ಟಾರೆಯಾಗಿ ಸಮಾಜದ ಪುನರ್ಘಟನೆ; ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎಂಬಂಥ ಸ್ಥಿತಿಯ ಕುರಿತಾದ ಸಾಂಘಿಕತೆ ಮತ್ತು ಕನಸುಗಾರಿಕೆ. ಒಂದನೆಯ ಪ್ರವೃತ್ತಿ ಸ್ವೀಕಾರಾರ್ಹವಲ್ಲ. ಎರಡನೆಯ ಸಂಗತಿ ಅನಿವಾರ್ಯವಾದುದು. ಸಾಹಿತ್ಯದಿಂದ ಸಾಮಾಜಿಕ ಕ್ರಾಂತಿ ಸಾಧ್ಯವಾಗದಿರಬಹುದು, ಆದರೆ ವ್ಯಕ್ತಿಯ ಘನತೆಯನ್ನು ಪ್ರತಿಷ್ಠಾಪಿಸಿ, ಮಾನವೀಯತೆಯ ವಿಸ್ತರಣೆಗೆ ಶಕ್ತಿ ತುಂಬಬಹುದು. ಬಂಡಾಯಸಾಹಿತ್ಯ ಸಂಘಟನೆ ಸಾಂಸ್ಕೃತಿಕ-ದಾಖಲೆ ಹೌದಾದರೂ ಅದು ಒಂದು ಸಂದರ್ಭದಲ್ಲಿ ಆರ್ಥಿಕ-ರಾಜಕೀಯ ಕ್ರಾಂತಿಯೂ, ಸಾಂಸ್ಕೃತಿಕ ಕ್ರಾಂತಿಯೂ ಒಂದು ಬಿಂದುವಿನಲ್ಲಿ ಕೂಡಬಹುದು ಎಂಬ ನಂಬಿಕೆಯಿಂದ ಹೊರಟದ್ದು. ಆದ್ದರಿಂದ ಬರಹಗಾರರು ಇತರ ಕಲೆಗಾರರು ಮಾತ್ರವಲ್ಲ ಅಥವಾ ಬಂಡಾಯ ಬರಹಗಾರರ ಕೃತಿ ರಚನೆಯ ಬಗ್ಗೆ ಮೆಚ್ಚಿಗೆ ಇಲ್ಲದೆ ಇದ್ದರೂ ಬಂಡಾಯದ ತಾತ್ವಿಕ ನಿಲುವಿನಲ್ಲಿ ಸಹಾನುಭೂತಿ ಉಳ್ಳವರನ್ನೆಲ್ಲ ಒಂದೆಡೆ ತಂದು ಮಾನವೀಯ ಆಶಯಗಳನ್ನೆಲ್ಲ ಕ್ರಿಯಾಶೀಲವಾದ ಹೋರಾಟದಲ್ಲಿ ತೊಡಗಿಸಲಿಕ್ಕೆ ಮತ್ತೆ ಬಂಡಾಯ ಸಾಹಿತ್ಯ ಸಂಘಟನೆ ಒಂದು ಚಾರಿತ್ರಿಕವಾದ ಅವಶ್ಯಕತೆಯಾಗಿದೆ.

ಬಿಜೆಪಿ ಕೋಮುವಾದಿ ಕೂಟ ಮತ್ತು ಕಾಂಗ್ರೆಸ್ ಪಕ್ಷಗಳಿಗೆ ನಿಜವಾದ ಮೂರನೆಯ ಪರ್ಯಾಯವಾಗಿ ಈಗಾಗಲೇ ಪೀಪಲ್ಸ್ ಫ್ರಂಟ್ ಅಸ್ತಿತ್ವಕ್ಕೆ ಬಂದಿದೆ. ಇತ್ತೀಚೆಗೆ ನಡೆದ ಐದು ರಾಜ್ಯಗಳ ಚುನಾವಣೆಗಳು ಫಲಿತಾಂಶ ಹಾಗೂ ನಂತರದ ವಿದ್ಯಮಾನಗಳು ಮೂರನೇ ಪರ್ಯಾಯದ ಭವಿಷ್ಯವನ್ನು ಭದ್ರಪಡಿಸಿವೆ. ಈ ರಂಗ ಕೇವಲ ಸಾಂದರ್ಭಿಕ ಮೈತ್ರಿಯಾಗಿರದೇ ನಿರ್ದಿಷ್ಟವಾದ ಕಾರ್ಯಕ್ರಮ, ತತ್ವದ ಆದಾರದಲ್ಲಿ ಮುನ್ನಡೆಯುವತ್ತ ಸ್ಪಷ್ಟ ನಿಲುವಿನದ್ದಾಗಿದೆ ಎಂಬುದು ಪ್ರಣಾಳಿಕೆಯಿಂದ ತಿಳಿಯಬಹುದು. ಅದರ ಮುಖ್ಯ ತಿರುಳು ಇಲ್ಲಿದೆ.

ಪೀಪಲ್ಸ್ ಫ್ರಂಟ್ ಪ್ರಣಾಳಿಕೆ ಬಿಡುಗಡೆ

ಆಧುನಿಕ ಭಾರತಕ್ಕಾಗಿ ಜನತೆಯ ಪರ್ಯಾಯ

ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ನೇತೃತ್ವದ ಸರ್ಕಾರವು ಎಲ್ಲಾ ರೀತಿಯಿಂದಲೂ ದೇಶಕ್ಕೆ ಅಪಾಯಕಾರಿಯಾಗಿದೆ. ಬಿಜೆಪಿಯ ಸಂಕುಚಿತ ವಿಚಿದ್ರಕಾರಿ ಸಿದ್ಧಾಂತವು ಫ್ಯಾಸಿಸ್ಟ್ ಪ್ರವೃತ್ತಿಯೊಡನೆ, ರಾಷ್ಟ್ರೀಯ ಐಕ್ಯತೆಗೆ ಹೊಡೆತ ನೀಡುತ್ತಿದೆ. ಮತ್ತು ಬಹುವಿದೀಯ ನಾಗರೀಕತೆಯ ತಳಪಾಯವನ್ನೇ ನಿರಾಕರಿಸುತ್ತಿದೆ. ವಿದೇಶಿ ಬಂಡವಾಳದ ನಿರ್ದಯ ಶೋಷಣೆಗೆ, ನಮ್ಮ ಆರ್ಥಿಕ ಸಾರ್ವಭೌಮತೆಯನ್ನು ನಾಶಪಡಿಸಲು ಆರ್ಥಿಕದ ಎಲ್ಲಾ ಬಾಗಿಲುಗಳನ್ನು ತೆರೆದುಬಿಡಲಾಗಿದೆ. ಭ್ರಷ್ಟಾಚಾರವು ವ್ಯವಸ್ಥೆಯಲ್ಲಿ ಹಾಸುಹೊಕ್ಕಾಗಿದೆ ಮತ್ತು ಅಭಿವೃದ್ಧಿಗೆ ಬೇಕಾಗಿದ್ದ ಅಮೂಲ್ಯ ಸಂಪನ್ಮೂಲವನ್ನು ಕೊಳ್ಳೆಹೊಡೆಯಲಾಗಿದೆ. ಬಿಜೆಪಿಯು ನಾಚಿಕೆಯಿಲ್ಲದೆ ಇದನ್ನು ಸಮರ್ಥಿಸುತ್ತಿದೆ ಮತ್ತು ಅಪಾದಿತರನ್ನು ನಗ್ನವಾಗಿ ರಕ್ಷಿಸುತ್ತಿದೆ.

ಸ್ವಾತಂತ್ರ್ಯಾನಂತರದ ಯಾವುದೇ ಸಮಯದಲ್ಲಿ ಕೋಮುವಾದಿ ಶಕ್ತಿಗಳು, ಭಾರತದ ಜಾತ್ಯಾತೀತ, ಪ್ರಜಾಪ್ರಭುತ್ವ ಮೌಲ್ಯಗಳಿಗೆ ಇಷ್ಟೊಂದು ಅಪಾಯವನ್ನೊಡ್ಡಿರಲಿಲ್ಲ. ದೇಶದ ಸ್ವಾತಂತ್ರ್ಯಕ್ಕಾಗಿ, ಯಾವ ಮೌಲ್ಯಗಳಿಗೆ, ಆದರ್ಶಗಳಿಗೆ ಮತ್ತು ನೈತಿಕತೆಗಳಿಗೆ ಲಕ್ಷಾಂತರ ಜನ ಅಮೋಘ ತ್ಯಾಗ ಮಾಡಿದರೂ ಅವೆಲ್ಲವೂ ಬಿಜೆಪಿಯವರು ನಾಚಿಕೆಗೆಟ್ಟು ಭಾರತದ ಆರ್ಥಿಕ ಹಿತಾಸಕ್ತಿಗಳನ್ನು ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಅಡವಿಡುವುದರೊಂದಿಗೆ ಅಪಾಯಕ್ಕೊಳಗಾಗಿವೆ.

ಈ ಸವಾಲನ್ನು ಮೆಟ್ಟಿ ನಿಲ್ಲಬೇಕು, ಕೊಚ್ಚೆಯನ್ನು ಸ್ವಚ್ಛಗೊಳಿಸಿ ಜನತೆಯ ಸುತ್ತ ಅಣಿನೆರೆಯಲು ಪ್ರಜಾಸತ್ತಾತ್ಮಕ ಪರ್ಯಾಯವನ್ನು ಮುಂದಿಡಬೇಕಿದೆ.

ಕೊನೆಗೊಂಡ ಕಾಂಗ್ರೆಸ್ ಏಕಸ್ವಾಮ್ಯ: ಒಂದು ದಶಕದ ಹಿಂದೆಯೇ ಕಾಂಗ್ರೇಸಿನ ಏಕಸ್ವಾಮ್ಯ ಆಡಳಿತವು ಕೊನೆಗೊಂಡಿದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಮೂಡಿ ಬಂದ ಆಶಯಗಳು, ನಿರೀಕ್ಷೆಗಳಿಗೆ ವ್ಯತಿರಿಕ್ತವಾಗಿ ಜಾರಿಗೆ ತಂದ ನೀತಿಗಳು, ಮತ್ತು ಕೋಮುವಾದದೊಡನೆ ರಾಜಿಯಾದರೂ ಕಾಂಗ್ರೆಸ್ ಪಕ್ಷವು ಭಾರತವನ್ನು ರಕ್ಷಿಸುವ ಮತ್ತು ಅದನ್ನು ಗುಣಾತ್ಮಕವಾಗಿ ಬದಲಾಯಿಸುವ ಯೋಗ್ಯತೆಯನ್ನು ಕಳಕೊಂಡಿದೆ. 1991ರಲ್ಲಿ ಜನತೆಗೆ ಬಹಳಷ್ಟು ನೋವನ್ನುಂಟುಮಾಡುವ ಅಪಾಯಕಾರಿ ಆರ್ಥಿಕ ನೀತಿಗಳನ್ನು ಜಾರಿಗೊಳಿಸಿದ್ದು ಕಾಂಗ್ರೇಸಿನ ಸರ್ಕಾರವೇ. ಅಧಿಕಾರದಲ್ಲಿದ್ದಾಗ ಕಾಂಗ್ರೆಸ್ಸಿನ ಭ್ರಷ್ಟಾಚಾರದ ದಾಖಲೆ ಇವೆಲ್ಲ ಜನತೆಯನ್ನು ಬಿಜೆಪಿ ಆಡಳಿತವನ್ನು ಕೊನೆಗಾಣಿಸುವ ವಿಶ್ವಾಸಕ್ಕೆ ಸ್ಪೂರ್ತಿ ನೀಡುವುದಿಲ್ಲ.

ಪೀಪಲ್ಸ್ ಫ್ರಂಟ್ ಪ್ರಣಾಳಿಕೆ: ಒಂದು ಯೋಗ್ಯ ಪರ್ಯಾಯವನ್ನು ಹೆಣೆಯುವ ಯೋಚನೆಯ ಫಲವಾಗಿ, ಒಂದು ಹೊಸ ರಾಜಕೀಯ ಹೊಂದಾಣಿಕೆ, ಪೀಪಲ್ಸ್ ಫ್ರಂಟ್ ರಚನೆಯಾಗಿದೆ. ಇಂತಹ ಒಂದು ರಂಗವು ದೇಶಕ್ಕೆ ಹೊಸ ದಿಕ್ಕನ್ನು ನೀಡುವ ಮತ್ತು ಅಗಾದ ಸಾಮರ್ಥ್ಯಕ್ಕನುಗುಣವಾಗಿ ಒಂದು ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಮೇಲೆ ನಿಂತಿದೆ.

ಪೀಪಲ್ಸ್ ಫ್ರಂಟ್ ಭಾರತೀಯ ಜನತೆಯ ಮುಂದೆ ಕೆಳಗಿನ ಕಾರ್ಯಕ್ರಮವನ್ನು ಮುಂದಿಡುತ್ತದೆ.

ಸ್ವಾತಂತ್ರ ನಂತರದ 50 ವರ್ಷಕ್ಕೂ ಹೆಚ್ಚಿನ ಅವಧಿಯಲ್ಲಿ ಭಾರತದೇಶವು ಸಂಪನ್ಮೂಲ ಮತ್ತು ಅದ್ಭುತ ಸಾಮರ್ಥ್ಯವನ್ನು ಹೊಂದಿದ್ದಾಗ್ಯೂ ಬಡತನ ಪೀಡಿತ ಜನ ಸಮುದಾಯವನ್ನು ಹೊಂದಿದೆ. ಹಸಿವು, ಶಿಕ್ಷಣದ ಕೊರತೆ, ಆರೋಗ್ಯ ಮತ್ತು ವಸತಿ ಸೌಕರ್ಯಗಳು ದೊಡ್ಡ ಜನಸಮೂಹಕ್ಕೆ ಕೈಗೆಟುಕದೆಯೇ ಉಳಿದಿವೆ. ಅಪೌಷ್ಟಿಕತೆ ಮತ್ತು ರೋಗಗಳು ದೇಶದ ಮಕ್ಕಳನ್ನು ಕಾಡುತ್ತಿವೆ. ನಿರುದ್ಯೋಗವು ಲಕ್ಷಾಂತರ ಯುವಕ, ಯುವತಿಯರ ಭವಿಷ್ಯವನ್ನೇ ನುಂಗಿಹಾಕುತ್ತಿದೆ.

ಭಾರತವು ಜಗತ್ತಿನ ಇತಿದೊಡ್ಡ ಪ್ರಜಾಪ್ರಭುತ್ವವಾಗಿರುವುದು. ಹೆಮ್ಮೆಯ ವಿಷಯವಾಗಿದೆ. ಆದರೆ, ಮತದಾನದ ಹಕ್ಕನ್ನು ಚಲಾಯಿಸುವ ಜೀವನ ನಿರ್ವಹಣೆಗೆ ದುಡಿಯುವ, ತಮ್ಮ ಮಕ್ಕಳ ಭವಿಷ್ಯವನ್ನು ನಿರ್ಮಾಣಿಸುವ ಮತ್ತು ಸಮಾನ ನಾಗರೀಕರಾಗಿ ಪ್ರಜಾಪ್ರಭುತ್ವೀ ಪ್ರಕ್ರಿಯೆಯಲ್ಲಿ ಭಾಗವಹಿಸುವ ಜನತೆಯ ಎಲ್ಲಾ ಹಕ್ಕುಗಳನ್ನೂ ಮೊಟಕುಗೊಳಿಸಲಾಗಿದೆ.

ಯಾವುದೇ ಕಾರ್ಯಕ್ರಮವು, ಪ್ರಜಾಪ್ರಭುತ್ವೀಯ, ಜಾತ್ಯಾತೀತ, ಆರ್ಥಿಕ ಮತ್ತು ಸಾಮಾಜಿಕ ನ್ಯಾಯಯುತ ಸಮಾಜದಲ್ಲಿ ಪ್ರತಿಯೊಬ್ಬ ಭಾರತೀಯನೂ ಸಮಾನ ಹಕ್ಕನ್ನು ಪಡೆಯಲು ಖಾತರಿನೀಡುವುದು ಹೇಗೆ ಎಂಬುದರ ಮೇಲೆ ರೂಪುಗೊಳ್ಳಬೇಕಿದೆ. ವಿಪರೀತ ಬಡತನ ಮತ್ತು ಅವಕಾಶ ವಂಚಿತರ ಬಗ್ಗೆ ಚಿಂತಿಸದ ಮತ್ತು ಜನತೆಯ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅಗತ್ಯಗಳನ್ನು ಪೂರೈಸಲು ನೆಲೆ ಒದಗಿಸದ ಯಾವ ಕಾರ್ಯಕ್ರಮವೂ ಅರ್ಥಪೂರ್ಣವಾಗಿರುವುದಿಲ್ಲ.

ಧರ್ಮನಿರಪೇಕ್ಷತೆ (ಜಾತ್ಯಾತೀತತೆ): ದರ್ಮ ನಿರಪೇಕ್ಷ ಪ್ರಭುತ್ವಕ್ಕೆ ಸಂವಿಧಾನವು ಅವಕಾಶ ಕಲ್ಪಿಸಿದೆ. ಭಾರತೀಯ ಸ್ವಾತಂತ್ರ್ಯ ಸಂಗ್ರಾಮವು ಭಾರತೀಯ ಪ್ರಭುತ್ವ ಮತ್ತು ಸಮಾಜದ ಜಾತ್ಯಾತೀತ ಸ್ವರೂಪಕ್ಕೆ ನೆಲೆಯೊದಗಿಸಿದೆ. ಧರ್ಮನಿರಪೇಕ್ಷ ಮೌಲ್ಯಗಳನ್ನು ರಕ್ಷಿಸಿಕೊಳ್ಳುವುದು ಆದ್ಯತೆಯ, ಮಹತ್ವದ ಕೆಲಸವಾಗಿದೆ.

ಸಂವಿಧಾನದ ಜಾತ್ಯಾತೀತ ಮೌಲ್ಯಗಳನ್ನು ಬಲಗೊಳಿಸಿ, ರಾಜಕೀಯದಲ್ಲಿ ದರ್ಮದ ಪ್ರವೇಶ ತಡೆಗೆ ಕಾನೂನು ಕ್ರಮ, ವಯಕ್ತಿಕ ಧಾರ್ಮಿಕ ಆಚರಣೆ, ಸ್ವಾತಂತ್ರ್ಯದ ರಕ್ಷಣೆ, ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಗೆ ಪೀಪಲ್ಸ್ ಫ್ರಂಟ್ ಬದ್ಧವಾಗಿದೆ.

ಒಕ್ಕೂಟ ತತ್ವ : ಪೀಪಲ್ಸ್ ಫ್ರಂಟ್ ರಾಜ್ಯ ಕೇಂದ್ರ ಸಂಬಂಧಗಳನ್ನು ಪುನರಚಿಸುವುದರ ಮೂಲಕ ಒಕ್ಕೂಟತತ್ವವನ್ನು ಬಲಪಡಿಸಲು ಬದ್ದವಾಗಿದೆ. ಎಲ್ಲಾ ಅಧಿಕಾರವೂ ಕೇಂದ್ರದಲ್ಲಿ ಕ್ರೂಡೀಕರಣಗೊಳ್ಳುವುದರ ವಿರುದ್ಧ ಈ ರಂಗವಿದೆ.

ರಾಜ್ಯಗಳಿಗೆ ಹೆಚ್ಚಿನ ಅಧಿಕಾರ, ರಾಜ್ಯ ಸರ್ಕಾರಗಳ ವಜಾ ತಡೆಯಲು ಕಲಂ 356ಕ್ಕೆ ಸೂಕ್ತ ತಿದ್ದುಪಡಿ, ಅಂತರ ರಾಜ್ಯ ಮಂಡಳಿಯನ್ನು ಕ್ರಿಯಾಶೀಲಗೊಳಿಸುವುದಕ್ಕೆ ಪೀಪಲ್ಸ್ ಫ್ರಂಟ್‌ನ ನಿಲುವಾಗಿದೆ.



ಪ್ರಣಾಳಿಕೆ ಬಿಡುಗಡೆಗೊಂಡ ಬಳಿ

ರಾಷ್ಟ್ರೀಯ ಐಕ್ಯತೆಯ ರಕ್ಷಣೆ : ಅಲ್ಪಸಂಖ್ಯಾತರ ವಿರುದ್ಧ ದ್ವೇಶವನ್ನು ಬಿತ್ತುವುದರ ಮೂಲಕ ಬಿಜೆಪಿ-ಆರ್.ಎಸ್.ಎಸ್. ಕೂಟ ದೇಶದ ಐಕ್ಯತೆಗೆ ಗಂಬೀರ ಅಪಾಯವನ್ನುಂಟುಮಾಡಿದೆ ಮತ್ತು ತಮ್ಮ ಹಿಂದುತ್ವ ತತ್ವಕ್ಕನುಗುಣವಾಗಿ ಹುಸಿ ಏಕತೆಯನ್ನು ಹೇರಲು ಪ್ರಯತ್ನಿಸಲಾಗುತ್ತಿದೆ.

ದೇಶದ ಹಲವು ಭಾಗಗಳಲ್ಲಿ ನಿರ್ಲಕ್ಷ್ಯ ಮತ್ತು ದೂರತಳ್ಳುವ ಭಾವನೆಗಳಿಂದುಂಟಾಗಿರುವ ಪ್ರತ್ಯೇಕತಾ ಭಾವನೆಗಳನ್ನು ತೊಡೆದು ಹಾಕುವುದರ ಮೂಲಕ ಭಾರತೀಯ ಐಕ್ಯತೆಯನ್ನು ಬಲಗೊಳಿಸುವುದು ಈ ರಂಗದ ಉದ್ದೇಶವಾಗಿದೆ. ಈ ರಂಗವು ಯಾವುದೇ ರೀತಿಯ ಧಾರ್ಮಿಕ ಮೂಲಭೂತವಾದ ಅಥವಾ ಕೋಮುವಾದವನ್ನು ಒಪ್ಪಿಕೊಳ್ಳುವುದಿಲ್ಲ. ಸಂವಿದಾನದ 370ನೇ ವಿದಿಯ ಕೆಳಗೆ ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಾಧ್ಯವಿದ್ದಷ್ಟೂ ಹೆಚ್ಚು ಸ್ವಾಯತ್ತತೆ ಕೊಡಬೇಕು. ದಾರ್ಮಿಕ ನೆಲೆಗಟ್ಟಿನ ಮೇಲೆ ರಾಜ್ಯಗಳನ್ನು ವಿಂಗಡಣೆ ಮಾಡುವುದನ್ನು ಪೀಪಲ್ಸ್ ಫ್ರಂಟ್ ಪ್ರಬಲವಾಗಿ ವಿರೋಧಿಸಿದೆ.

ಪ್ರಜಾಪ್ರಭುತ್ವೀ ವ್ಯವಸ್ಥೆಯನ್ನು ಬಲಪಡಿಸಬೇಕು: ಸಂಸದೀಯ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡಲು, ಸಂವಿಧಾನದ ಜಾತ್ಯಾತೀತ ಮೌಲ್ಯಗಳನ್ನು ನಾಶಮಾಡಲು ಮತ್ತು ನಾಗರೀಕರೆಲ್ಲರಿಗೆ ಸಮಾನ ಹಕ್ಕುಗಳನ್ನು ನಿರಾಕರಿಸುವ ಆಧಾರದಲ್ಲಿ ಸಂವಿಧಾನ ಪರಾಮರ್ಷೆ ಮಾಡುವುದನ್ನು ಪೀಪಲ್ಸ್ ಫ್ರಂಟ್ ಅತ್ಯುಗ್ರವಾಗಿ ವಿರೋಧಿಸುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಚುನಾವಣಾ ಸುಧಾರಣೆಗಳನ್ನು ತರುವುದರ ಮೂಲಕ ಮತ್ತು ಗ್ರಾಮ ಪಂಚಾಯತಿವರೆಗೂ ಅಧಿಕಾರ ವಿಕೇಂದ್ರೀಕರಣ ಮಾಡುವುದರ ಮೂಲಕ ಸಂಸದೀಯ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಬೇಕಾಗಿದೆ.

ಮಾಹಿತಿ ಪಡೆಯುವ ಹಕ್ಕು ಆಡಳಿತವನ್ನು ಪಾರದರ್ಶಕಗೊಳಿಸಲು ಸರ್ಕಾರಿ ರಹಸ್ಯ ಕಾಯ್ದೆಗೆ ತಿದ್ದುಪಡಿತರಲು ಪೀಪಲ್ಸ್ ಫ್ರಂಟ್ ಬದ್ದವಾಗಿದೆ.

ಪೋಲೀಸ್ ಸುಧಾರಣೆ, ಜನತೆಯ ಬಗೆಗಿನ ದೃಷ್ಟಿಕೋನ ಮತ್ತು ಸೇವೆಯನ್ನು ಉತ್ತಮಪಡಿಸಲು, ಹಳೆಯ ವಸಾಹತು ಕಾಲದ ಪೊಲೀಸ್ ಕಾಯ್ದೆಗೆ ತಿದ್ದುಪಡಿ ತರಲು ಬದ್ದವಾಗಿದೆ.

ಚುನಾವಣಾ ಸುಧಾರಣೆ : ರಾಷ್ಟ್ರೀಯ ಪಕ್ಷಗಳಿಗೆ ವಸ್ತುರೂಪದಲ್ಲಿ ಸರ್ಕಾರದಿಂದ ಸಹಾಯ, ಚುನಾವಣಾ ವೆಚ್ಚಗಳಿಗೆ ಕಡಿವಾಣ ಹಲವಾರು ಅಂಶಗಳನ್ನೊಳಗೊಂಡ ಚುನಾವಣಾ ಸುಧಾರಣೆಗೆ ಪೀಪಲ್ಸ್ ಫ್ರಂಟ್ ಬದ್ದವಾಗಿದೆ.

ಭ್ರಷ್ಟಾಚಾರ: . ಪ್ರಧಾನ ಮಂತ್ರಿಯನ್ನು ಒಳಗೊಂಡು, ಎಲ್ಲಾ ಸಾರ್ವಜನಿಕ ಸೇವಕರನ್ನು ಒಳಗೊಂಡಂತೆ ಲೋಕಪಾಲ ಮಸೂದೆಯನ್ನು ಅಂಗೀಕರಿಸುವುದು.

. ಎಲ್ಲಾ ಹಂತಗಳಲ್ಲಿ ಭ್ರಷ್ಟಾಚಾರ ನಿರ್ಮೂಲನೆ ಮಾಡಲು, ನಿರ್ದಿಷ್ಟವಾಗಿ ಉನ್ನತ ಅಧಿಕಾರಗಳನ್ನು ಹೊಂದಿದವರನ್ನು ತನಿಖೆ ನಡೆಸಲು ಮತ್ತು ಮೊಕದ್ದಮೆ ಹೂಡಲು ನಿಷ್ಟುರ ಕ್ರಮ.

ವಿದೇಶಾಂಗ ನೀತಿ : ಬಿಜೆಪಿ ನೇತೃತ್ವದ ಸರ್ಕಾರವು ಹೆಚ್ಚು ಕಡಿಮೆ ದೀರ್ಘಕಾಲದ ಸ್ವತಂತ್ರ ಅಲಿಪ್ತ ದೋರಣೆಯನ್ನು ಕೈಬಿಟ್ಟಿದೆ. ಈ ಫ್ರಂಟ್ ಸ್ವತಂತ್ರ ಅಲಿಪ್ತ ವಿದೇಶಾಂಗ ನೀತಿಗಳನ್ನು ಬೆಂಬಲಿಸುತ್ತದೆ.

ಇವತ್ತಿನ ಜಾಗತೀಕ ಸನ್ನಿವೇಶದಲ್ಲಿ ಎಲ್ಲಾ ದೇಶಗಳೊಡನೆ ಸಮಾನವಾಗಿ ವ್ಯವಹರಿಸಲು ಮತ್ತು ಒಂದೇ ಶಕ್ತಿಯ ಕಡೆಗೆ ಚಲಿಸದಿರುವ ನೀತಿಯು ಅಗತ್ಯವಿದೆ.

ಆರ್ಥಿಕ ನೀತಿಗಳು: ಬಿಜೆಪಿ ಮೊದಲು 1998 ರಲ್ಲಿ ಅಧಿಕಾರಕ್ಕೆ ಬಂದ ಮೂರು ವರ್ಷಗಳಲ್ಲಿ, ಹುಸಿ ಸ್ವದೇಶಿ ಘೋಷಣೆಯನ್ನು ಹೊರಡಿಸಿದ ನಂತರವೂ ಭಾರತದ ಸ್ವಾವಲಂಬನೆಯ ತಳಹದಿಯನ್ನು ನಾಶಮಾಡುತ್ತಾ ಮುಂದುವರೆದಿದೆ. ಭಾರತದ ಆರ್ಥಿಕತೆಯ ಬೆನ್ನೆಲುಬಾದ ರೈತರು ಅತ್ಯಂತ ದುಸ್ಥಿತಿಯಲ್ಲಿದ್ದಾರೆ. ಭಾರತದ ಕೈಗಾರಿಕೆಗಳಲ್ಲಿ ಸಂಪತ್ತನ್ನು ಉತ್ಪಾದಿಸುವ ಕಾರ್ಮಿಕ ವರ್ಗವನ್ನು ತಮ್ಮ ಕೆಲಸಗಳಿಂದ ಹೊರದಬ್ಬಲಾಗುತ್ತಿದೆ. ಮತ್ತು ಅವರ ಶ್ರಮದ ಗಳಿಕೆಯನ್ನು ನಿರಾಕರಿಸಲಾಗುತ್ತಿದೆ. ಸ್ವಯಂ ನಿವೃತ್ತಿ ಯೋಜನೆ, ಗಾತ್ರ ಕಡಿಮೆಗೊಳಿಸುವಿಕೆ ಮತ್ತು ಮುಚ್ಚುವಿಕೆಗಳಿಂದಾಗಿ ಉದ್ಯೋಗದ ಅವಕಾಶಗಳು ಮತ್ತಷ್ಟು ಕಡಿಮೆಯಾಗುತ್ತಿದೆ. ಲಕ್ಷಾಂತರ ಕುಶಲಕರ್ಮಿಗಳು ಮತ್ತು ನೇಕಾರರು ಕೊಚ್ಚಿ ಹೋಗುತ್ತಿದ್ದಾರೆ. ಸಣ್ಣ ಕೈಗಾರಿಕೆ ಮತ್ತು ಗೃಹ ಕೈಗಾರಿಕೆಗಳೂ ಬಿಕ್ಕಟ್ಟಿನಲ್ಲಿವೆ.

ಐಎಂಎಫ್, ವಿಶ್ವಬ್ಯಾಂಕ್, ವಿಶ್ವ ವ್ಯಾಪಾರಿ ಸಂಸ್ಥೆಗಳ ನಿರ್ದೇಶನಕ್ಕನುಗುಣವಾಗಿ ಸಾಮ್ರಾಜ್ಯಶಾಹಿ ಪರವಾದ ಆರ್ಥಿಕ ನೀತಿಗಳನ್ನು ಬಿಜೆಪಿ ನೇತೃತ್ವದ ಸರ್ಕಾರವು ಅನುಸರಿಸುತ್ತಿರುವುದು ಇದಕ್ಕೆಲ್ಲ ಕಾರಣವಾಗಿದೆ.

ಕೃಷಿ: ಕೃಷಿ ಉತ್ಪನ್ನಗಳಲ್ಲಿ ಹೆಚ್ಚಾಗಿರುವುದು ಸ್ವಾತಂತ್ರ್ಯಾನಂತರದ ಮಹತ್ವದ ಸಾಧನೆಗಳಲ್ಲಿ ಒಂದು. ತನ್ನ ಜನತೆಗೆ ಸಾಕಾಗುವಷ್ಟು ಆಹಾರ ಧಾನ್ಯಗಳನ್ನು ಉತ್ಪಾದನೆ ಮಾಡುವ ಶಕ್ತಿ ಭಾರತಕ್ಕಿದೆ. ಆಹಾರ ಭದ್ರತೆಯ ಸಾಧನೆಯೂ ಈಗ ಅಪಾಯದಲ್ಲಿದೆ. ಡಬ್ಲ್ಯುಟಿಒ ಆದೇಶದಂತೆ ಕೃಷಿ ಉತ್ಪನ್ನಗಳ ಆಮದಿಗೆ ಅವಕಾಶ ಕಲ್ಪಿಸಿಕೊಟ್ಟಿರುವುದು ಸಂಕಷ್ಟ ಉಂಟು ಮಾಡಿದೆ. ಕೃಷಿ ಉತ್ಪನ್ನಗಳ ಬೆಲೆಗಳಲ್ಲಿ ತೀವ್ರ ಕುಸಿತವಾಗಿರುವುದು ರೈತರನ್ನು ಕೊಲ್ಲಿ ಹಾಕುತ್ತಿದೆ. ದೇಶಾದ್ಯಂತ ರೈತರ ಆತ್ಮಹತ್ಯೆಗಳು ಈ ನಾಚಿಕೆಗೆಟ್ಟ ನೀತಿಗಳನ್ನು ಪ್ರತಿಬಿಂಬಿಸುತ್ತವೆ.

ಪೀಪಲ್ಸ್ ಫ್ರಂಟ್ ಭಾರತೀಯ ಕೃಷಿಯನ್ನು ರಕ್ಷಿಸುವ ಮತ್ತು ಉಳಿಸಿಕೊಳ್ಳುವ ಬಲವಾದ ನಂಬಿಕೆಯನ್ನು ಹೊಂದಿದೆ.

ದುಡಿವ ಜನರ ರಕ್ಷಣೆಯಲ್ಲಿ: ಉದಾರೀಕರಣ ಮತ್ತು ಖಾಸಗೀಕರಣ ನೀತಿಗಳು ದುಡಿಯುವ ಜನರ ಜೀವನದ ಮೇಲೆ ನೇರವಾದ ದಾಳಿಯನ್ನು ನಡೆಸಿವೆ. ಸಾವಿರಾರು ಖಾಸಗಿ ಉದ್ದಿಮೆಗಳ ಮುಚ್ಚುವಿಕೆ, ಸಾರ್ವಜನಿಕ ವಲಯದ ಕಳಚುವಿಕೆ ಮತ್ತು ರೋಗಗ್ರಸ್ತ ಉದ್ದಿಮೆಗಳನ್ನು ಪುನಶ್ಚೇತನಗೊಳಿಸುವಲ್ಲಿನ ವಿಫಲತೆಯಿಂದ ಕೈಗಾರಿಕಾ ಕಾರ್ಮಿಕರು ಗಂಭೀರ ಪರಿಣಾಮಕ್ಕೊಳಗಾಗಿದ್ದಾರೆ.

ಈ ರಂಗವು ಕಾರ್ಮಿಕರಿಗೆ ಅಗತ್ಯ ಕನಿಷ್ಠ ಕೂಲಿ ನೀಡಲು, ಅಸಂಘಟಿತ ಕಾರ್ಮಿಕರನ್ನು ಉಳಿಸಲು ಕಾನೂನು ರೂಪಿಸಲು, ಆಡಳಿತದಲ್ಲಿ ಕಾರ್ಮಿಕರು ಭಾಗವಹಿಸುವ ಯೋಜನೆಗಳು, ಗುಪ್ತ ಮತದಾನದ ಮೂಲಕ ಕಾರ್ಮಿಕ ಸಂಘಗಳನ್ನು ಮಾನ್ಯತೆ ಮಾಡಲು ಮತ್ತು ಕಾರ್ಮಿಕ ಸಂಘಟನೆಯ ಹಕ್ಕುಗಳನ್ನು ರಕ್ಷಿಸಲು ಬದ್ಧವಾಗಿದೆ.

ಕೃಷಿ ಕೂಲಿಕಾರರಿಗೆ ಕೇಂದ್ರೀಯ ಶಾಸನಕ್ಕೆ, ಕನಿಷ್ಠ ಕೂಲಿಗೆ, ನಿವೃತ್ತಿ ವೇತನ ಮತ್ತಿತರೆ ಸಾಮಾಜಿಕ ಸೌಲಭ್ಯಗಳು, ನಿವೇಶನಕ್ಕೆ, ಮಹಿಳಾ ಕೃಷಿ ಕಾರ್ಮಿಕರಿಗೆ ಸಮಾನ ವೇತನಕ್ಕಾಗಿ ಕೆಲಸ ಮಾಡಲಿದೆ.

ಕೈಗಾರಿಕೆ :ಸಾರ್ವಜನಿಕ ವಲಯ: ಮುಖ್ಯ ಮತ್ತು ಆಯಕಟ್ಟಿನ ಸಾರ್ವಜನಿಕ ವಲಯವನ್ನು ಸಾಕಷ್ಟು ಬಂಡವಾಳ ಮತ್ತು ತಂತ್ರಜ್ಞಾನ ಕೊಡುವುದರ ಮೂಲಕ ರಕ್ಷಿಸಿ ಬಲಪಡಿಸಲಿದೆ.

ಖಾಸಗೀವಲಯ: ಖಾಸಗೀ ವಲಯವು ಹೊಸ ಉತ್ಪಾದನಾ ರಂಗಗಳಲ್ಲಿ ತೊಡಗಿಸಿಕೊಳ್ಳಲು ಉತ್ತೇಜಿಸಲಾಗುವುದು. ಸೇವೆ ಮತ್ತು ಮಾಹಿತಿ ಕ್ಷೇತ್ರದಲ್ಲಿ ವಿಸ್ತರಿಸಲಾಗುವುದು.

ಹಣಕಾಸು ವಲಯ: ಸಾರ್ವಜನಿಕ ಜೀವ ವಿಮೆಯನ್ನು ಬಲಗೊಳಿಸಿ, ವಿಸ್ತರಿಸಲಾಗುವುದು. ಈ ಕ್ಷೇತ್ರಕ್ಕೆ ವಿದೇಶಿ ಕಂಪನಿಗಳು ನುಗ್ಗುವುದನ್ನು ತಡೆಯಲಾಗುವುದು. ಗುತ್ತೇದಾರಿ ಸಂಸ್ಥೆಗಳು ಸರಿಯಾಗಿ ನಿರ್ವಹಿಸದ ಆಸ್ತಿಗಳನ್ನು ಬ್ಯಾಂಕುಗಳಿಗೆ ಹಿಂದಿರುಗಿಸಲು ಕ್ರಮ ಕೈಗೊಳ್ಳಲಾಗುವುದು.

ಕಪ್ಪು ಹಣ, ಭ್ರಷ್ಟಾಚಾರದಿಂದ, ಕಳ್ಳ ಸಾಗಾಣೆ ಮತ್ತು ಇತರೆ ಮೂಲಗಳಿಂದ ಗಳಿಸುವ ಹಣವನ್ನು ತಡೆಯಲಾಗುವುದು.

ಸಾರ್ವಜನಿಕ ವಿತರಣಾ ವ್ಯವಸ್ಥೆ:ಬಿಜೆಪಿ ಸರ್ಕಾರವು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಹಂತ ಹಂತವಾಗಿ ಕಳಚಿ ಹಾಕುತ್ತದೆ. ಭಾರತೀಯ ಆಹಾರ ನಿಗಮದಲ್ಲಿ ಆಪಾದ ಧಾನ್ಯ ಕೊಳೆಯುತ್ತಿದ್ದರೂ ಜನತೆ ಹಸಿವಿನಿಂದ ಸಾಯುವಂತಾಗಿದೆ.

ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಉತ್ತಮಪಡಿಸಿ, ಪುನರ್‌ರಚಿಸಿ ಬಲಪಡಿಸಲಿದೆ.

ಸಾಮಾಜಿಕ ನ್ಯಾಯ: ಧಾರ್ಮಿಕ ಮತ್ತು ಜಾತಿ ದಬ್ಬಾಳಿಕೆಗಳನ್ನು ಕೊನೆಗೊಳಿಸಲು ಮತ್ತು ಎಲ್ಲಾ ರೀತಿಯ ಸಾಮಾಜಿಕ ದಮನವನ್ನು ಕೊನೆಗೊಳಿಸಲು ಬದ್ದವಾಗಿದೆ. ಪರಿಶಿಷ್ಟ ಜಾತಿ, ವರ್ಗ, ಮಹಿಳೆಯರ ಮೇಲಿನ ದಮನದ ವಿರುದ್ಧ ಬಿಗಿ ಕ್ರಮಗಳನ್ನು ಕೈಗೊಳ್ಳಲಾಗುವುದು. ಎಸ್.ಸಿ., ಎಸ್.ಟಿ.ಗಳ ಹುದ್ದೆಗಳನ್ನು ಭರ್ತಿಮಾಡಲಾಗುವುದು. ಮೀಸಲಾತಿಯನ್ನು ದಲಿತ ಕ್ರಿಶ್ಚಿಯನ್ನರಿಗೂ ವಿಸ್ತರಿಸಲಾಗುವುದು.


ಮಹಿಳೆ: ಸಾಮಾಜಿಕ, ಆರ್ಥಿಕ, ರಾಜಕೀಯ ವಲಯಗಳಲ್ಲಿ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡಲು ರಂಗವು ಬದ್ದವಾಗಿದೆ.

ಕ್ರೀಡೆ: ಸಾಕಷ್ಟು ಹಣ, ಆಟದ ಮೈದಾನ, ಎಲ್ಲಾ ಪ್ರತಿಭಾವಂತ ಕ್ರೀಡಾಪಟುಗಳಿಗೆ ಉತ್ತೇಜನ ನೀಡುವಂತೆ ಕ್ರೀಡಾ ನೀತಿಯನ್ನು ರೂಪಿಸಲಾಗುವುದು.

ಜೀವನಮಟ್ಟ: ಕುಡಿಯುವ ನೀರು, ಪ್ರಾಥಮಿಕ ಆರೋಗ್ಯ, ವೈಜ್ಞಾನಿಕ ಶಿಕ್ಷಣ, ವಸತಿ, ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿಸುವುದರ ಮೂಲಕ ಜನರ ಜೀವನ ಮಟ್ಟವನ್ನು ಉತ್ತಮಪಡಿಸಲಾಗುವುದು.

ಮೇಲಿನ ಸಾಮಾನ್ಯಕಾರ್ಯಕ್ರಮವು ಜನರ ಪೂರ್ಣ ಸಾಮರ್ಥ್ಯವನ್ನು ಬಳಸಿಕೊಂಡು, ಸ್ವಾವಲಂಬನೆಯ ಆಧಾರದಲ್ಲಿ ದೇಶವನ್ನು ಅಭಿವೃದ್ಧಿಪಡಿಸುವ ನಿಜವಾದ ಜನಪರ ಪರ್ಯಾಯ ಕಾರ್ಯಕ್ರಮವಾಗುತ್ತದೆ ಎಂದು ಪೀಪಲ್ಸ್ ಫ್ರಂಟ್ ನಂಬುತ್ತದೆ.

- ಟಿ.ಎಲ್. ಕೃಷ್ಣೇಗೌಡ



'ಮೈಕೋ' ಜರ್ಮನಿ ಮೂಲದ ಬಹುರಾಷ್ಟ್ರೀಯ ಕಂಪನಿ. ಅದರ ಉತ್ಪಾದನೆಗಳಿಗೆ ಖ್ಯಾತಿಯಾಗಿರುವಂತೆಯೇ ಕಾರ್ಮಿಕರನ್ನು ಹಿಂಡಲು, ಅವರ ಹಕ್ಕುಗಳಿಗಾಗಿ ಹೋರಾಡಲು ಕಟ್ಟಿಕೊಂಡ ಸಂಘವನ್ನು ನಿರ್ನಾಮ ಮಾಡಲು ಕುಖ್ಯಾತಿ ಪಡೆದಿದ ಕೂಡ. ಈಗ ತರಲಾಗುತ್ತಿರುವ ಜಾಗತೀಕರಣ-ಆಧುನೀಕರಣದ 'ಲಾಭ' ಯಾರಿಗೆ? ಸಂಪತ್ತನ್ನು ಸೃಷ್ಟಿಸುವ ಕಾರ್ಮಿಕವರ್ಗದ ಮೇಲೆ ಇದರ ಕರಾಳ ಛಾಯೆ ಎಂತಹುದು ಎಂಬುದುರತ್ತ ನೋಟ ಹರಿಸಿದ್ದಾರೆ ಸಂಘದ ಪ್ರಧಾನ ಕಾರ್ಯದರ್ಶಿ

ಟಿ.ಶಿವಶಂಕರ್

ಆಧುನೀಕರಣದಿಂದ ಜಾಗತೀಕರಣದವರೆಗೆ

ಮೈಕೋ ಕಾರ್ಮಿಕರಿಗೆ ತಟ್ಟಿರುವ ಬಿಸಿ

ಕೇಂದ್ರ ಸರ್ಕಾರದ ಈ ನೀತಿ ಜರ್ಮನಿ ಮೂಲದ ಪ್ರತಿಷ್ಠಿತ ಬಹುರಾಷ್ಟ್ರೀಯ ಕಾರ್ಖಾನೆ **"ಮೋಟಾರು ಇಂಡಸ್ಟ್ರೀಸ್ ಕಂಪೆನಿ (ಮೈಕೋ)** ಗೂ ಬಿಸಿ ಮುಟ್ಟಿಸಿದೆ. ಎರಡು ದಶಕಗಳ ಹಿಂದೆ ಬೆಂಗಳೂರಿನ ಆಡುಗೋಡಿ ಪ್ರದೇಶದಲ್ಲಿರುವ ಮೈಕೋ ಕಾರ್ಖಾನೆಯಲ್ಲಿ ಸುಮಾರು 7000 ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಪ್ರಸ್ತುತ ಈ ಕಂಪೆನಿ ನಾಲ್ಕು ಘಟಕಗಳನ್ನು ಹೊಂದಿದೆ. ಆಡುಗೋಡಿ ಘಟಕವಲ್ಲದೆ ನಗರದ ನಾಗನಾಥಪುರದಲ್ಲಿ ಒಂದು ಘಟಕ ನಾಸಿಕ್ ಮತ್ತು ರಾಜಸ್ಥಾನದ ಜೈಪುರದಲ್ಲಿ ಒಂದೊಂದು ಘಟಕವನ್ನು ಹೊಂದಿದೆ.

ಕಾರ್ಮಿಕ ಶಕ್ತಿಯನ್ನು ನಿಷ್ಕ್ರಿಯಗೊಳಿಸತೊಡಗಿದ ಆಧುನೀಕರಣ ಬೆಂಗಳೂರಿನ ಆಡುಗೋಡಿ ಘಟಕದಲ್ಲಿ 70ರ ದಶಕದ ಅಂತಿಮ ಅವಧಿಯಲ್ಲಿ ಬಂದ ಆಧುನೀಕರಣದಿಂದಾಗಿ ಆಧುನಿಕ ಯಂತ್ರಗಳನ್ನು ಅಳವಡಿಸುವ ಮೂಲಕ ಉತ್ಪಾದಕತೆಯಲ್ಲಿ ಕ್ರಾಂತಿಕಾರಿ ಬದಲಾವಣೆ ಕಂಡುಬಂದವು. ಸಾಂಪ್ರದಾಯಿಕ ಯಂತ್ರಗಳ ಬದಲಿಗೆ **ಲಘು (ಸೆಮಿ) ಸ್ವಯಂ ಚಾಲಿತ ಯಂತ್ರಗಳು** ಮತ್ತು **ಸ್ವಯಂ ಚಾಲಿತ ಯಂತ್ರಗಳು** ಬಂದ ನಂತರ ಕಾರ್ಮಿಕರ ಪರಿಣತಿಯ ಅವಶ್ಯಕತೆ ಕಡಿಮೆಯಾಯಿತು. 50 ರಿಂದ 100 ಜನಗಳು ಸೇರಿ ಮಾಡುತ್ತಿದ್ದ ಉತ್ಪಾದನಾ ಸಾಧನಗಳು (Production line) ಇಲ್ಲವಾಗಿ 25 ರಿಂದ 50 ಜನರೇ ಹೊಸ ಯಂತ್ರಗಳನ್ನು ನಡೆಸುವಂತಾಯ್ತು. ಇದರಿಂದ ಬಹಳಷ್ಟು ಕಾರ್ಮಿಕರಿಗೆ ಕೆಲಸವಿಲ್ಲದಂತಾಗಿ ಅಗತ್ಯಕ್ಕಿಂತ ಹೆಚ್ಚು ಕಾರ್ಮಿಕರು ಉಳಿಯುವಂತಾಯ್ತು. ಒಂದು ಯಂತ್ರಕ್ಕೆ ಒಬ್ಬ ಕಾರ್ಮಿಕ ಎಂಬ ಪರಿಸ್ಥಿತಿ ಹೋಗಿ ಎರಡು ಯಂತ್ರಕ್ಕೆ ಒಬ್ಬ ಕಾರ್ಮಿಕ ಎಂಬ ಪದ್ಧತಿ ಜಾರಿಗೆ ಬಂತು.

<u>ಯಂತ್ರದಂತಾದ ಕಾರ್ಮಿಕ</u>

ಸಿ.ಐ.ಟಿ.ಯು.ನ. ರಾಜ್ಯಾಧ್ಯಕ್ಷರಾದ ಕಾಂ। ಎಸ್. ಸೂರ್ಯನಾರಾಯಣರಾವ್ ನೇತೃತ್ವದ ಕಾರ್ಮಿಕ ಸಂಘಟನೆಯು ಒಬ್ಬನೇ ಕಾರ್ಮಿಕ ಎರಡು ಯಂತ್ರಗಳನ್ನು ನಡೆಸುವ ಪದ್ಧತಿಯನ್ನು ವಿರೋಧಿಸಿತು. ಆದರೆ, **ಹೆಚ್ಚಿನ ಉತ್ಪಾದನೆಗೆ ಹೆಚ್ಚಿನ ವೇತನ (ಇನ್ಸೆಂಟಿವ್) ಪದ್ಧತಿಯನ್ನು ಆಡಳಿತ ಮಂಡಳಿ ಜಾರಿಗೆ ತಂದಾಗ ಸಂಘದ ವಿರೋಧವಿದ್ದರೂ ಹಣದ ಆಸೆ ಒಡ್ಡಿ** ಕಾರ್ಮಿಕರು ಈ ಪದ್ಧತಿಯನ್ನು ಒಪ್ಪುವಂತೆ ಮಾಡಲಾಯಿತು. ಅದರ ಫಲವಾಗಿ ವಿರಾಮವಿಲ್ಲದೆ ಎರಡು ಯಂತ್ರಗಳ ಜೊತೆ ಕಾರ್ಮಿಕನೂ ಯಂತ್ರದಂತೆ ದುಡಿಯತೊಡಗಿದ.

ಅದರಿಂದ ಕೆಲಸದ ಅಧಿಕ ಒತ್ತಡದ ಹೆಚ್ಚಳದಿಂದಾಗಿ ಕಾರ್ಮಿಕರಿಗೆ ಮಾನಸಿಕ ವೇದನೆ ಹೆಚ್ಚಾಗಿ ದೈಹಿಕ ಆರೋಗ್ಯ ಕ್ಷೀಣಿಸತೊಡಗಿತು. ಆ ಅವಧಿಯಲ್ಲಿ ದಿನದ ನಾಲ್ಕು ಪಾಳಿಗಳಲ್ಲೂ 'ಇನ್ಸೆಂಟಿವ್' ಪ್ರತಿ ಭಾನುವಾರ ಓವರ್ ಟೈಮ್ ಕೆಲಸ ಕಾರ್ಮಿಕರಿಗೆ ಸಿಗುತ್ತಿತ್ತು. ಕೆಲವು ಕಾರ್ಮಿಕರು ತಿಂಗಳಲ್ಲಿ 100 ರಿಂದ 150 ಗಂಟೆಗಳ ಕಾಲ ಓಟಿ ಮಾಡಿದ ನಿದರ್ಶನಗಳೂ ಉಂಟು. 8 ಗಂಟೆಗಳಲ್ಲಿ ಮಾಡಬಹುದಾದ ಕೆಲಸವನ್ನು ಕೇವಲ 4-5 ಗಂಟೆಗಳಲ್ಲೇ ಮಾಡಿ ಮುಗಿಸುತ್ತಿದ್ದರು. **ಕಾರ್ಮಿಕರ ಈ ಪರಿಶ್ರಮದಿಂದಾಗಿ ಕಾರ್ಖಾನೆಯ ಉತ್ಪತ್ತಿಯಲ್ಲಿ ಹೆಚ್ಚಳವಾಯ್ತು. ಉತ್ಪಾದನೆಯ ರುಚಿ ಕಂಡ ಆಡಳಿತ ವರ್ಗ Single spindle Automatic ಯಂತ್ರಗಳನ್ನು ತೆಗೆದು multi spindle ಯಂತ್ರಗಳನ್ನು ಅಳವಡಿಸಿತು. ಉತ್ಪತ್ತಿಯನ್ನು ಮತ್ತಷ್ಟು ಹೆಚ್ಚಿಸಿಕೊಂಡಿತು.**

<u>ಕಾರ್ಮಿಕರನ್ನು ಹೊರದಬ್ಬತೊಡಗಿದ ಆಡಳಿತ</u>

ಕಾರ್ಮಿಕರು ತಮ್ಮ ಆದಾಯ ಹೆಚ್ಚಿಸಿಕೊಳ್ಳುವ ಸಲುವಾಗಿ ಅಧಿಕ ಉತ್ಪತ್ತಿಗಾಗಿ ಮತ್ತು ಅವಧಿಗಿಂತ ಹೆಚ್ಚಿನ ಸಮಯ ಕೆಲಸ (ಇನ್ಸೆಂಟಿವ್ ಮತ್ತು ಓಟಿ) ಮಾಡಿ ನಿತ್ರಾಣರಾಗುತ್ತಿದ್ದಂತೆ **ಇವರು ಇನ್ನು ಪ್ರಯೋಜನ ಇಲ್ಲವೆಂದು ಆಡಳಿತ ಮಂಡಳಿ ಸ್ವಯಂ ನಿವೃತ್ತಿ ಯೋಜನೆ (VRS)** ಜಾರಿಗೆ ತಂದಿತು. ಈ ಯೋಜನೆಯ ಮೂಲಕ 500 ಕ್ಕೂ ಅಧಿಕ ಕಾರ್ಮಿಕರನ್ನು ಕಾರ್ಖಾನೆಯಿಂದ ಹೊರಹಾಕಿತು. ಕನಿಷ್ಠ ಸೌಲಭ್ಯವೂ ದೊರಕದ 300 ರಿಂದ 500 ಹಂಗಾಮಿ (ಕಾಂಟ್ರಾಕ್ಟ್ ಕೆಲಸಗಾರರು) ಕಾರ್ಮಿಕರು ಸದಾಕಾಲ ದುಡಿಯುತ್ತಿದ್ದರು. ವರ್ಷಕ್ಕೊಮ್ಮೆ ಅಥವಾ 2 ವರ್ಷಗಳಿಗೊಮ್ಮೆ ಮಾತ್ರ 100 ರಿಂದ 200 ಕಾರ್ಮಿಕರನ್ನು ಮಾತ್ರ ಖಾಯಂ ಮಾಡುತ್ತಿದ್ದರು.

<u>ವಿಶೇಷ ಉದ್ದೇಶದ ಯಂತ್ರಗಳ ಅಳವಡಿಕೆ - ಮತ್ತಷ್ಟು ಸುಲಿಗೆಯತ್ತ</u>

ದಿನಗಳೆದಂತೆ ಉತ್ಪಾದನೆಯನ್ನು ಮತ್ತಷ್ಟು ಹೆಚ್ಚಿಸಲು "ವಿಶೇಷ ಉದ್ದೇಶದ ಯಂತ್ರಗಳನ್ನು" (Special Purpose misson) ಸ್ವಯಂ ಚಾಲಿತ ಯಂತ್ರಗಳ ಜಾಗದಲ್ಲಿ ಅಳವಡಿಸಲಾಯ್ತು. 7 ರಿಂದ 10 ಸ್ವಯಂ ಚಾಲಿತ ಯಂತ್ರಗಳು ಮಾಡುವ ಉತ್ಪಾದನೆಯನ್ನು ಕೇವಲ ಈ ಒಂದು ಯಂತ್ರದ ಮೂಲಕ ಉತ್ಪಾದಿಸತೊಡಗಿದರು. ಮತ್ತೊಮ್ಮೆ ಕಾರ್ಮಿಕರ ಅವಶ್ಯಕತೆ ಮತ್ತಷ್ಟು ಕುಸಿಯಿತು. ಆಡಳಿತ ಮಂಡಳಿ ಕ್ರಮೇಣ ಗುಣಮಟ್ಟ ಮತ್ತು ಪ್ರಮಾಣಕ್ಕೆ ಹೆಚ್ಚು ಗಮನ ನೀಡಲು ಮುಂದಾಯಿತು. ಆರಂಭದಲ್ಲಿ ಈ ಯಂತ್ರಗಳಿಗೆ (S.P.M) ಗಣಕೀಕೃತ ನಿಯಂತ್ರಕಗಳನ್ನು (Numallically controlled) ಅಳವಡಿಸಿತು. ಇದರಿಂದ ಯಂತ್ರಗಳ ಭಾಗಗಳು ಸ್ವಲ್ಪ ಮಟ್ಟಿಗೆ ನಿಖರವಾಗಿ ಚಲಿಸುವಂತೆ ಮಾಡಲಾಯಿತು.

ಹೊಸ ಹೊಸ ಆಧುನಿಕ ಯಂತ್ರಗಳು ಬರುತ್ತಿದ್ದಂತೆಯೇ ಅದೇ ವೇಗದಲ್ಲಿ ಕಾರ್ಮಿಕರ ಸಂಖ್ಯೆ ಗಣನೀಯವಾಗಿ ಇಳಿಮುಖವಾಗ ತೊಡಗಿತು. ಉತ್ಪಾದಿತ ವಸ್ತುಗಳ ಗುಣಮಟ್ಟ ಹೆಚ್ಚುತ್ತಿರುವಂತೆಯೇ ಕಾರ್ಮಿಕರ ಪರಿಣತಿಗೆ ಬೆಲೆ ಕ್ಷೀಣಿಸಿತು. ಕಾರ್ಮಿಕರ ಸಂಖ್ಯೆಯಲ್ಲಿ ಮತ್ತೂ ಕಡಿತ ನೇಮಕಾತಿ ಮೇಲಿನ ಕಡಿವಾಣ, 'ಓವರ್ ಟೈಂ' ನಿರ್ಬಂಧ, ಇನ್ಸೆಂಟಿವ್ ಕಡಿತ ಸಿದ್ಧ ವಸ್ತುಗಳ ಶೇಖರಣೆಯಲ್ಲಿ ಹೆಚ್ಚಳವಾಗಿ ಕೆಲವು ವಿಭಾಗಗಳಲ್ಲಿ ಮುಸುಕಿನ ಲೇ ಆಫ್ ಆರಂಭವಾಯ್ತು.

ಕಾರ್ಮಿಕರು ತಮ್ಮ ಸಮಸ್ಯೆಗಳ ಬೇಡಿಕೆ ಪಟ್ಟಿ ಸಲ್ಲಿಸಿದಾಗಲೆಲ್ಲಾ ಆಡಳಿತ ವರ್ಗ ಪ್ರತಿ ಬೇಡಿಕೆ ಪಟ್ಟಿ ಸಲ್ಲಿಸುವ ಪ್ರಕ್ರಿಯೆ ಮುಂದುವರಿಯಿತು. ಒಪ್ಪಂದದಲ್ಲೇ 'ಉತ್ಪಾದಕತೆ' ವಿಷಯ ಸೇರಿಸಲು ಇನ್ನಿಲ್ಲದ ಪ್ರಯತ್ನ ಮಾಡತೊಡಗಿತು.

<u>ಜಾಗತೀಕರಣದ ಪರಿಣಾಮ ಮಾಲೀಕರ ನಿರಾಕರಣೆ</u>


ಮಾಲೀಕನಿಗೆ ಬರುತ್ತಿದ್ದ ಲಾಭದಲ್ಲಿ ಅಲ್ಪ ಮಟ್ಟದ ಕಡಿತ ಉಂಟಾಗಿದೆ ಇದರಿಂದ ಉಂಟಾದ ಕಡಿತವನ್ನು ಕಾರ್ಮಿಕರ ಮೇಲೆ ಹೇರಲು ಆಡಳಿತ ಮಂಡಳಿ ಯತ್ನಿಸುತ್ತಿದೆ. ಕಾರ್ಮಿಕರು ಈಗಾಗಲೇ ಒಪ್ಪಂದದ ಬೇಡಿಕೆ ಪಟ್ಟಿಯನ್ನು ಸಲ್ಲಿಸಿದ್ದಾರೆ. ಆದರೆ ಆಡಳಿತ ಮಂಡಳಿ ಜಾಗತೀಕರಣದ ಪರಿಣಾಮಗಳನ್ನು ಮುಂದೆ ಮಾಡಿ ಕಾರ್ಮಿಕರ ಬೇಡಿಕೆ ಪಟ್ಟಿಯಂತೆ ಸೌಲಭ್ಯ ನೀಡಲು ನಿರಾಕರಿಸುತ್ತಿದೆ. ಇದೇ ಸಮಯದಲ್ಲಿ 45 ಹಂಗಾಮಿ ಕಾರ್ಮಿಕರನ್ನು ಹೊರಹಾಕಿದೆ. 250 ಕ್ಕೂ ಹೆಚ್ಚು ಕಾರ್ಮಿಕರು 3 ರಿಂದ 4 ವರ್ಷಗಳ ಕಾಲ ದುಡಿದಿದ್ದರೂ ಅವರನ್ನು ಖಾಯಂಗೊಳಿಸಲು ಆಡಳಿತ ಮಂಡಳಿ ನಿರಾಕರಿಸುತ್ತಿದೆ. ಮೈಕೋ ಇತಿಹಾಸದಲ್ಲೆ ಹಂಗಾಮಿ ಕಾರ್ಮಿಕರ ಖಾಯಂಗೆ ಒತ್ತಾಯಿಸಿ ಕಾರ್ಮಿಕ ಆಯುಕ್ತರ ಕಛೇರಿ ಎದುರು ಬೃಹತ್ ಮೆರವಣಿಗೆ ನಡೆಸಲಾಯಿತಾದರೂ ಬೇಡಿಕೆ ಇನ್ನೂ ಈಡೇರಲಿಲ್ಲ. ಹೊಸ ನೇಮಕಾತಿ ಸ್ಥಗಿತಗೊಳಿಸಲಾಗಿದೆ. ವಾರದಲ್ಲಿ ಐದು ದಿನಗಳ ಕೆಲಸ ಜಾರಿಗೆ ತರಲಾಗಿದೆ. ಉತ್ಪಾದಿತ ವಸ್ತುಗಳ ಬೇಡಿಕೆ ಕುಸಿತದಿಂದಾಗಿ ಆಫ್ - ಲೋಡಿಂಗ್‌ನಿಂದಾಗಿ ಸರ್‌ಪ್ಲಸ್, ಅಧಿಕ ದಾಸ್ತಾನು, ಬೇಡಿಕೆದಾರರು ಕಡಿಮೆ ಮತ್ತು ಜಾಗತೀಕರಣ ನೀತಿಯಿಂದಾಗಿ ಪೈಪೋಟಿ ಎದುರಿಸಬೇಕಾದರೆ ಉತ್ಪಾದನಾ ವೆಚ್ಚ ತಗ್ಗಿಸಬೇಕಾಗಿದೆ ಎಂದು ಸಬೂಬು ಹೇಳುತ್ತಿದ್ದಾರೆ.

ಆಧುನಿಕ ಯಂತ್ರಗಳ ಅಳವಡಿಕೆಯಿಂದ ಕೆಲಸಗಾರರ ಸಂಖ್ಯೆಯನ್ನು ಕಡಿಮೆಗೊಳಿಸುತ್ತಿರುವಾಗಲೇ ಅವರ ಮೇಲೆ ಗಧಾಪ್ರಹಾರ ಮಾಡುತ್ತಿರುವ ಮೈಕೋ ಆಡಳಿತವರ್ಗವು, ಕಾರ್ಮಿಕರನ್ನು ಒಡೆದು ಆಳುವ ತಂತ್ರವನ್ನು ಮುಂದುವರಿಸಿದೆ. ಕಾರ್ಖಾನೆಯಲ್ಲಿ ಭಾಷೆ, ಧರ್ಮ, ಜಾತಿ ಸಂಘಟನೆಗಳನ್ನು ಬೆಳೆಸಿತು. ಹಣದ ದೇಣಿಗೆಗಳನ್ನು ನೀಡಿ ಪ್ರೋತ್ಸಾಹಿಸುತ್ತಿದೆ. ಮೈಕೊ ಎಂಪ್ಲಾಯಿಸ್ ಅಸೋಸಿಯೇಷನ್ ಹೋರಾಟಕ್ಕಿಳಿಯುವಾಗ ಹೋರಾಟ ಮುರಿಯಲು, ಸಂಘ ವಿರೋಧಿಗಳನ್ನು ಆಡಳಿತವರ್ಗ ಬಳಸಿಕೊಂಡು ಬಂದಿತು. ಈಗಲೂ ನಿತ್ಯ ಕಿರುಕುಳ ಹಲವು. ಇದನ್ನೆಲ್ಲಾ ಸಮರ್ಥವಾಗಿ ಹೋರಾಟ ಮಾಡಿ ಯಶಸ್ಸು ಪಡೆದದ್ದು ಒಂದು ದೀರ್ಘ ಇತಿಹಾಸ.

ವೇತನ ಪರಿಷ್ಕರಣೆಗೆ ನಿರಾಕರಣೆ

ಕಾರ್ಮಿಕರು ವೇತನ ಪರಿಷ್ಕರಣೆಗೆ ಈಗಾಗಲೇ ಪಟ್ಟಿ ಸಲ್ಲಿಸಿದ್ದು ಇತ್ತೀಚೆಗೆ ಈ ಒಪ್ಪಂದಕ್ಕೆ ಸಂಬಂಧಿಸಿದಂತೆ ನಡೆದ ಮಾತುಕತೆಯಲ್ಲಿ ಆಡಳಿತ ಮಂಡಳಿಯು ಕಾರ್ಮಿಕರ ಯಾವುದೇ ಬೇಡಿಕೆಗಳನ್ನು ಒಪ್ಪಲು ಸಾಧ್ಯವಿಲ್ಲ, ಮಾತುಕತೆ ಅನಗತ್ಯ ಎಂದಿದ್ದಾರೆ.

ವಾರಕ್ಕೆ 5 ದಿನಗಳಕೆಲಸ: ಪ್ರತಿಕೂಲ ಮಾರುಕಟ್ಟೆ ಪರಿಸ್ಥಿತಿ ಹಾಗೂ ಗ್ರಾಹಕರಿಂದ ಬೇಡಿಕೆ.ಕುಸಿದಿರುವ ಕಾರಣ ನೀಡಿ ಆಡಳಿತ ಮಂಡಳಿ ಈಗಾಗಲೇ ವಾರದಲ್ಲಿ 5 ದಿನಗಳ ಕೆಲಸದ ಪದ್ಧತಿ ಜಾರಿಗೊಳಿಸಿದೆ. ಇದು ಸಾಲದೆಂಬಂತೆ ಜೂನ್ 18 ರಿಂದ 22 ರವರೆಗೆ ಕೆಲಸ ಸ್ಥಗಿತಗೊಳಿಸಿದೆ. ರಜಾ ದಿನಗಳಿಗೆ ಲೇ-ಆಫ್ ನೀಡುವುದಾಗಿ ಆಡಳಿತ ಮಂಡಳಿ ಮೊದಲು ತಿಳಿಸಿತ್ತಾದರೂ ಕಾರ್ಮಿಕ ಸಂಘದ ಪ್ರಬಲ ಪ್ರತಿರೋಧದಿಂದಾಗಿ ರಜೆ ಅವಧಿಗೂ ವೇತನ ನೀಡಲು ಒಪ್ಪಿಕೊಂಡಿದೆ.



ಕಳ್ಳನಿಗೊಂದು ಪಿಳ್ಳೆನೆಪ

ಈ ಹೊತ್ತಿಗೆ ಆಧುನೀಕರಣ ತಾಪ ಇಡೀ ಕಾರ್ಖಾನೆಯನ್ನು ವ್ಯಾಪಿಸಿದೆ. ಕಾರ್ಮಿಕರ ಸಂಖ್ಯೆ ಕಡಿಮೆಯಾಗಿದೆ. ಹೀಗಾಗಿ ಸಂಘದ ಸದಸ್ಯತ್ವ 4,300 ರಿಂದ 3,900 ಕ್ಕೆ ಕುಸಿದಿದೆ. 45 ಜನ ಹಂಗಾಮಿ ಕಾರ್ಮಿಕರನ್ನು ಹೊರಗಿಡಲಾಗಿದೆ. 250 ಕ್ಕೂ ಹೆಚ್ಚು ಕಾರ್ಮಿಕರು 3 ರಿಂದ 4 ವರ್ಷ ದುಡಿದಿದ್ದರೂ ಆಡಳಿತ ವರ್ಗ ಖಾಯಂ ಮಾಡಲು ಸಾಧ್ಯವಿಲ್ಲವೆಂದು ಹಠ ಹಿಡಿದಿದೆ. ಮೈಕೊ ಇತಿಹಾಸದಲ್ಲೇ ಮೊದಲ ಬಾರಿಗೆ ಹಂಗಾಮಿ ಕಾರ್ಮಿಕರ ಖಾಯಂಗಾಗಿ ಬೃಹತ್ ಮೆರವಣಿಗೆ ತೆಗೆದು ಕಾರ್ಮಿಕ ಆಯುಕ್ತರಿಗೆ ಮನವಿ ಸಲ್ಲಿಸಲಾಗಿದೆ. ನೇಮಕಾತಿ ನಿಲ್ಲಿಸಲಾಗಿದೆ. ಇಂನ್ಸೆಂಟೀವ್ ಕಾರ್ಡ್, ಓವರ್ ಟೈಂ ರದ್ಧತಿ, ವಾರದಲ್ಲಿ 5 ದಿನ ಕೆಲಸ, ಕದ್ದುಮುಚ್ಚಿ ಕಂಟ್ರಾಕ್ಟರುಗಳ ಮೂಲಕ ಕೆಲಸ ನೀಡುವುದು, ಮೇಲಿಂದ ಮೇಲೆ ವಾರದಲ್ಲಿ 5 ದಿನ ಕೆಲಸ ತಂದು ಕಾರ್ಮಿಕರು ಕಂಗಾಲಾಗುವಂತೆ ಮಾಡುವುದು. "ಸ್ಟಾಕ್ ಜಾಸ್ತಿ ಇದೆ, ಮೈಕೊ ವಸ್ತುಗಳಿಗೆ ಬೇಡಿಕೆದಾರರು ಕಡಿಮೆಯಾಗಿದ್ದಾರೆ, ಪೈಪೋಟಿ ಎದುರಿಸಬೇಕಾಗಿದೆ, ವೆಚ್ಚ ಕಡಿತ ಮಾಡಬೇಕಾಗಿದೆ, ಆದ್ದರಿಂದ ಮುಂದಿಟ್ಟಿರುವ ಬೇಡಿಕೆಯಲ್ಲಿ ಹೆಚ್ಚಿನ ಹಣ ನಿರೀಕ್ಷಿಸಬೇಡಿ" ಎಂದು ಹೇಳುತ್ತಿದ್ದಾರೆ.

ಇಷ್ಟೆಲ್ಲಾ ಹೇಳುವ ಆಡಳಿತವರ್ಗ ಬೆಂಗಳೂರಿನಲ್ಲಿದ್ದ ಒಂದು ಮೈಕೋ ನಾಸಿಕ್‌ನಲ್ಲಿ ಒಂದು ಶಾಖೆ ತೆರೆಯಿತು. ತದನಂತರ ನಾಗನಾಥಪುರದಲ್ಲಿ ಇನ್ನೊಂದು ಘಟಕ ಸ್ಥಾಪಿಸಿತು. ಅದೂ ಅಲ್ಲದೇ ರಾಜಸ್ತಾನದ ಜೈಪುರದಲ್ಲಿ ಮಗದೊಂದು ಘಟಕ ತೆಗೆದು ಅಲ್ಲಿ ಕಾರ್ಮಿಕರಿಗೆ consolidated salary ಸುಮಾರು 2,000 ದಿಂದ 3,000ದವರೆಗೆ ನೀಡಿ ಶೋಷಣೆಯ ನಾಲಿಗೆ ಚಾಚಿ ಲಾಭ ಬೇಕು ಇನ್ನೂ ಲಾಭ ಬೇಕು, **ಕಾರ್ಮಿಕರನ್ನು ಹಿಂಡಬೇಕು, ರಕ್ತ ಪೂರ್ತಿ ಬಸಿದು ಹೋಗುವವರೆಗೆ ಹಿಂಡಬೇಕು, 6,000 ಜನರು ಮಾಡುತ್ತಿದ್ದ ಕೆಲಸವನ್ನು 3,000 ಜನರಿಂದಲೇ ಮಾಡಿಸಿ ಸಿದ್ಧವಸ್ತುಗಳನ್ನು ಸ್ಟಾಕ್... ಸ್ಟಾಕ್... ಸ್ಟಾಕ್... ಮಾಡಿ ಒಪ್ಪಂದದ ಸಮಯದಲ್ಲಿ ಯುದ್ಧಕ್ಕೆ ಸಿದ್ಧವಾಗಿರುವ ಶತೃವಿನಂತೆ ತನ್ನ ಪೈಶಾಚಿಕ ನೃತ್ಯ ಆರಂಭಿಸಿದೆ.** ಇದರ ಪಾಲಿಸಿ ಘೋಷಣೆಗೆ ಕೇಂದ್ರ ಸರ್ಕಾರ ಕಾರ್ಮಿಕರ ಕಾನೂನುಗಳಿಗೆ ಬದಲಾವಣೆ ತಂದು ಕಾರ್ಮಿಕರ ಹಕ್ಕುಗಳನ್ನು ತೆಗೆದುಕೊಳ್ಳಲೂ ಕಾರ್ಮಿಕ ವಿರೋಧಿ ಪೈಶಾಚಿಕ ಎನ್‌ಡಿಎ ಸರ್ಕಾರ ಅಭಯಹಸ್ತ ನೀಡಲು ತುದಿಗಾಲಲ್ಲಿದೆ.

ಮುಗಿದ ಹಂಚು ಕಾರ್ಮಿಕರ ಮುಷ್ಕರ

ಮುಂದುವರಿದ ಉದ್ಯಮಿಗಳ ಕಿರುಕುಳ

ತೆನ್ನೆಲ್ಲಾ ಬಿಕ್ಕಟ್ಟುಗಳ ನಡುವೆ ಕೂಡ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಹಂಚು ಉದ್ಯಮದಲ್ಲಿ ಪ್ರಮುಖ ಪಾತ್ರವಹಿಸಿದೆ. ಈ ನಾಡಿಗೆ ಅತ್ಯುತ್ತಮ ಹಂಚನ್ನು ಒದಗಿಸುತ್ತಿದೆ. ನಾಡಿನಲ್ಲೆಲ್ಲಾ ನೆರಳು ನೀಡಲು ಬೇಕಾಗುವ ಹಂಚು ತಯಾರಿಸುವ ಕಾರ್ಮಿಕರ ಪಾಲಿಗೆ ಸಿಗಬೇಕಾದ ನೆರಳು ಕನಸಿನ ಗಂಟಾಗಿಯೇ ಹಲವು ವರ್ಷಗಳಿಂದ ಮುಂದುವರಿದಿದೆ.

ಕಾರ್ಮಿಕರಿಗೆ ನ್ಯಾಯಯುತವಾಗಿ ಸಿಗಬೇಕಾದ ಯಾವ ಸೌಲಭ್ಯಗಳನ್ನೂ ಕೊಡದೆ.ಉತ್ತರ ಕನ್ನಡದಲ್ಲಿ ಹಂಚನ್ನು ಉತ್ಪಾದಿಸುವ, ಲಾಭಗಳಿಸುವ ಕ್ರಿಯೆ ನಡೆದಿತ್ತು. ಕಾರ್ಮಿಕರಿಗೆ ನಮ್ಮ ಪರವಾದ ಕೆಲವು ಕಾನೂನುಗಳಿವೆ, ನಮ್ಮ ಹಕ್ಕುಗಳ ದಮನ ಆಗುತ್ತಿದೆ ಎನ್ನುವ ಪರಿಜ್ಞಾನವೂ ಬರದಂತೆ ಜೀತದಾಳುಗಳಂತೆ ದುಡಿಸಿಕೊಳ್ಳುತ್ತಿದ್ದರು. ಮಾಲೀಕರು ಹೇಳಿದಷ್ಟು ಕೆಲಸ, ಅವರು ಕೊಟ್ಟಷ್ಟು ಸಂಬಳ, ಹೆಚ್ಚು ಕೇಳಿದರೆ ಕೆಲಸದಿಂದ ವಜಾ ಎನ್ನುವ ಸ್ವಂತ ಕಾನೂನಿನಡಿಯಲ್ಲಿ ನಡೆಯುತ್ತಿರುವ ಉದ್ಯಮದಲ್ಲಿ ಕಾರ್ಮಿಕರ ಪರವಾಗಿ ನಿಂತಿದ್ದು ಸಿಐಟಿಯು. ಅವರ ಹಕ್ಕುಗಳಿಗಾಗಿ ಹೋರಾಡಿದ್ದು ಸಿಐಟಿಯು. ಅವರಿಗೆ ಸಿಗಬೇಕಾದ ಸೌಲಭ್ಯಗಳನ್ನು ಸಂಘಟನಾತ್ಮಕ ಹೋರಾಟದ ಮೂಲಕ ದೊರಕಿಸಿಕೊಟ್ಟದ್ದು ಕೆಂಬಾವುಟ. ಭಟ್ಕಳದ ವೆಂಕಟಾಪುರ, ಮುರ್ಡೇಶ್ವರ, ಚಿತ್ರಾಪುರ, ಹೊನ್ನಾವರದ ಮಾವಿನಕುರ್ವಾ, ಕಾಸರಗೋಡು, ಹಳದೀಪುರ, ಅಂಕೋಲದ ಅಗಸೂರು ಇತ್ಯಾದಿ ಕಾರ್ಖಾನೆಗಳಲ್ಲಿ ಸಿಐಟಿಯು ಕಾರ್ಮಿಕರನ್ನು ಸಂಘಟಿಸಿ, ಹೊಸ ಪ್ರಜ್ಞೆಯನ್ನು ಬೆಳೆಸಿ ಕಾರ್ಮಿಕರು ಕಾರ್ಖಾನೆಯ ಒಳಗಿನ ಯಂತ್ರದಲ್ಲಿ ಅವರೂ ಮನುಷ್ಯರು ಎಂಬುದನ್ನು ತಿಳಿಸಿಹೇಳಿತು. ಕಾರ್ಮಿಕರಿಗೆ ಮಾತನಾಡುವ ಬಾಯನ್ನು ಕೊಟ್ಟು, ತಮ್ಮ ಬೇಡಿಕೆಗಳನ್ನು ತಾವೇ ಕೇಳುವ ವಿಶ್ವಾಸವನ್ನು ಸಿಐಟಿಯು ಹುಟ್ಟಿಸಿತು.

ಇದು ಮಾಲೀಕರಿಗೆ ನುಂಗಲಾರದ ತುತ್ತಾಯಿತು. ಪ್ರತಿದಿನ ಈ ಕಾರ್ಮಿಕ ಸಂಘಟನೆಯನ್ನು ಒಡೆಯುವ, ಹೊಸ ಹೊಸ ತಂತ್ರವನ್ನು ರೂಪಿಸಲು ಆರಂಭಿಸಿದರು. ಆದರೆ ಕಾರ್ಮಿಕರ ಒಗ್ಗಟ್ಟು ಇದಕ್ಕೆ ಅವಕಾಶ ಮಾಡಿಕೊಡಲಿಲ್ಲ. ಖ್ಯಾತ ಉದ್ಯಮಿ ಆರ್.ಎಸ್.ಶೆಟ್ಟಿಯವರ ಮುರ್ಡೇಶ್ವರ ಟೈಲ್ಸ್‌ನಲ್ಲಿ ನಡೆದ ಸುಮಾರು 6 ತಿಂಗಳ ಹೋರಾಟ, ಮಾವಿನಕುರ್ವಾ ಶಾರದಾ ಹಂಚು ಕಾರ್ಖಾನೆಯಲ್ಲಿ ನಡೆದ ಸುಮಾರು 9 ತಿಂಗಳ ಹೋರಾಟ ಮತ್ತು ಅಂತಿಮವಾಗಿ ಕಾರ್ಮಿಕ ಸಂಘಟನೆ ಪಡೆದ ಜಯ ಉದ್ಯಮಿಗಳ ಹಠಮಾರಿತನದ ಸೋಲು ಇಡೀ ಜಿಲ್ಲೆಯಲ್ಲಿ ಕಾರ್ಮಿಕ ಚಳುವಳಿಗೆ ಹೊಸ ಆತ್ಮವಿಶ್ವಾಸವನ್ನು ತುಂಬಿತು. ಅನೇಕರು ಸಿಐಟಿಯುವನ್ನು ಅರಸಿಬಂದು ನೇತೃತ್ವ ಕೊಡಲು ಆಹ್ವಾನಿಸಿದರು.

ಸಂಘಟನೆ ಮುಗಿಸಲು ಮುಂದಾದ ಮಾಲೀಕರು

ಸಿಐಟಿಯುವನ್ನು ಮುಗಿಸಲು ಮಾಲೀಕರು ಮಾಡಿದ ತಂತ್ರ ಇನ್ನೊಂದು ಸಂಘಟನೆಯನ್ನು ಹುಟ್ಟು ಹಾಕುವುದು. ಇಂಥವರ ಪಾಲಿನ ವರದಾನ ಬಿಎಂಎಸ್. ಲಂಚಕ್ಕಾಗಿ ದೇಶವನ್ನೇ ಗಿರವಿ ಅಂಗಡಿಯಲ್ಲಿ ಇಡಲು ಹೇಸದ ಭಾರತೀಯ ಜನತಾ ಪಾರ್ಟಿ(ಬಿಜೆಪಿ)ಯ ಬಾಲಂಗೋಚಿ ಬಿಎಂಎಸ್ ನ್ಯಾಯಯುತ ಹೋರಾಟ ನಡೆಸುವ ಕಾರ್ಮಿಕರ ಒಗ್ಗಟ್ಟನ್ನು ಮುರಿದು ಮಾಲೀಕರಿಗೆ ಲಾಭ ಮಾಡಿಕೊಡಲು ಪ್ರಯತ್ನಿಸದೇ ಇರಲು ಸಾಧ್ಯವೇ? ಮಾಲಿಕರು ಹಾಕುವ ಎಂಜಲು ಕಾಸಿಗೆ ಕೈ ಒಡ್ಡುತ್ತಾ ಕಾರ್ಮಿಕರಿಗೆ ಮೋಸ ಮಾಡಿ, ಮಾಲೀಕರ ಏಜೆಂಟರಾದ ಇವರಿಂದ ಇನ್ನೇನನ್ನು ನಿರೀಕ್ಷಿಸಲು ಸಾಧ್ಯ? ಉತ್ತರ ಕನ್ನಡದಲ್ಲಿ ಎಲ್ಲಾ ಕಾರ್ಖಾನೆಗಳನ್ನು ಅಡ್ಡಾಗಿ ಅನೇಕರಿಗೆ ಸಾಲದ ಆಮಿಷ ತೋರಿಸಿ 3-4 ಜನರಿರುವ ಸಂಘಟನೆಯನ್ನು ಪ್ರಾರಂಭಿಸಿತು. ಬದುಕಿಗಾಗಿ, ಸಿದ್ಧಾಂತಕ್ಕಾಗಿ ಸಂಘಟನೆ ಕಟ್ಟುವವರ ಎದುರು ಹಣಕ್ಕಾಗಿ ಸಂಘಟನೆ ಕಟ್ಟುವವರು ಹೆಚ್ಚು ಹೊತ್ತು ನಿಲ್ಲಲಾರರು ಎನ್ನುವುದು ಮಾಲಿಕರಿಗೆ ಈಗ ಹೆಚ್ಚು ಸ್ಪಷ್ಟ ಆಗಿದೆ. ಇದು ಮೊನ್ನೆ ನಡೆದ ಮುಷ್ಕರದಲ್ಲಿ ಇನ್ನಷ್ಟು ಹೆಚ್ಚು ಸ್ಪಷ್ಟವಾಗಿದೆ.

ಕನಿಷ್ಟ ಕೂಲಿಗಾಗಿ ಹೋರಾಟ

ಅನೇಕ ವರ್ಷಗಳಿಂದ ಸರಕಾರದೊಂದಿಗೆ ನಡೆಸಿದ ಗುದ್ದಾಟದಿಂದಾಗಿ ಕನಿಷ್ಟ ಕೂಲಿ(ಇದು ಕನಿಷ್ಟವೇ)ಯೇನೋ ಪ್ರಕಟ ಆಯಿತು. ಅದು ಗೆಜೆಟ್ಟಿನಲ್ಲಿ ಪ್ರಕಟವಾಗಬೇಕಾದರೆ ಮತ್ತೆ ಹೋರಾಟ ಮಾಡಬೇಕಾಯಿತು. ಆದರೆ ಇದು ಕಾರ್ಖಾನೆಯಲ್ಲಿ ಜಾರಿಗೊಳ್ಳಲಿಲ್ಲ. ಜಾರಿಗೊಳಿಸಬೇಕಾದ ಸರ್ಕಾರ ಮಾಲಿಕರಿಂದ ಲಂಚ ತಿಂದು ಕೈ ಕಟ್ಟಿ ಕುಳಿತುಕೊಂಡಿತು. ಕನಿಷ್ಟ ಕೂಲಿಯನ್ನು ಕಾರ್ಖಾನೆಯಲ್ಲಿ ಜಾರಿಗೊಳಿಸಬೇಕೆಂದು ಮನವಿ, ಅಸಹಕಾರ, ಒಂದು ದಿನದ ಮುಷ್ಕರ, ಮೆರವಣಿಗೆ, ಗೇಟ್ ಮೀಟಿಂಗ್ ಇತ್ಯಾದಿ ಹೋರಾಟಗಳು ವರ್ಷ ಪೂರ್ತಿ ನಡೆದವು. ಅದ್ಯಾವುದೂ ಪ್ರಯೋಜನವಾಗದಿದ್ದಾಗ ಘೋಷಣೆಯಾದ ಅನಿರ್ದಿಷ್ಟಾವಧಿ ಮುಷ್ಕರ ಸುಮಾರು 45 ದಿನಗಳ ಕಾಲ ಮುಂದುವರಿಯಿತು. ಒಂದಿಷ್ಟು ಕಾರ್ಮಿಕರನ್ನು ಬುಟ್ಟಿಗೆ ಹಾಕಿಕೊಂಡು ಮುಷ್ಕರ ಮುರಿಯುವ ಆಲೋಚನೆಯಲ್ಲಿದ್ದ ಮಾಲಿಕರಿಗೆ 40 ದಿನಗಳ ಕಾಲ ಒಂದೇ ಒಂದು ಹಂಚನ್ನು ಹೊರಸಾಗಿಸಲು ಸಾಧ್ಯವಾಗಲಿಲ್ಲ. ಕಾರ್ಮಿಕ ನಾಯಕರ ಹಠಮಾರಿತನವೆಂದು ಪ್ರಚಾರ ಮಾಡಿದರು. ಕನಿಷ್ಟ ಕೂಲಿಗಿಂತ ಹೆಚ್ಚು ಹಣ ಕೊಡುತ್ತೇವೆಂದು ಸುಳ್ಳು ಸುದ್ದಿ ಹಬ್ಬಿಸಿದರು. ಉದ್ಯಮ ಬಿಕ್ಕಟ್ಟಿನಲ್ಲಿದೆ, ಕಾರ್ಖಾನೆ ಮುಚ್ಚುತ್ತೇವೆಂದು ಬೆದರಿಸಿದರು. ಇದಕ್ಕೆ ಮಾಲಿಕರ ಅನಧಿಕೃತ ಪತ್ರಕರ್ತರು ಕೆಲವರು ಪ್ರಚಾರದಲ್ಲಿ ತೊಡಗಿದರು. ಆದರೂ ಅನಿರ್ದಿಷ್ಟಾವಧಿ ಮುಷ್ಕರವನ್ನು ಮುರಿಯಲಾಗಲಿಲ್ಲ. ಕೊನೆಗೂ ಅವರು ನ್ಯಾಯಾಲಯದ ಆದೇಶದೊಂದಿಗೆ ಪೋಲೀಸರ ನೆರವಿನೊಂದಿಗೆ ಹಂಚು ಸಾಗಿಸಬೇಕಾಯಿತು. ಪ್ರಾಣವನ್ನಾದರೂ ಕೊಟ್ಟೇವು ಕನಿಷ್ಟ ಕೂಲಿಯನ್ನು ಕೊಡದೆ ಮುಷ್ಕರ ಬಿಡೆವು ಎಂದು ಕಾರ್ಖಾನೆಯ ಬಾಗಿಲಲ್ಲಿ ಕುಳಿತ ಹೆಂಗಸರನ್ನು ಒಳಗೊಂಡಂತೆ ಕಾರ್ಮಿಕರನ್ನು ಬೆದರಿಸಲು ಉತ್ತರ ಕನ್ನಡದ ಸುತ್ತಮುತ್ತಲಿನ ಎಲ್ಲಾ ಪೋಲೀಸ್ ಅಧಿಕಾರಿಗಳನ್ನು, ನೆರೆಯ ಜಿಲ್ಲೆಯಿಂದ ಪೋಲೀಸ್‌ರನ್ನು ಕರೆತಂದರು. ಅಂತಿಮವಾಗಿ ಕಾರ್ಮಿಕರನ್ನು ಬಂಧಿಸಿಯೇ ಹಂಚನ್ನು ಸಾಗಿಸಬೇಕಾಯಿತು. ಸರ್ಕಾರದ ಆದೇಶವನ್ನು ಉಲ್ಲಂಘಿಸಿದ ಮಾಲಿಕರನ್ನು ಬಂಧಿಸುವ ಬದಲು ಆದೇಶವನ್ನು ಜಾರಿಗೊಳಿಸಲು ಒತ್ತಾಯಿಸಿದವರನ್ನು ಬಂಧಿಸಲು ಹೊರಟಿದ್ದು ವಿಪರ್ಯಾಸವಾದರೂ ಈ ಸರ್ಕಾರದಲ್ಲಿ ಇದು ಸಾಧ್ಯ. ಇಷ್ಟು ಕೆಲಸಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಸುರಿದ ಮಾಲಿಕರು ತಮ್ಮದೇ ಕಾರ್ಖಾನೆಯಲ್ಲಿ ಹಲವಾರು ವರ್ಷಗಳಿಂದ ದುಡಿದು ಲಾಭ ತರುತ್ತಿದ್ದ ಕಾರ್ಮಿಕರಿಗೆ ದಿನಕ್ಕೆ 82 ರೂ. ಕೊಡಲು ಸಿದ್ಧರಿಲ್ಲದಿರುವುದು ಅನೇಕರಿಗೆ ಅಪರಾಧವಾಗಿ ಕಾಣಲೇ ಇಲ್ಲ. ಕಾರ್ಮಿಕರದೇ ತಪ್ಪು ಎಂದು ವಾದ ಮಾಡಿದ ಅನೇಕರು, ಬೇರೆ ರೀತಿಯಿಂದ ಹೋರಾಟ ಮಾಡಬೇಕಿತ್ತು, ಮುಷ್ಕರ ಮಾಡಬಾರದಿತ್ತು ಎನ್ನುವ ಜನರು ಕಳೆದ 2-3 ವರ್ಷಗಳಿಂದ ಕನಿಷ್ಟ ಕೂಲಿ ಕೊಡದಿದ್ದಾಗ (ಯಾವತ್ತೂ ಕನಿಷ್ಟ ಕೂಲಿ ಕೊಟ್ಟಿಲ್ಲ, ಉದ್ಯಮ ನಷ್ಟದಲ್ಲಿದೆ ಇದೆ ಎಂದೇ ವಾದ ಮಾಡಿ ವಂಚಿಸಿದರು) ಯಾಕೆ ಬಾಯಿಮುಚ್ಚಿ ಕುಳಿತಿದ್ದರು? ಯಾಕೆ ಅವರ ಪತ್ರಿಕೆಯಲ್ಲಿ ಇದನ್ನು ಸುದ್ದಿ ಮಾಡಲೇ ಇಲ್ಲ? ಮಾಲಿಕರಿಗೆ ನಷ್ಟವಾಗುತ್ತಿದೆ ಎಂದಾಗ ಇವರೆಲ್ಲಾ ಪ್ರಪಂಚವೇ ತಲೆಕೆಳಗಾದಂತೆ ಗೋಳಾಡಿದ್ದೇಕೆ?

ನಿಸರ್ಗ

ಕೊನೆಗೂ ಮುಕ್ತಾಯಗೊಂಡ ಮುಷ್ಕರ

ಕೊನೆಗೂ ಮಾಲಿಕರು ಕನಿಷ್ಟ ಕೂಲಿ ಕೊಡಲು ಒಪ್ಪಿದರು. ಭಟ್ಕಳ ಉಪವಿಭಾಗಾಧಿಕಾರಿ ಶ್ರೀ ಸಂಜಯ ಶೆಟ್ಟಣ್ಣರವರ ಮತ್ತು ಕಾರ್ಮಿಕ ಅಧಿಕಾರಿಗಳ ಸಮ್ಮುಖದಲ್ಲಿ ಮಾಲಿಕರು ಮತ್ತು ಕಾರ್ಮಿಕ ನಾಯಕರ ನಡುವೆ ಒಪ್ಪಂದವಾಗಿ ಸರ್ಕಾರ ನಿಗದಿಪಡಿಸಿದ ಕನಿಷ್ಟ ಕೂಲಿಯನ್ನು ಕೊಡಬೇಕು, 10 ದಿನದಲ್ಲಿ ಕಾರ್ಖಾನೆ ಪ್ರಾರಂಭ ಮಾಡಬೇಕು, ಮುಷ್ಕರ ನಿರತ ಪೂರ್ವದ ಸ್ಥಿತಿಯನ್ನು (ಕೆಲಸದ ಸ್ವರೂಪ) ಕಾಯ್ದುಕೊಳ್ಳಬೇಕು, ಕಾರ್ಮಿಕರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಬಾರದು ಎಂದು ಒಪ್ಪಂದದಲ್ಲಿ ನಮೂದಿಸಿದರು. ಒಪ್ಪಂದದ ಸಂದರ್ಭದಲ್ಲಿ ಕಾಂ. ವಿ.ಜೆ.ಕೆ.ನಾಯರ್, ಕೆ.ಶಂಕರ, ಟಿ.ಎಸ್.ನಾಯಕ್, ತಿಲಕಗೌಡ, ಸುಭಾಷ ಕೊಪ್ಪಿಕರ, ಶಾಂತರಾಮ ನಾಯಕ ಹಾಜರಿದ್ದರು.

ಮುಂದುವರಿದ ಕಿರುಕುಳ

ಒಪ್ಪಂದವಾಗಿ ತಿಂಗಳಾಗುತ್ತಿರುವಂತೆ ಅನೇಕ ಕಾರ್ಖಾನೆಯಲ್ಲಿ ಕಾರ್ಮಿಕರ ಕೆಲಸದ ಸ್ವರೂಪವನ್ನು ಬದಲಾಯಿಸಲಾಗುತ್ತಿದೆ. ಕನಿಷ್ಟ ಕೂಲಿಯನ್ನು ಕೊಡಲು ಮತ್ತೆ ಹಿಂಜರಿಯುತ್ತಿದ್ದಾರೆ. ಅನೇಕ ಕೆಲಸಗಾರರನ್ನೇ ಕೈ ಬಿಡಲಾಗುತ್ತಿದೆ. ಮುಷ್ಕರದಲ್ಲಿ ಪಾಲ್ಗೊಂಡರೆಂಬ ಕಾರಣಕ್ಕೆ ಅನೇಕ ಕಾರ್ಮಿಕರು ನಮ್ಮವರೇ ಅಲ್ಲ ಎಂಬ ವಾದ ಹೂಡಲಾಗುತ್ತಿದೆ.

ಒಪ್ಪಂದದಲ್ಲಿ ಪ್ರಮುಖ ಮಾತುಗಾರರಾಗಿ ಕೆಲಸ ಮಾಡಿದ ವೆಂಕಟಾಪುರದ ಹಂಚಿನ ಕಾರ್ಖಾನೆಯ ಮಾಲಿಕ ರಾಜೇಶ ನಾಯ್ಕ ಸುಮಾರು 15 ಕಾರ್ಮಿಕರನ್ನು (ಇವರು ಮುಷ್ಕರದ ಸಂದರ್ಭದಲ್ಲಿ ಬಿಎಂಎಸ್ ಬಿಟ್ಟು ಸಿಐಟಿಯು ಸೇರಿದವರು) ಕೆಲಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಇವರು ನಮ್ಮವರೇ ಅಲ್ಲ ಎಂದು ಒಂದು ಕಡೆ ವಾದವಾದರೆ ಸಿಐಟಿಯು ಬಿಟ್ಟು ಅದರ ನಾಯಕರನ್ನು ಬಯ್ದು ಬಂದರೆ ಸೇರಿಸುವುದಾಗಿ ಅಲ್ಲಿಯ ಮಾಲಿಕರ ಪರವಾದ ಕಾರ್ಮಿಕ ಸಂಘಟನೆ ಹೇಳುತ್ತಿದೆ. 'ಮುಖ ಅಡಿಯಾಗಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲ' ಎನ್ನುವ ಸ್ಥಿತಿ ಸಾಬೀತು ಮಾಡುವ ತಂತ್ರ ಇದು.

ಉತ್ತರ ಕನ್ನಡದಲ್ಲಿ ಇನ್ನೊಂದು ಮುಖ್ಯ ಕಾರ್ಖಾನೆ ಮುರ್ಡೇಶ್ವರ ಟೈಲ್ಸ್ ಫ್ಯಾಕ್ಟರಿ. ಇದರ ಮಾಲಕರು ಖ್ಯಾತ ಉದ್ಯಮಿ, ದಾನಿ, ದೈವಭಕ್ತ ಎಂದೆಲ್ಲಾ ಹೆಸರು ಪಡೆದಿರುವ ಶ್ರೀ ಆರ್.ಎನ್.ಶೆಟ್ಟಿ.ಇವರೂ ಕನಿಷ್ಟ ಕೂಲಿ ಕೊಟ್ಟಿರಲಿಲ್ಲವೇ? 200 ರಷ್ಟಿರುವ ಕಾರ್ಮಿಕರಿಗೆ ಕನಿಷ್ಟ ಕೂಲಿಯನ್ನು ಕೊಡಲು ಇವರದೂ ವಿರೋಧವಿದೆಯೇ? ಎಂದು ನೀವು ಆಶ್ಚರ್ಯದಿಂದ ಪ್ರಶ್ನಿಸಬಹುದು. ಕನಿಷ್ಟ ಕೂಲಿ ವಿರೋಧವಿದೆ ಅಷ್ಟೇ ಅಲ್ಲ, ಮುಷ್ಕರ ನಿರತ ಕಾರ್ಮಿಕರ ಮೇಲೆ ಸೇಡಿನ ಕ್ರಮ ಕೈಗೊಳ್ಳುವುದರಲ್ಲೂ ಈ ಕಾರ್ಖಾನೆ ಮುಂದಿದೆ.

ಜಿಲ್ಲೆಯಲ್ಲಿ ಕಾರ್ಮಿಕರ ಮುಷ್ಕರ ನಡೆಯುತ್ತಿರುವಾಗಲೇ ಅವರ ಕಾರ್ಖಾನೆಯಲ್ಲಿ ದುಡಿಯುತ್ತಿದ್ದ ಕಾರ್ಮಿಕರು ವಾಸ ಮಾಡುತ್ತಿದ್ದ ಮನೆಯನ್ನು (ಕಾರ್ಖಾನೆಯಿಂದ ಕೊಟ್ಟಿದ್ದು) 7 ದಿನದಲ್ಲಿ ಬಿಡಲು ನೋಟೀಸ್ ಮಾಡಿದರು. ಸುಮಾರು 35-40 ಕುಟುಂಬಗಳನ್ನು ಹೊರಹಾಕಿದರು. ಒಂದು ಕಡೆ ಮುಷ್ಕರದ ವೇಳೆಯಲ್ಲಿ ಸಂಬಳವಿಲ್ಲ. ಇನ್ನೊಂದುಕಡೆ ಉಳಿಯಲು ಮನೆಯಿಲ್ಲದೆ ಕಾರ್ಮಿಕ ಕುಟುಂಬ ಸಣ್ಣ ಮಕ್ಕಳನ್ನು ಹೊತ್ತುಕೊಂಡು

ಪುಟ 2 ಕ್ಕೆ



ಕನಿಷ್ಟ ಕೂಲಿ ಹೋರಾಟ ಮತ್ತು ಬಿಎಂಎಸ್

ಕನಿಷ್ಟ ಕೂಲಿಗಾಗಿ ಜಿಲ್ಲೆಯಲ್ಲಿ ಹೋರಾಟ ಪ್ರಾರಂಭವಾಗುತ್ತಿದ್ದಂತೆ ಬಿಎಂಎಸ್ ನಾಯಕರು ಮಾಲಕರೊಂದಿಗೆ ಗುಪ್ತ ಒಪ್ಪಂದ ಮಾಡಿಕೊಂಡು ಕಾರ್ಖಾನೆಯ ಒಳಗೆ ನಾವು ಕೆಲಸ ಮಾಡುವುದಾಗಿ ಭರವಸೆ ಕೊಟ್ಟರು. ನ್ಯಾಯಯುತ ಬೇಡಿಕೆ ಆದ ಕನಿಷ್ಟ ಕೂಲಿಯ ಬೇಡಿಕೆಯನ್ನು ನಾವು ಒಪ್ಪುವುದಿಲ್ಲವೆಂದರು. ಅಲ್ಲಿಯದೇ ಕಾರ್ಮಿಕರ ಒತ್ತಡ ಬಂದಾಗ ನಾವು ಕನಿಷ್ಟ ಕೂಲಿಗಾಗಿ ಕಪ್ಪುಬಟ್ಟೆ ಹಚ್ಚಿಕೊಂಡು ಪ್ರತಿಭಟಿಸುತ್ತೇವೆ ಎಂದರು. ಒಂದೆರಡು ದಿನದಲ್ಲಿ ಕಪ್ಪು ಬಟ್ಟೆ ಮಾಯ! ಸಿಐಟಿಯು ಮತ್ತು ಮಾಲಿಕರ ನಡುವೆ ಒಪ್ಪಂದ ಆಗುತ್ತಿದ್ದಂತೆ ಕನಿಷ್ಟ ಕೂಲಿಗಾಗಿ ಬಿಎಂಎಸ್ ಒತ್ತಾಯ ಎಂದು ಪತ್ರಿಕೆಯಲ್ಲಿ ಹೇಳಿಕೆ ಕೊಡಲು ಪ್ರಾರಂಭಿಸಿದರು. ಈ ಮಧ್ಯೆ ಜಿಲ್ಲೆಯ ಬಿಜೆಪಿ ಕೂಡ ಮನೆ ಮುರುಕು ಕೆಲಸವನ್ನು (ಬಿಜೆಪಿ ಯಾವತ್ತೂ ಮಾಡುವುದು ಅದನ್ನೇ ಎನ್ನುವುದು ಬೇರೆ ಮಾತು) ಮಾಡಲು ಪ್ರಾರಂಭಿಸಿತು. "ಕಮ್ಯುನಿಸ್ಟನ್ನು ಬಿಟ್ಟು ಹೊರಬನ್ನಿ, ಬಿಎಂಎಸ್‌ನ್ನು ಸೇರಿ" ಎಂದು ಪತ್ರಿಕೆ ಮೂಲಕ ಕರೆ ಕೊಟ್ಟಿತು. ಕಾರ್ಮಿಕ ವಿರೋಧಿ, ಮಾಲಕರ ಪರ ಎನ್ನುವುದನ್ನು ಸಾಬೀತುಪಡಿಸಿತು. ಆದರೆ ಒಂದೇ ಒಂದು ಕಾರ್ಮಿಕ ಈ ಕರೆಗೆ ಓಗೊಡಲಿಲ್ಲ. ಬದಲಾಗಿ ವೆಂಕಟಾಪುರದಂತ ಫ್ಯಾಕ್ಟರಿಗಳಲ್ಲಿ 10-15 ಜನ ಸಿಐಟಿಯು ಸಂಘವನ್ನು ಸೇರಿದರು.

ತೋಟ ಕೈಗಾರಿಕೆ

ಬಿಕ್ಕಟ್ಟಿನ ಭಾರ, ಕಾರ್ಮಿಕರ ಮೇಲೆ ಹೊರಿಸಬಯಸುವ ಮಾಲೀಕರು

ಉದಾರೀಕರಣದ ಬಿಸಿ ಕಾಫಿಯಂಥ ಪ್ಲಾಂಟೇಶನ್‌ಗೂ ತಟ್ಟಿದೆ. ಆದರೆ ಈ ಭಾರವನ್ನು ಕಾರ್ಮಿಕರ ಮೇಲೆ ಹೊರಿಸಲು ಮಾಲೀಕರು ಬಯಸುತ್ತಿದ್ದಾರೆ. ಇದನ್ನು ಒಪ್ಪಲುಸಾಧ್ಯವೆ ಅಲ್ಲಿನ ಕಾರ್ಮಿಕರ ಬವಣೆಯ ಪರಿಸ್ಥಿತಿ, ಪರಿಹಾರ ಮಾರ್ಗಗಳ ಬಗ್ಗೆ ವಿವರಿಸಿರುವ ಲೇಖನವಿದು.

ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿದ್ದ ಕಾಫಿ ಮಂಡಳಿಯ ಮೂಲಕ ಕಾಫಿಯ ಮಾರಾಟ ಬೇಡವೆಂದು ಕಾಫಿ ಮಂಡಳಿಯನ್ನು ರದ್ದು ಮಾಡಿ, ತಾವು ಬೆಳೆದ ಕಾಫಿಯನ್ನು ತಾವೇ ಮಾರಲು ಮುಕ್ತ ಅವಕಾಶ ಬೇಕೆಂದು ಹೋರಾಟ ಮಾಡಿದ ತೋಟ ಮಾಲೀಕರು, ಮುಕ್ತ ಮಾರಾಟದ ಅವಕಾಶ ತಮ್ಮ ಉತ್ಪಾದನೆಗೆ ಸಿಕ್ಕ ಹೆಚ್ಚಿನ ಬೆಲೆ ತಾತ್ಕಾಲಿಕವೆಂದೂ, ಜಾಗತೀಕರಣ, ಉದಾರೀಕರಣ ನೀತಿ ತಮ್ಮನ್ನು ದಿವಾಳಿ ಎಬ್ಬಿಸುತ್ತದೆಂದು ತಿಳಿಯಲು ಬಹಳ ವರ್ಷಗಳು ಬೇಕಾಗಲಿಲ್ಲ. ವಿಶ್ವವಾಣಿಜ್ಯ ಒಪ್ಪಂದದಡಿ 1429 ವಸ್ತುಗಳ ಮುಕ್ತ ಆಮದಿನಲ್ಲಿ ಕಾಫಿ, ಚಹಾ, ರಬ್ಬರ್, ಕರಿಮೆಣಸು, ಏಲಕ್ಕಿ ಮೊದಲಾದ ತೋಟ ಕೈಗಾರಿಕೆಯ ಬೆಳೆಗಳು ಸೇರಿವೆ.

ವಿದೇಶದಿಂದ ಕಾಫಿ ಆಮದು ನಾಯಿಕೊಡೆಗಳಂತೆ ಹಲ್ಲರ್‌ಗಳು

ಈಗಾಗಲೇ ಶ್ರೀಲಂಕಾದಿಂದ ಚಹಾ, ವಿಯೆಟ್ನಾಂ ಮತ್ತು ಬ್ರೆಜಿಲ್‌ನಿಂದ ಕಾಫಿ ನಮ್ಮ ದೇಶಕ್ಕೆ ಹೇರಳವಾಗಿ ಆಮದಾಗಲು ಪ್ರಾರಂಭಿಸಿದೆ. ಇದರ ಜೊತೆಗೆ ಕಾಫಿ ಮಂಡಳಿಯ ನಿಯಂತ್ರಣವಿಲ್ಲದೆ ಮುಕ್ತ ಮಾರುಕಟ್ಟೆಯ ಪರಿಣಾಮ ನಾಯಿ ಕೊಡೆಗಳಂತೆ ಹುಟ್ಟಿಕೊಂಡ ಕಾಫಿ ಕ್ಯೂರಿಂಗ್‌ಗಳು, ಕಾಫಿ ಹಲ್ಲರ್‌ಗಳು, ಕಾಫಿ ರಫ್ತುದಾರರು, ಹೇಗೆಂದರೆ ಹಾಗೆ ಕಾಫಿಯನ್ನು ಸರಿಯಾದ ಗುಣಮಟ್ಟ ಕಾಪಾಡದೆ, ಅಂತರರಾಷ್ಟ್ರೀಯ ಮಾರುಕಟ್ಟೆಗೆ ಬಿಡುಗದೆ ಮಾಡಿದ ಪರಿಣಾಮವಾಗಿ, **ಹಿಂದೆ ಭಾರತದ ಕಾಫಿಗೆ ಇದ್ದ ವಿಶೇಷ ವಿಶಿಷ್ಟತೆ ಹೋಗಿ ಭಾರತದ ಕಾಫಿ ಎಂದರೆ 'ಬಲ್ಕ್ ಕಾಫಿ' ಎಂದು ಶೇ 22 ರಷ್ಟು ದರ ಕಡಿತದ ಹೀನಾಯ ಸ್ಥಿತಿ ಸಹ ಇಂದು ನಮ್ಮ ಕಾಫಿ ಬೆಳೆಯ ಮೇಲೆ ದುಷ್ಟ ಪರಿಣಾಮ ಬೀರಿದೆ.**

ಬೆಲೆ ಕುಸಿತ

ಇದರಿಂದ ಕಳೆದ 2 ವರ್ಷಗಳಿಂದ ಕಾಫಿ ಬೆಲೆ ತೀವ್ರ ಕುಸಿತ ಕಂಡಿದೆ. 1991-92 ರಲ್ಲಿ 50 ಕೆ.ಜಿ. ಅರೇಬಿಕಾ ಪಾರ್ಚ್‌ಮೆಂಟ್ ಕಾಫಿಗೆ ಸುಮಾರು 7000 ದಿಂದ 7500 ಇದ್ದದ್ದು ಈಗ ಕೇವಲ ರೂ. 200 ಕ್ಕೆ ಬಂದು ನಿಂತಿದೆ. ರೊಬಸ್ಟಾ ಪಾರ್ಚ್‌ಮೆಂಟ್ ಆಗ 4000 ದಷ್ಟಿದ್ದದ್ದು ಈಗ ಒಂದು ಸಾವಿರಕ್ಕೆ ಬಿಕರಿಯಾಗುತ್ತಿದೆ. ರೊಬಸ್ಟಾ ಚೆರಿ ರೂ. 500 ರಿಂದ 550 ರೂಗೆ ಬಂದು ನಿಂತಿದೆ. ಇತ್ತೀಚಿನ ವರ್ಷಗಳಲ್ಲಿ ಉತ್ಪಾದನಾ ವೆಚ್ಚವು ವಿಪರೀತವಾಗಿ ಹೆಚ್ಚಾಗಿದ್ದು, ಇಂದು ಸಿಕ್ಕುವ ದರ ಉತ್ಪಾದನಾ ವೆಚ್ಚವನ್ನು ಸರಿದೂಗಿಸಲು ಸಾಧ್ಯವಾಗದ ಪರಿಸ್ಥಿತಿ ಬಂದೊದಗಿದೆ.

ಬಿಕ್ಕಟ್ಟಿನ ಭಾರ ವರ್ಗಾಯಿಸುವ ಉಪಾಯ.

ಮುಕ್ತ ಆಮದು ನೀತಿಯ ಪರಿಣಾಮದಿಂದ ಕಾಫಿ, ರಬ್ಬರ್, ಚಹಾ, ಮಾತ್ರವಲ್ಲದೆ ಕರಿಮೆಣಸಿನ ಆಮದು ಸಹ ಬೆಳೆಗಾರರ ಮೇಲೆ ದೊಡ್ಡ ಪ್ರಹಾರ ನಡೆಸಿದೆ. ಕಳೆದ ಸಾಲಿನಲ್ಲಿ ಒಂದು ಕೆ.ಜಿ. ಕರಿಮೆಣಸಿನ ಬೆಲೆ ರೂ. 250 ಇದ್ದದ್ದು ಈಗ ರೂ. 70 ರಿಂದ 80 ಕ್ಕೆ ಇಳಿದಿದೆ.

ಬೆಳೆಗಾರರು ಕೈಗಾರಿಕೆಯ ಈ ತೀವ್ರ ಬಿಕ್ಕಟ್ಟಿಗೆ ಕಾರಣವಾದ ಕೇಂದ್ರ ಸರ್ಕಾರದ ವಿರುದ್ಧ ಲಕ್ಷಾಂತರ ಕಾರ್ಮಿಕರೊಡಗೂಡಿ ಹೋರಾಡಿ ಕೈಗಾರಿಕೆಯನ್ನು ಉಳಿಸಲು ಮುಂದೆ ಬರುವುದು ಬಿಟ್ಟು, ಕೈಗಾರಿಕೆಯ ಬಿಕ್ಕಟ್ಟಿನ ಭಾರವನ್ನು ಕಾರ್ಮಿಕರ ಮೇಲೆ ಹೊರಿಸಲು ಹೊರಟಿದ್ದಾರೆ.

ಕಾಫಿ ಕುಯ್ಲಿನ ಮತ್ತಿತರ ಸಂದರ್ಭಗಳಲ್ಲಿ ರಾಜ್ಯದ ಇತರೆ ದೂರದ ಜಿಲ್ಲೆಗಳಿಂದ ಒಂದಿಷ್ಟು ಹಣ ಸಂಪಾದಿಸಲು ಕಾಫಿ ಬೆಳೆಯುವ ಪ್ರದೇಶಕ್ಕೆ ಬರುವ ಬಡ ರೈತರು, ಕೃಷಿ ಕಾರ್ಮಿಕರು ಈಸಲ ದಿನಕ್ಕೆ 58-60 ರೂಗಳಿಗೆ ಬದಲು ರೂ. 30 ರಿಂದ 35 ಕ್ಕೆ ದುಡಿಯಬೇಕಾದ ದುಸ್ಥಿತಿ ಬಂದಿದೆ. ಕಾಂಟ್ರಾಕ್ಟ್ ಕೆಲಸದಲ್ಲಿ ಹೆಚ್ಚಿಗೆ ದುಡಿಯಬಹುದೆಂದು ಖಾಯಂ ಕೆಲಸ ಬಿಟ್ಟು ಮನೆ ಮಾಡಿ ಹೆಚ್ಚಿಗೆ ಸಂಬಳಕ್ಕೆ ಕೆಲಸ ಮಾಡಲು ಹೊರಟಿದ್ದ ಕೂಲಿಗಳು ಈಗ ತೋಟಗಳಲ್ಲಿ ಕೆಲಸವಿಲ್ಲದೆ, ಮಾಲೀಕರನ್ನು ಕಾಡಿಬೇಡಿ ತಮ್ಮ ಜೀವನಕ್ಕಾಗಿ ರೂ. 35 ಕ್ಕೆ ಕೆಲವು ಪ್ರದೇಶಗಳಲ್ಲಿ ರೂ. 30 ಕ್ಕೆ ದುಡಿಯುವ ಹೀನಾಯ ಸ್ಥಿತಿ ಬಂದಿದೆ.

ಹಿಂದೆ ಕಾರ್ಮಿಕರು ವ್ಯಾನುಗಳಲ್ಲಿ ಬಂದು ಕೆಲಸ ಮಾಡುವ ತೋಟಗಳಿಗೆ ಕರೆದುಕೊಂಡು ಹೋಗಲು ಪೈಪೋಟಿ ನಡೆಸುವ ದೃಶ್ಯ ಕಾಣುತ್ತಿತ್ತು. ಆದರೆ ಈಗ ಅಂತಹ ಪ್ರದೇಶಗಳಲ್ಲಿ ಒಂದೋ ಎರಡೋ ವಾಹನಗಳು ಮಾತ್ರ ಬಂದು ಜನಗಳನ್ನು ಕರೆದುಕೊಂಡು ಹೋಗುತ್ತವೆ. ಕಾರ್ಮಿಕರು ತಾವೇ ಕೆಲಸ ಅರಸಿ ಕಡಿಮೆ ಕೂಲಿಗೆ ದೂರದೂರದ ತೋಟಕ್ಕೆ ನಡೆದುಕೊಂಡೋ, ಬಸ್ಸು, ವ್ಯಾನ್‌ನಲ್ಲಿ ತಾವೇ ಹಣ ಕೊಟ್ಟು ಹೋಗುವುದನ್ನು ಕಾಣಬಹುದು. ಖಾಯಂ ಕಾರ್ಮಿಕರಿಗೆ ಹಲವು ವರ್ಷಗಳಿಂದ ಕಂಪನಿ ತೋಟಗಳಲ್ಲಿ ಶೇ 20 ರಷ್ಟು ಬೋನಸ್ಸಿಗೆ ಕತ್ತರಿ ಬೀಳುತ್ತಿದೆ. 1.1.2001 ರಿಂದ ಕಾಫಿ ಕುಯ್ಲಿನ ಸಂದರ್ಭದಲ್ಲಿ ದಿನದ ನಿಗದಿಗಿಂತ ಹೆಚ್ಚಿಗೆ ಕುಯ್ದರೆ ಅದಕ್ಕೆ ನೀಡಬೇಕಾದ ಹೆಚ್ಚಿನ ದರದ ಒಪ್ಪಂದ ಆಗಲಿಲ್ಲ. **ಅನೇಕ ತೋಟಗಳಲ್ಲಿ ವಾರಕ್ಕೆ 4-5 ದಿನ ಕೆಲಸ ಮಾಡಿಸುತ್ತಿದ್ದಾರೆ. ವೈದ್ಯಕೀಯ ಖರ್ಚನ್ನು ಕಡಿತ ಮಾಡಲಾಗುತ್ತಿದೆ. ಕಾರ್ಮಿಕರ ಕೆಲಸದ ವೇಳೆಯನ್ನು ಹೆಚ್ಚು ಮಾಡಲಾಗುತ್ತಿದೆ.** ಆದರೆ ನಮ್ಮ ಸಂಘಟನೆಯಿರುವ(ಸಿಐಟಿಯು) ಪ್ರದೇಶಗಳಲ್ಲಿ ನಾವು ಕೆಲಸದ ವೇಳೆಯನ್ನು ಹೆಚ್ಚು ಮಾಡಲು ಒಪ್ಪಿಗೆ ನೀಡಲಿಲ್ಲ.

ತೋಟಗಳಲ್ಲಿ ಸಕಾಲಕ್ಕೆ ಹಾಕಬೇಕಾದ ಗೊಬ್ಬರ ಹಾಕುವುದು, ಕ್ರಿಮಿನಾಶಕ ಔಷಧಿ, ಸಿಂಪಡಿಸುವುದು, ಮರಕಸಿ, ಗಿಡಕಸಿ ಮೊದಲಾದ ನಿರಂತರ ಕೆಲಸಗಳನ್ನು ಹಣದ ಕೊರತೆಯಿಂದ ತೋಟದ ಮಾಲೀಕರು ಕಡಿಮೆ ಮಾಡುತ್ತಿದ್ದಾರೆ. ಇದರಿಂದ ಮುಂದೆ ತೋಟಗಳು ನಾಶವಾಗಿ ಸಾವಿರಾರು ಕಾರ್ಮಿಕರು ನಿರುದ್ಯೋಗಿ ಪಡೆ ಸೇರಬೇಕಾಗುತ್ತದೆ. ಇದರ ಜೊತೆ ತೋಟಗಳ ಸಮೀಪ ಇರುವ ಊರುಗಳಲ್ಲಿ ಸಹ ವ್ಯಾಪಾರ ವಹಿವಾಟುಗಳು ಕುಸಿದಿವೆ. ಗ್ಯಾರೇಜುಗಳಲ್ಲಿ ಕೆಲಸ ಕಡಿಮೆಯಾಗಿದೆ. ಕಟ್ಟಡ ಕಟ್ಟುವ ಕಾರ್ಮಿಕರು, ಮರಗೆಲಸ ಮಾಡುವ ಕೆಲಸಗಾರರು, ಕೆಲಸವಿಲ್ಲದೆ ಪರದಾಡುತ್ತಿದ್ದಾರೆ.

ಜಾಗತೀಕರಣದ ಪರಿಣಾಮ ಇಂದು ಪ್ಲಾಂಟೇಶನ್ ವಿಭಾಗದ ಎಲ್ಲಾ ಜನರನ್ನು ಬಾಧಿಸುತ್ತಿದೆ. ಹಿಂದೆ ಕೇವಲ ಕಾರ್ಮಿಕರು ತಮ್ಮ ಬೇಡಿಕೆಗಳಿಗೆ ಹೋರಾಟ ನಡೆಸುತ್ತಿದ್ದರು. ಆದರೆ **ಇಂದು ಬಹಳ ಪ್ರತಿಷ್ಠೆ ಹೊಂದಿದ್ದ ಕಾಫಿ ಬೆಳೆಗಾರ ಪ್ಲಾಂಟರ್‌ಗಳು ಬೀದಿಯಲ್ಲಿ ಹೋರಾಟಕ್ಕೆ ಇಳಿಯಬೇಕಾದ ಪರಿಸ್ಥಿತಿ ಬಂದಿದೆ. ಆದರೂ ಇವರು ಲಕ್ಷಗಟ್ಟಲೆ ಇರುವ ಕಾರ್ಮಿಕರನ್ನು ತಮ್ಮ ಜೊತೆಯಲ್ಲಿ ಹೋರಾಟದ ಕಣಕ್ಕಿಳಿಸಲು ಹಿಂದೇಟು ಹಾಕುತ್ತಿದ್ದಾರೆ.** ಬಹುಸಂಖ್ಯೆಯ ತೋಟ ಕಾರ್ಮಿಕರನ್ನು ಪ್ರಜ್ಞಾವಂತರನ್ನಾಗಿ ಮಾಡಿ, ಕೇಂದ್ರ ಸರ್ಕಾರದ ಜಾಗತೀಕರಣದ ಅಪಾಯದ ವಿರುದ್ಧ ಸಂಘಟಿತ ಹೋರಾಟ ಮಾತ್ರ ಎಲ್ಲ ಸಮಸ್ಯೆಗಳಿಗೆ ಮದ್ದಾಗಬಲ್ಲದು.

ವಿ.ಸುಕುಮಾರ್
ಚಿಕ್ಕಮಗಳೂರು

ಪರ್ಯಾಯ

ಕಾಫಿ ಬೆಳೆದು ಕಂಗೆಟ್ಟ ಜನಕೆ ಹೆಣ್ಣು ಹೃದಯ ಹೊತ್ತ ಜಿಲ್ಲಾಧಿಕಾರಿ ಶ್ರೀಮತಿ ಜಯಂತಿಯವರು ಸಾಂತ್ವನ ನೀಡಿದರಂತೆ "ಕಾಫಿ ಜೊತೆ ಮತ್ತೆ ಏನನ್ನಾದರೂ ಬೆಳೆಯಿರಿ". ನಾಲ್ಕು ಹೆತ್ತು ಒಂದು ಸತ್ತರೆ ಇನ್ನೊಂದಾದರೂ ಉಳಿಯಲಿ ಎಂದು ಹಿಂದಿನವರು ಹಾರೈಸುತ್ತಿದ್ದಂತೆ ಹಾರೈಸಿದರಂತೆ.

ಅಕ್ಕ-ಅಕ್ಕ
ಶುಂಠಿ ಬೆಳೆದು ಶುಂಠರಾದೆವು
ಕಿತ್ತಲೆ ಬೆಳೆದು ಬೆತ್ತಲೆಯಾದವು

ಮೆಣಸು ಬೆಳೆದು ಕನಸು ಕಂಡು
ಮೆಣಸೂ ಇಲ್ಲ - ಗೆಣಸೂ ಇಲ್ಲದಂತಾಯಿತು!
ಕೌಂಗು-ತೆಂಗು ಬೆಳೆದು ಮಂಗಗಳಾದೆವು
ಕೊಂಡು ಕಾರು. ಜೀಪುಗಳನ್ನು ಮಾರಿ
ಪಾದಚಾರಿಗಳಾಗಿದ್ದೇವೆ.

ಕು.ಜ.ಅಮೋದ ಪ್ರಮೋದಗಳಿಲ್ಲದೆ
ಜೀವನವೆಲ್ಲಾ ಸಪ್ಪೆ ಆಗಿ ಹೋಗಿದೆ.

ಅಕ್ಕಾ - ಅಕ್ಕಾ
ಒಂದೇ ಒಂದು ಸಲ
ಕಾಫಿ ಜೊತೆ ಗಾಂಜಾ ಬೆಳೆದು ಬಿಡುತ್ತೇವೆ
ಪರ್ಮಿಷನ್ ಕೊಟ್ಟುಬಿಡಿ ಅಂತ
ಅಂಗಲಾಚಿದರಂತೆ ನಿಜವೇ?

ಗೌತಮ
ಕೊಡಗು ಸಮಾಚಾರ



ಅಕ್ರಮ ಕಾಫಿ ಕ್ಯೂರಿಂಗ್‌ಗಳು ಮತ್ತು ಕೈಗಾರಿಕಾ ಬಿಕ್ಕಟ್ಟು

ಕಾಫಿ ಕ್ಯೂರಿಂಗ್ ಕೈಗಾರಿಕೆಗಳ ಬಿಕ್ಕಟ್ಟಿಗೆ ಕಳೆದ 5-6 ವರ್ಷಗಳಿಂದ ನಾಯಿ ಕೊಡೆಗಳಂತೆ ಕಾಫಿ ಮಂಡಳಿಯಿಂದ ಪರವಾನಗಿ ಪಡೆಯದ ನೂರಾರು ಹಲ್ಲರುಗಳು ಹಾಗೂ ಕಾಫಿ ಕ್ಯೂರಿಂಗ್‌ಗಳು ಹುಟ್ಟಿಕೊಂಡು ಕಾಫಿ ಮಂಡಳಿಯು ನಿಗದಿ ಪಡಿಸಿರುವ ಸ್ಟಾಂಡರ್ಡ್‌ಗೆ ತಕ್ಕಂತೆ ಕಾಫಿಯನ್ನು ಸಂಸ್ಕರಿಸದೆ ಹಾಗೆಯೇ ಹಲ್ ಮಾಡಿಸಿ ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಮಾರುಕಟ್ಟೆಗೆ ಮಾರಲಾಗುತ್ತಿದೆ. ಕಾಫಿ ಬೆಲೆಯ ತೀವ್ರ ಕುಸಿತಕ್ಕೆ ಇದೂ ಸಹ ಕಾರಣಗಳಲ್ಲೊಂದಾಗಿದೆ.

ಇತ್ತೀಚೆಗೆ ಕಾಫಿ ಮಂಡಳಿಯು ಹೊರಡಿಸಿರುವ ಪ್ರಕಟಣೆಯೊಂದರ ಪ್ರಕಾರ ಇಡೀ ದೇಶದಲ್ಲಿ ಪರವಾನಗಿ ಪಡೆದಿರುವ ಕಾಫಿ ಕ್ಯೂರಿಂಗ್‌ಗಳ ಸಂಖ್ಯೆ 64 ಮಾತ್ರ ಇದ್ದು, ಇದರ ಪೈಕಿ ದೃಢೀಕರಿಸಲ್ಪಟ್ಟಿರುವುವು 35 ಮಾತ್ರ. ಇವುಗಳ ಪೈಕಿ ಕರ್ನಾಟಕದಲ್ಲಿ ಒಟ್ಟು 45 ಕಾಫಿ ಕ್ಯೂರಿಂಗ್‌ಗಳಿದ್ದು, ದೃಢೀಕರಿಸಿರುವುದು 25 ಮಾತ್ರ. ಇದರಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು 11 ಕಾಫಿ ಕ್ಯೂರಿಂಗ್‌ಗಳಿದ್ದು, ದೃಡೀಕರಣ ಹೊಂದಿರುವುದು 8 ಮಾತ್ರ.

ಆದರೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ನೂರಾರು ಹಲ್ಲರ್‌ಗಳು, ಹತ್ತಾರು ಕಾಫಿ ಕ್ಯೂರಿಂಗ್‌ಗಳು ಕಾಫಿ ಮಂಡಳಿಯಿಂದ ಪರವಾನಗಿ ಪಡೆಯದೇ, ಕಾರ್ಖಾನೆ ಕಾಯಿದೆಯಂತೆ ನೋಂದಾಯಿಸದೆ, ಅಕ್ರಮವಾಗಿ ಕಡಿಮೆ ದರದಲ್ಲಿ ಕಾಫಿಯನ್ನು ಹಲ್ ಮಾಡಿ ಕಾಫಿಯ ಗುಣಮಟ್ಟವನ್ನು ಹಾಳುಗೆಡಹುವ ಮೂಲಕ ಈಗಾಗಲೇ ವಿನಾಶದ ಹಾದಿ ಹಿಡಿದಿರುವ ಕೈಗಾರಿಕೆಯ ಅವನತಿಗೆ ತಮ್ಮದೂ ಒಂದು ಕೈ ಸೇರಿಸುತ್ತಿದ್ದಾರೆ. ಕಾಫಿ ಮಂಡಳಿ ಹಾಗೂ ಜಿಲ್ಲಾಧಿಕಾರಿಗಳ ನಿರ್ದೇಶನಗಳನ್ನು ಉಲ್ಲಂಘಿಸಿ ಈ ಹಲ್ಲರ್‌ಗಳು ಹಾಗೂ ಕಾಫಿ ಕ್ಯೂರಿಂಗ್‌ಗಳು ಕಾರ್ಯ ನಿರ್ವಹಿಸುತ್ತಿದ್ದರೂ ಇಂತಹವರ ಮೇಲೆ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಇದರಿಂದ ಕೈಗಾರಿಕೆಗಳ ನಾಶ, ಸಾವಿರಾರು ಕಾರ್ಮಿಕರು ನಿರುದ್ಯೋಗಿಗಳಾಗಲು ಕಾರಣವಾಗಿದೆ. ... ಇಂತಹ ಕ್ಯೂರಿಂಗ್‌ಗಳಲ್ಲಿ ಕಡಿಮೆ ವೇತನಕ್ಕೆ ಕಾರ್ಮಿಕರುಗಳನ್ನು ದುಡಿಸುತ್ತಿದ್ದಾರೆ. ಯಾವುದೇ ಕಾರ್ಮಿಕರಿಗೆ ಕಾನೂನು ಬದ್ಧವಾಗಿ ನೀಡಬೇಕಾದ ಸೌಲಭ್ಯಗಳನ್ನು ನೀಡುತ್ತಿಲ್ಲ. ಆದ್ದರಿಂದ ಇಂತಹ ಪರವಾನಗಿ ಪಡೆಯದ ಅನಧಿಕೃತ ಕಾಫಿ ಕ್ಯೂರಿಂಗ್‌ಗಳ ಮತ್ತು ಹಲ್ಲರ್‌ಗಳ ಮಾಲೀಕರ ಮೇಲೆ ಕೂಡಲೇ ಕ್ರಮ ಕೈಗೊಂಡು ಅವುಗಳನ್ನು ಬೇಕೆಂದು ಕಾಫಿ ಮಂಡಳಿ ಹಾಗೂ ಜಿಲ್ಲಾಧಿಕಾರಿಗಳನ್ನು ಒತ್ತಾಯಿಸಲು ದಿನಾಂಕ 5-6-2001 ರಂದು ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಧರಣಿ ಸತ್ಯಾಗ್ರಹ ನಡೆಸಲಾಯಿತು.

ಊರುಗುಡಿಸಿ, ಊರು ಅಲೆದು ಕರವಸೂಲಿ ಮಾಡುವ, ಗ್ರಾಮದ ಅಭಿವೃದ್ಧಿಗೆ ಶ್ರಮ ಪಡುವ ಪಂಚಾಯತಿ ನೌಕರ ಸಂಕಷ್ಟಗಳ ತೊರೆಯಲ್ಲಿ ಸಿಲುಕಿ ಬಡಕಲಾಗಿದ್ದಾನೆ. ತನ್ನೆಲ್ಲ ನೋವುಗಳನ್ನು ಬಿಚ್ಚಿ ಬೀದಿಗಿಳಿದು ಆರ್ಭಟಿಸುತ್ತಾ ಕುರುಡು ಸರ್ಕಾರದ ಕಣ್‌ತೆರಸಿದ, ಯಾವುದೇ ಸೇವಾ ಸೌಲಭ್ಯಗಳಿಲ್ಲದೆ 200-300 ರೂಗಳಿಗೆ ದುಡಿಯುವ ಈ ಆಧುನಿಕ ಜೀತದಾಳುಗಳ ಬಗ್ಗೆ ಸರ್ಕಾರ ಮಲತಾಯಿ ಧೋರಣೆ ಮಾಡುತ್ತಿದೆ. ಪಂಚಾಯತಿ ಆಡಳಿತ ನಡೆಸುವ ಸದಸ್ಯರಿಂದ ಸುರುವಾಗಿ ಕಾರ್ಯದರ್ಶಿಯ ಚುಚ್ಚು ಮಾತುಗಳಿಂದ ಕಡೆಗಣಿಸಲ್ಪಟ್ಟಿರುವ ಈ ನೌಕರರು ಹೋರಾಟದ ದಾರಿ ಹಿಡಿದಿದ್ದಾರೆ.

ಗ್ರಾಮ ಪಂಚಾಯತ್ ನೌಕರರ ಪ್ರತಿಭಟನೆ



ಕೊಟ್ಟ ಭರವಸೆ ಈಡೇರಿಸಿ

ವಿ.ಪಿ.ಕುಲಕರ್ಣಿ

ಸದಾ ಮೌನಿ ಕೃಷ್ಣ ಸರಕಾರದ ಕುಂಭಕರ್ಣ ನಿದ್ರೆಯಲ್ಲಿ ಮುಳುಗಿರುವ ಪಂಚಾಯತ್ ರಾಜ್ಯ ಇಲಾಖೆಯ ಸಚಿವರು, ಅಧಿಕಾರಿಗಳನ್ನು ಎಚ್ಚರಿಸಲು ರಾಜ್ಯದ ಮೂಲೆ ಮೂಲೆಗಳಿಂದ ಆಗಮಿಸಿದ ಸುಮಾರು 7 ಸಾವಿರ ಗ್ರಾಮ ಪಂಚಾಯತ್ ನೌಕರರು ಜೂನ್ 11 ಮತ್ತು 12 ರಂದು ಬೆಂಗಳೂರಿನಲ್ಲಿ ಮೆರವಣಿಗೆ ಧರಣಾ ಕಾರ್ಯಕ್ರಮ ನಡೆಸಿದರು.

ಬೀದರಿನಿಂದ ಹಿಡಿದು ಚಾಮರಾಜನಗರ ಜಿಲ್ಲೆ, ಉತ್ತರ ಕನ್ನಡದಿಂದ ಹಿಡಿದು ರಾಯಚೂರು ವರೆಗಿನ ರಾಜ್ಯದ 22 ಜಿಲ್ಲೆಗಳಿಂದ ಕನಿಷ್ಠ ವೇತನ, ಸೇವಾನಿಯಮಾವಳಿ ಜ್ಯಾರಿ, ಬಡ್ತಿಗೆ ಅವಕಾಶ ಮುಂತಾದ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಬೆಂಗಳೂರಿಗೆ ಧಾವಿಸಿದ್ದರು.

ಸುಮಾರು ಒಂದುವರೆ ವರ್ಷಗಳಿಂದ ಬೇಡಿಕೆಗಳಿಗಾಗಿ ಆಗ್ರಹಿಸುತ್ತಿದ್ದರೂ ಬೇಟಿಗೂ ಅವಕಾಶ ನೀಡದ ಸರಕಾರದ ಕಿವಿಹಿಂಡಲೂ ತಮಗಿರುವ ಭಾರೀ ತೊಂದರೆಗಳನ್ನು ಬದಿಗಿಟ್ಟು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ನೂತನ ಪಂಚಾಯತ್ ವ್ಯವಸ್ಥೆ ಜಾರಿಗೆ ಬಂದ ಮೇಲೆ ರಾಜ್ಯದಲ್ಲಿರುವ ಸುಮಾರು 6000 ಪಂಚಾಯತ್‌ಗಳಲ್ಲಿ ಸುಮಾರು 36,000 ನೌಕರರು ದುಡಿಯುತ್ತಿದ್ದಾರೆ.

ಗ್ರಾಮೀಣ ಮಟ್ಟದವರೆಗೆ ಅಧಿಕಾರ ವಿಕೇಂದ್ರೀಕರಣವಾಗಬೇಕು; ಮೂಲಭೂತ ಸೌಲಭ್ಯಗಳು ದೊರೆಯಬೇಕು; ಗ್ರಾಮದ ಆಡಳಿತವನ್ನು ಆಯಾ ಗ್ರಾಮಸ್ಥರೇ ನಿರ್ವಹಿಸಬೇಕು; ಗ್ರಾಮೀಣ ಜನರ ಅವಶ್ಯಕತೆಗಳನ್ನು ಗಮನಿಸಬೇಕು. ಈ ಎಲ್ಲಾ ಉದಾತ್ತ ಆಶಯಗಳನ್ನಿಟ್ಟುಕೊಂಡು ಆಗಿನ ಪಂಚಾಯತ್ ರಾಜ್ಯ ಸಚಿವ ದಿವಂಗತ ನಜೀರಸಾಬರು ಕನಸು ಕಂಡು 1985ರಲ್ಲಿ ರಾಜ್ಯದಲ್ಲಿ ನೂತನ ಪಂಚಾಯತ್ ವ್ಯವಸ್ಥೆಯನ್ನು ಜಾರಿಗೆ ತರುವಲ್ಲಿ ಸಫಲರಾದರು. ಪಂಚಾಯತ್‌ಗಳು ಅತ್ಯಂತ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ರಾಜ್ಯಗಳಾದ ಪಶ್ಚಿಮ ಬಂಗಾಲಕ್ಕೆ ತೆರಳಿ ಅಧ್ಯಯನ ಮಾಡಿ ಆ ಮಾದರಿ ಕರ್ನಾಟಕದಲ್ಲೂ ಮಾದರಿ ವ್ಯವಸ್ಥೆ ರೂಪಿಸಲು ನಜೀರ್‌ಸಾಬ್ ಹೆಣಗಿದ್ದರು.

ಪಶ್ಚಿಮ ಬಂಗಾಲದ ಪಂಚಾಯತ್ ವ್ಯವಸ್ಥೆ ಮಾದರಿ ಅನುಕರಣೆ ಕರ್ನಾಟಕದಲ್ಲಿ ಮೇಲ್ಪದರದಲ್ಲಿ ಮಾತ್ರ ಆಯಿತು. ಬಂಗಾಲದಲ್ಲಿ ದುಡಿಯುವ ವರ್ಗದ ಹೋರಾಟ, ಗ್ರಾಮಾಂತರ ಪ್ರದೇಶದಲ್ಲಿ ಭೂ ಹಂಚಿಕೆಯ ಅಪೂರ್ವ ಕಾರ್ಯಕ್ರಮಗಳಿಂದ ಪಟ್ಟಭದ್ರರನ್ನು ಮೆಟ್ಟಿ ನಿಲ್ಲಲಾಗಿತ್ತು. ಅಲ್ಲಿರುವ ಪಂಚಾಯತ್ ವ್ಯವಸ್ಥೆಯಲ್ಲಿ ಕೆಳಹಂತದ ಪಂಚಾಯತಿಗಳಿಂದ ಹಿಡಿದು ಜಿಲ್ಲಾ ಪಂಚಾಯತ್‌ವರೆಗೆ ಜನತೆಯ ಹೋರಾಟಗಳಲ್ಲಿ ನೊಂದು-ಬೆಂದು ಪಕ್ವವಾಗಿದ್ದ ಜನಪ್ರತಿನಿಧಿತ್ವ ಅಧಿಕಾರದಲ್ಲಿದೆ. ಬೇರುಮಟ್ಟದಲ್ಲಿ ಅಧಿಕಾರ ವಿಕೇಂದ್ರಿಕರಣವಾಗಬೇಕೆಂದು ನೈಜ ಕಾಳಜಿ ಇದ್ದುದರಿಂದಲೇ ಪಂಚಾಯತಿಗಳು ಸಂಪೂರ್ಣ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ.

ಕರ್ನಾಟಕದಲ್ಲಿ ಶಕ್ತಿಯುತವಾದ ಪಂಚಾಯ್ತಿ ವ್ಯವಸ್ಥೆ

ಕರ್ನಾಟಕದಲ್ಲಿ ಗ್ರಾಮಾಂತರ ಪ್ರದೇಶಗಳ ಪಟ್ಟಭದ್ರರು ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ರೂಪದಲ್ಲಿ (ಮೀಸಲಾತಿಯಿಂದಾಗಿ ಸಾಮಾಜಿಕವಾಗಿ ಹಿಂದುಳಿದ ವರ್ಗಗಳಿಗೆ ದೊರೆತಿರುವ ಸ್ಥಾನಗಳಲ್ಲೂ ತಮ್ಮ ಹಿತಾಸಕ್ತಿ ಕಾಪಾಡುವ ಚೇಲಾಗಳನ್ನು ಮುಂದಿಟ್ಟುಕೊಂಡು) ಅಧಿಕಾರವನ್ನು ತಮ್ಮಕೈಯಲ್ಲೇ ಹಿಡಿದಿಟ್ಟುಕೊಂಡಿರುವುದರಿಂದ ಪಂಚಾಯತಿಗಳು ಶಕ್ತಿಯುತವಾಗಲೇ ಇಲ್ಲ. ಜನರ ಆಶೋತ್ತರಗಳಿಗೆ ಸ್ಪಂಧಿಸಲೂ ಆಗಲಿಲ್ಲ.

ದೊಡ್ಡ ಪ್ರಮಾಣದಲ್ಲಿ ಆರ್ಥಿಕ ಬೆಂಬಲ ನೀಡದೆ ಬಿಕ್ಷೆಯ ರೂಪದಲ್ಲಿ ಅನುದಾನ ನೀಡಲಾಗುತ್ತಿದೆ. ಗ್ರಾಮಾಂತರ ಉಳ್ಳವರಿಂದ ಕರಸಂಗ್ರಹಿಸಲು ಸಾಧ್ಯವಾಗದ್ದರಿಂದ ಪಂಚಾಯತಿಗಳು ಇನ್ನೂ ಸಶಕ್ತವಾಗೇ ಇಲ್ಲ.

ಈ ಪಂಚಾಯತಿಗಳಲ್ಲಿ ವಿವಿಧ ಶ್ರೇಣಿಗಳಲ್ಲಿ (ಕರವಸೂಲಿ ಗುಮಾಸ್ತರು, ನೀರುಬಿಡುವವರು, ವಿದ್ಯುತ್ ನಿರ್ವಹಣೆ, ಕಸಗುಡಿಸುವ, ಸಿಪಾಯಿಗಳು ಇತ್ಯಾದಿ) ನೌಕರರು ದುಡಿಯುತ್ತಿದ್ದಾರೆ.

ಸ್ವಾತಂತ್ರ್ಯ ಪೂರ್ವದಲ್ಲಿ ಗ್ರಾಮ ಮಟ್ಟದಲ್ಲಿ ಪರಂಪರಾಗತವಾಗಿ ಕಾರ್ಯನಿರ್ವಹಿಸುವ ಜನರಿಗೆ ಉಂಬಳಿ(ಇನಾಂ) ಆಗಿ ಜಮೀನು ಕೊಡಲಾಗಿತ್ತು. ಅಂದರೆ ಜೀವನ ನಿರ್ವಹಣೆಗೆ ವ್ಯವಸ್ಥೆ ಇತ್ತು. 1956ರಲ್ಲಿ ಗ್ರೂಪ್ ಪಂಚಾಯತಿಗಳು ಅಸ್ತಿತ್ವಕ್ಕೆ ಬಂದ ಮೇಲೆ ಒಂದಿಬ್ಬರು ಸಿಬ್ಬಂದಿಗಳು ಮಾತ್ರ ಇದ್ದು ರೂ. 20, 50 ಗಳನ್ನು ಸಂಬಳವಾಗಿ ಪಡೆಯುತ್ತಿದ್ದರು.

ಮನಬಂದಂತೆ ನೌಕರರ ಬಳಕೆ

ನೂತನ ವ್ಯವಸ್ಥೆ (ಮಂಡಲ ಪಂಚಾಯತ್) ಬಂದ ಮೇಲೆ ವಿವಿಧ ಶ್ರೇಣಿಗಳಲ್ಲಿ ನೌಕರರನ್ನು ಭರ್ತಿ ಮಾಡಿಕೊಳ್ಳಲಾಯಿತು. ಆದರೆ ಅತ್ಯಂತ ಕನಿಷ್ಠ ಸೌಲಭ್ಯ, ಸೌಕರ್ಯ, ಸಂಬಳ ನಿಗದಿಮಾಡಲಿಲ್ಲ. ಪಂಚಾಯತ್‌ಗಳ ಕೆಲಸದ ಜೊತೆಗೆ ಪಂಚಾಯತ್ ಚೇರಮನ್‌ಗಳ, ಸದಸ್ಯರ ಖಾಸಗಿ ಕೆಲಸಗಳಿಗೂ (ತರಕಾರಿ ತರಲು, ಮಕ್ಕಳನ್ನು ಶಾಲೆಗೆ ಬಿಡುವ, ಮನೆ/ಕೊಟ್ಟಿಗೆ ಸ್ವಚ್ಛ ಮಾಡುವ) ಈ ನೌಕರರನ್ನು ಬಳಸಿಕೊಳ್ಳಲಾಗುತ್ತಿದೆ.

ಸಂಘಟನೆಯತ್ತ

1987ರಲ್ಲಿ ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲೂಕಿನಿಂದ ಜಿಲ್ಲಾ ಪಂಚಾಯತಿಗೆ ಆಯ್ಕೆಯಾದ ಸಂಗಾತಿ ಮಾರುತಿ ಮಾನಪಡೆ ಮೊಟ್ಟಮೊದಲು ನೌಕರರ ಹೀನಾಯ ಸ್ಥಿತಿಯ ವಿರುದ್ಧ ಸಂಘಟನೆ ಆರಂಭ ಮಾಡಿ ರಾಜ್ಯ ಮಟ್ಟದಲ್ಲಿ ಪಂಚಾಯತ್ ನೌಕರರ ಸಂಘಟನೆ ಅಸ್ತಿತ್ವಕ್ಕೆ ಬಂದಿತು. ಮಾರುತಿ ಮಾನಪಡೆ ಅಧ್ಯಕ್ಷರಾಗಿ, ಹಿರಿಯ ಮುಖಂಡರಾದ ಸಂಗಾತಿ ಎನ್.ಕೆ. ಉಪಾಧ್ಯಾಯ ಅವರು ಪ್ರಧಾನ ಕಾರ್ಯದರ್ಶಿಗಳಾಗಿ ಪಂಚಾಯತ್ ನೌಕರರ ಆಶೋತ್ತರಗಳಿಗೆ ಧ್ವನಿ ನೀಡಲು ಆರಂಭಿಸಿದರು. ಗುಲ್ಬರ್ಗ ಜಿಲ್ಲೆಯ ಪಂಚಾಯತ್ ನೌಕರರು ಈ ಹಿನ್ನೆಲೆಯಲ್ಲಿ ಜಿಲ್ಲಾ ಪಂಚಾಯತ್ ಮಟ್ಟದಲ್ಲಿ ಧೀರ ಹೋರಾಟ ನಡೆಸಿ ಕನಿಷ್ಠ ವೇತನ (ರೂ. 960, 780 ಮತ್ತು 500) ಹಾಗೂ ರಜೆ, ಹೆರಿಗೆ ರಜೆ ಸೌಲಭ್ಯ ಪಡೆದರು.

ಗುಲ್ಬರ್ಗ ಜಿಲ್ಲೆಯ ಈ ಸಾಧನೆ ಬೀದರ, ರಾಯಚೂರು, ಬಿಜಾಪುರ ಮುಂತಾದ ಜಿಲ್ಲೆಗಳ ನೌಕರರಿಗೂ ಸ್ಫೂರ್ತಿ ನೀಡಿದ್ದರಿಂದ ಜಿಲ್ಲಾ ಮಟ್ಟದಲ್ಲಿ ಅನೇಕ ಹೋರಾಟ ನಡೆಸಿ ಗುಲ್ಬರ್ಗ ಮಾದರಿಯ ವೇತನ ಶ್ರೇಣಿ, ಸೌಲಭ್ಯ ಪಡೆಯಲು ಹೆಣಗಿದರು.

1989ರಿಂದ 1994ರವರೆಗೂ ಪ್ರತಿವರ್ಷ ಸತತವಾಗಿ ಬೆಂಗಳೂರು ಚಲೋ ಕಾರ್ಯಕ್ರಮ ನಡೆಸಿ, ಹೋರಾಟಗಳನ್ನು ನಡೆಸಿದ್ದರಿಂದ 1994ರಲ್ಲಿ ಮೊದಲಬಾರಿಗೆ ಸರಕಾರ ಒಂದು ಮಾದರಿ ವೇತನ ಶ್ರೇಣಿ ರೂಪಿಸಿತ್ತು. ಎಸ್.ಎಸ್.ಎಲ್.ಸಿ. ಪಾಸಾಗಿ 10 ವರ್ಷ ಸೇವೆಸಲ್ಲಿಸಿರುವ ಬಿಲ್ ಕಲೆಕ್ಟರ್‌ಗಳಿಗೆ ಕಾರ್ಯದರ್ಶಿಗಳಾಗಿ ಬಡ್ತಿ ದೊರಕಿಸಲು ಸಾಧ್ಯವಾಯಿತು.

1996ರಲ್ಲಿ ಗುಲ್ಬರ್ಗದಲ್ಲಿ ಪಂಚಾಯತ್ ನೌಕರರ 2ನೇ ಸಮ್ಮೇಳನ ಯಶಸ್ವಿಯಾಗಿ ನಡೆಯಿತು. ಸಮ್ಮೇಳನಕ್ಕೆ ಆಗಿನ ಪಂಚಾಯತ್‌ರಾಜ ಸಚಿವರಾದ ಶ್ರೀ ಎಂ.ಪಿ. ಪ್ರಕಾಶರನ್ನು ಹಾಗೂ ಪಶ್ಚಿಮ ಬಂಗಾಲದ ಗ್ರಾಮೀಣಾಭಿವೃದ್ಧಿ ಸಚಿವ ಸಂಗಾತಿ ಡಾ। ಸೂರ್ಯಕಾಂತ ಮಿಶ್ರರನ್ನು ಆಮಂತ್ರಿಸಲಾಗಿತ್ತು. ಎಂ.ಪಿ. ಪ್ರಕಾಶ ಬರಲೇ ಇಲ್ಲ. ಡಾ। ಸೂರ್ಯಕಾಂತ ಮಿಶ್ರರು ಪಶ್ಚಿಮ ಬಂಗಾಲದ ಪಂಚಾಯತಿಗಳ ಸಾಧನೆ, ನೌಕರರ ಸ್ಥಿತಿಗತಿಗಳ ವಿವರಣೆ ನೀಡಿದರು. ಪಂಚಾಯತ್ ನೌಕರರನ್ನು ಸರಕಾರಿ ನೌಕರರ ಸ್ಥಾನಮಾನ ಪಡೆಯಲು ನಡೆಸಿದ ಧೀರ ಹೋರಾಟಗಳ ಮಾಹಿತಿ ನೀಡಿದರು.

ಇದು ರಾಜ್ಯದಲ್ಲಿ ಪಂಚಾಯತ ನೌಕರರ ಹೋರಾಟಕ್ಕೆ ಭಾರೀ ಚಾಲನೆ ನೀಡಿತು. 1997 ಫೆಬ್ರವರಿ ತಿಂಗಳಲ್ಲಿ ಎಲ್ಲಾ ಜಿಲ್ಲೆಗಳ ಪಂಚಾಯತಿ ನೌಕರರು ಸಾವಿರಾರು ಸಂಖ್ಯೆಯಲ್ಲಿ ಸೇರಿ ಮರುದಿನ ಸಚಿವ ಪ್ರಕಾಶ, ಮುಖ್ಯಮಂತ್ರಿ ಶ್ರೀ ಪಟೇಲ, ಹಣಕಾಸುಮಂತ್ರಿ ಶ್ರೀ ಸಿದ್ಧರಾಮಯ್ಯ ಇವರ ಮನೆಗಳ ಎದುರು ಧರಣಿ ನಡೆಸಿದರು.

ಈಡೇರಿಸದ ಭರವಸೆಗಳು

ಈ ಬೃಹತ್ ಕಾರ್ಯಕ್ರಮದ ನಂತರ ಮಾತ್ರ ಸರಕಾರ ಕಣ್ತೆರೆಯಿತು. ಪಶ್ಚಿಮ ಬಂಗಾಲಕ್ಕೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಶಾಸಕ ಸಂಗಾತಿ ಶ್ರೀರಾಮರೆಡ್ಡಿ ಹಾಗೂ ಇಲಾಖೆಯ ನಿರ್ದೇಶಕರಾಗಿದ್ದ ಡಾ। ಬಸಪ್ಪ ಇವರ ನಿಯೋಗ ತೆರಳಿ ಪಂಚಾಯತ್ ಪರಿಸ್ಥಿತಿ ಅಧ್ಯಯನ ಮಾಡಿಬಂದರು. ಇಲಾಖೆಯ ಕಾರ್ಯದರ್ಶಿಗಳಾಗಿದ್ದ ಶ್ರೀ ಶ್ರೀನಿವಾಸಮೂರ್ತಿ ಕೇರಳಕ್ಕೆ ಹೋಗಿಬಂದರು.

ಈ ಎಲ್ಲ ಹಿನ್ನೆಲೆಯಲ್ಲಿ ಅನೇಕ ಸುತ್ತಿನ ಮಾತುಕತೆಗಳ ಫಲವಾಗಿ 24-6-1997ರಂದು ಒಂದು ತಾತ್ಕಾಲಿಕ ವೇತನ ಹೆಚ್ಚಳದ ಪ್ರಕಟಣೆ ಹೊರಬಿತ್ತು. ಇಲಾಖೆಯ ಸೋಂಬೇರಿತನ, ಹಣಕಾಸು ಇಲಾಖೆಯ ಅವಾಂತರಗಳಿಂದಾಗಿ ಅನೇಕ ಅಡೆತಡೆಗಳ ಮಧ್ಯದಲ್ಲೂ ಈ ಪ್ರಕಟಣೆ ಹೊರತರಲು ಶ್ರಮಿಸಲಾಯಿತು. ಉಳಿದ ಬೇಡಿಕೆಗಳ ಬಗ್ಗೆ ನಂತರದ ಅವಧಿಯಲ್ಲಿ ಅಂತಿಮಗೊಳಿಸುವ ಭರವಸೆ ದೊರೆಯಿತು. ಸೇವಾನಿಯಮಾವಳಿ, ಬಡ್ತಿ ಪ್ರಶ್ನೆ ಮತ್ತು ಗುಂಪು ಗ್ರಾಚ್ಯೂಟಿ ಸೌಲಭ್ಯ ಇವುಗಳನ್ನು ತಾತ್ವಿಕ ಒಪ್ಪಿಕೊಂಡೂ ಜಾರಿಗೆ ತರಲಿಲ್ಲ.

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಮೇಲೆ ಅನೇಕ ಸಲ ಮುಖತಃ ಹಾಗೂ ಲಿಖಿತವಾಗಿ ಬೇಡಿಕೆಗಳ ಬಗ್ಗೆ ಚರ್ಚಿಸಲು ಆಗ್ರಹಿಸಿದರೂ ಸಭೆ ನಡೆಯಲೇ ಇಲ್ಲ.

ಈ ಹಿನ್ನೆಲೆಯಲ್ಲಿ ಇದೇ ಜೂನ್ 11 ಮತ್ತು 12 ರಂದು ಎರಡು ದಿನ ಧರಣಾ ಕಾರ್ಯಕ್ರಮ ನಡೆಯಿತು. ಅನೇಕ ವರ್ಷಗಳಿಂದ ಸೇವೆ ಸಲ್ಲಿಸಿ ಹಣ್ಣಾಗಿದ್ದರೂ ಭಾರಿ ಭರವಸೆ, ನಿರೀಕ್ಷೆಗಳಿಂದ ದೊಡ್ಡ ಸಂಖ್ಯೆಯಲ್ಲಿ ನೌಕರರು ಆಗಮಿಸಿದ್ದರು. ಕಸಗುಡಿಸುವ ಹೆಣ್ಣುಮಕ್ಕಳು ಹಣಕಾಸಿನ ಅಡಚಣೆಗಳ ನಡುವೆಯೂ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಜೂನ್ 11 ರಂದು ಬೆಂಗಳೂರಿನ ಚಿಕ್ಕ ಲಾಲ್‌ಬಾಗ್‌ನಿಂದ ಸಚಿವರ ಮನೆಗೆ ಹೊರಟು ಪೊಲೀಸರು ತಡೆದು ನಿಲ್ಲಿಸಿದ್ದರಿಂದ ಆರ್.ಸಿ. ಕಾಲೇಜು ಎದುರೇ ಧರಣಾ ನಡೆಸಲಾಯಿತು. ಸಂಘದ ಸುಮಾರು 13 ವರ್ಷಗಳ ಇತಿಹಾಸದಲ್ಲೇ ನೌಕರರು ಈ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದು ಒಂದು ದಾಖಲೆ. ಈ ಸಲದ ಕಾರ್ಯಕ್ರಮಕ್ಕೆ ಸಂಘಟನೆಗಾಗಿ ತುಂಬಾ ಪ್ರಯತ್ನಿಸಲು ಸಾಧ್ಯವಾಗಲಿಲ್ಲ. ಕೇವಲ ಒಂದು ಕರಪತ್ರದ ಮೂಲಕ ನೀಡಿದ ಕರೆಯ ಹಿನ್ನೆಲೆಯಲ್ಲಿ ನೌಕರರ ಪಾಲ್ಗೊಳ್ಳುವಿಕೆ ನಿಜಕ್ಕೂ ಸ್ಫೂರ್ತಿದಾಯಕವಾದುದು.

ಒಂದೂವರೆ ವರ್ಷ ಚರ್ಚೆಗೆ ವಿನಂತಿಸಿದ್ದರೂ ಸಾಧ್ಯವಾಗಿರಲಿಲ್ಲ. ಆದರೆ ಈ ಹೋರಾಟ ಇಲಾಖೆಯ ಸಚಿವರ ಕಣ್ತೆರಸಲು ಯಶಸ್ವಿಯಾಯಿತು. ಜೂನ್ 11 ರಂದೇ ಪ್ರಥಮ ಹಂತದ ಮಾತುಕತೆ ನಡೆಯಿತು. ಈ ಮಾತುಕತೆಗೆ ಆಹ್ವಾನ ನೀಡಲು ಹಿರಿಯ ಐ.ಎ.ಎಸ್. ಅಧಿಕಾರಿಗಳೇ ಧರಣಾ ಸ್ಥಳಕ್ಕೆ ಆಗಮಿಸಿದ್ದು ವಿಶೇಷವಾಗಿತ್ತು.

ಜುಲೈ ಕೊನೆಯವಾರದಲ್ಲಿ ಸಮಗ್ರ ಚರ್ಚೆಗೆ ಆಮಂತ್ರಣ ನೀಡುವುದಾಗಿ ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ ಗಂಗಾಧರಪ್ಪ ಖಚಿತಪಡಿಸಿದರು. ಇದರ ಆಧಾರದಲ್ಲಿ ಜೂನ್ 12 ರಂದು ಹೋರಾಟವನ್ನು ಅಂತ್ಯಗೊಳಿಸಲಾಯಿತು.

ಬೇಡಿಕೆಗಳು

1. 1999 ಜೂನ್‌ನಲ್ಲಿ ಪ್ರಕಟಿಸಿದ ಕನಿಷ್ಠ ವೇತನ ಪರಿಷ್ಕರಿಸಿ ವೇತನ ಹೆಚ್ಚಿಸುವುದು.
2. ಗುಂಪು ಗ್ರಾಚ್ಯೂಟಿ ಯೋಜನೆ ಜಾರಿ.
3. ಸೇವಾ ನಿಯಮಾವಳಿಗಳು ಜಾರಿ
4. ಕರವಸೂಲಿ ಗುಮಾಸ್ತರಿಗೆ ಬಡ್ತಿ, ಮಿತಿ ಹೆಚ್ಚಿಸುವದು. ಇತರ ಶ್ರೇಣಿಯ ನೌಕರರಿಗೂ ಬಡ್ತಿ ಅವಕಾಶ ದೊರೆಯಬೇಕು.
5. ವೇತನಕ್ಕಾಗಿ ಪ್ರತ್ಯೇಕ ಅನುದಾನ ನೀಗದಿ.
6. ಕನಿಷ್ಠ ಪೊತ್ತವಾಗಿಯಾದರೂ ನಿವೃತ್ತಿವೇತನ ಜಾರಿ.

ಈ ವರ್ಷ ಇಪ್ಪತ್ತನೇ ಶತಮಾನದ ಅಂತಿಮ ಕ್ರಾಂತಿಕಾರಿ ವಿಜ್ಞಾನಿ ಪ್ರೊ। ಜೆ.ಡಿ. ಬರ್ನಾಲ್‌ರ ಜನ್ಮಶತಮಾನೋತ್ಸವ. ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರದಲ್ಲಿ ಮೂಲಭೂತ ಕಾಣಿಕೆ ಕೊಟ್ಟ ಬ್ರಿಟಿಷ್ ವಿಜ್ಞಾನಿ ಬರ್ನಾಲ್ ಮಾರ್ಕ್ಸ್‌ವಾದವನ್ನು ತಮ್ಮ ಭೌತಿಕ ಕಣ್ಣೋಟವನ್ನಾಗಿ ಆರಿಸಿಕೊಂಡ ಪ್ರಮುಖ ವಿಜ್ಞಾನಿಗಳಲ್ಲೊಬ್ಬರು. ವಿಜ್ಞಾನದ ಬೆಳವಣಿಗೆಯಲ್ಲಿ ಸಾಮಾಜಿಕ ವ್ಯವಸ್ಥೆಯ ಪಾತ್ರ ಸಮಾಜದ ಬೆಳವಣಿಗೆಯಲ್ಲಿ ವಿಜ್ಞಾನದ ತತ್ವ ಇವನ್ನು ಕೂಲಂಕುಷವಾಗಿ ಅಧ್ಯಯನ ಮಾಡಿದ ಪ್ರಗತಿಪರ ವಿಶ್ವಕೋಶದಂತಹ ಮೌಲ್ಯವುಳ್ಳ ಬರ್ನಾಲ್‌ರ ನಾಲ್ಕು-ಸಂಪುಟಗಳ 'ಚರಿತ್ರೆಯಲ್ಲಿ ವಿಜ್ಞಾನ' ಎಂಬ ಮಹಾನ್ ಗ್ರಂಥ ವಿಜ್ಞಾನ- ಸಮಾಜಗಳ ಬೆಳವಣಿಗೆಯಲ್ಲಿ ಪರಸ್ಪರ ಸಂಬಂಧ ಅರ್ಥಮಾಡಿಕೊಳ್ಳುವುದರಲ್ಲಿ ದೊಡ್ಡ ಕೊಡುಗೆ ಕೊಟ್ಟಿದೆ. ವಿಜ್ಞಾನವನ್ನು ಜನರ ಕಲ್ಯಾಣಕ್ಕೆ ಬಳಸುವುದಕ್ಕೆ, ಜನವಿರೋಧಿ ವಿಜ್ಞಾನದ ಬಳಕೆ ವಿರುದ್ಧ ತಮ್ಮ ಜೀವನವೆಲ್ಲಾ ಹೋರಾಡಿದ ಹೋರಾಟಗಾರ ಬರ್ನಾಲ್. ಫ್ಯಾಸಿಸ್ಟ್-ವಿರೋಧಿ, ಸಾಮ್ರಾಜ್ಯಶಾಹಿ- ವಿರೋಧಿ ವಿಶ್ವಶಾಂತಿ ಹೋರಾಟದಲ್ಲಿ ಜಗತ್ತಿನ ಪ್ರಗತಿಪರ ವಿಜ್ಞಾನಿಗಳನ್ನು ತೊಡಗಿಸಲು ದುಡಿದವರು ಬರ್ನಾಲ್‌ರ ಜನ್ಮಶತಮಾನೋತ್ಸವ ಸಮಯದಲ್ಲಿ ಅವರ ಜೀವನ, ಸಾಧನೆ, ಕೊಡುಗೆಗಳ ಬಗ್ಗೆ ತಿಳಿದುಕೊಳ್ಳಲು ಮುಂದೆ ಓದಿ.

ಪ್ರೊಫೆಸರ್ ಜೆ.ಡಿ.ಬರ್ನಾಲ್ ಶತಮಾನೋತ್ಸವ

ಇಪ್ಪತ್ತನೇ ಶತಮಾನದ ಅಪ್ರತಿಮ ಕ್ರಾಂತಿಕಾರಿ ವಿಜ್ಞಾನಿ




ಶರತ್ ಚಂದ್ರ

1901 ಮೇ 10 ರಂದು ಇಂಗ್ಲೆಂಡಿನಲ್ಲಿ ಹುಟ್ಟಿದ ಜಾನ್ ಡೆಸ್‌ಮಂಡ್ ಬರ್ನಾಲ್ ತಮ್ಮ ಶಿಕ್ಷಣಕ್ಕೆ ಇಂಗ್ಲೆಂಡಿಗೆ ತೆರಳಿದರು. ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಬರ್ನಾಲ್ ಐರಿಷ್ ಸ್ವಾತಂತ್ರ್ಯ ಹೋರಾಟದ ಬಗ್ಗೆ ಸಹಾನುಭೂತಿ ಹೊಂದಿದ್ದು, ಇಂಗ್ಲೆಂಡಿನಲ್ಲಿ ವಿಜ್ಞಾನ ಮಾತ್ರವಲ್ಲ ಆಗಿನ ಎಲ್ಲಾ ಬೌದ್ಧಿಕ ಚಟುವಟಿಕೆಯಲ್ಲಿ ಭಾಗವಹಿಸಿದರು. ಮೊದಲ ಮಹಾಯುದ್ಧದಲ್ಲಿ ಇಂಗ್ಲೆಂಡ್ ಗೆದ್ದರೂ ಸಾಮಾನ್ಯ ಜನರ ಮೇಲೆ ಬೀರಿದ ದುಷ್ಪರಿಣಾಮಗಳನ್ನು ಕಣ್ಣಾರೆ ಕಂಡ ಬರ್ನಾಲ್ ತಮ್ಮ ವಿದ್ಯಾರ್ಥಿ ದೆಸೆಯಲ್ಲೇ ಸಾಮಾಜಿಕ ಕಳಕಳಿಯನ್ನು ಬೆಳೆಸಿಕೊಂಡರು ವಿಶ್ವ ವಿದ್ಯಾಲಯದ ಹೊರಗೂ ವ್ಯಾಪಕ ಸಂಪರ್ಕಹೊಂದಿದ್ದ ಬರ್ನಾಲ್ ತಮ್ಮ ಮಿತ್ರರೊಬ್ಬರ ಮೂಲಕ ಮಹಾನ್ ಅಕ್ಟೋಬರ್ ಕ್ರಾಂತಿ ಮತ್ತು ರಶ್ಯಾದಲ್ಲಿ ಸಮಾಜವಾದದ ಪ್ರಯೋಗಗಳ ಬಗ್ಗೆ ಕೇಳಿದರು. ಆ ಬಗ್ಗೆ ಅಧ್ಯಯನಕ್ಕಿಳಿದ ಬರ್ನಾಲ್ ಮಾರ್ಕ್ಸ್‌ವಾದದತ್ತ ಆಕರ್ಷಿತರಾದರು. ತಮ್ಮ ಕಾಲೇಜು ಅಧ್ಯಯನದಲ್ಲೂ ತಮ್ಮ ವಿಶಾಲವಾದ ಭೌತಶಾಸ್ತ್ರಕ್ಕೆ ತಮ್ಮನ್ನು ಸೀಮಿತಗೊಳಿಸದೆ ಗಣಿತ, ರಾಸಾಯನಿಕ ಶಾಸ್ತ್ರ, ಜೀವಶಾಸ್ತ್ರ ಮತ್ತು ಒಟ್ಟಾರೆ ವೈಜ್ಞಾನಿಕ ಕಣ್ಣೋಟ ಪಡೆಯುವ ವ್ಯಾಪಕ ಅಧ್ಯಯನ ಮಾಡಿದರು. ಡೇವಿ-ಫ್ಯಾರಡೆ ಪ್ರಯೋಗಶಾಲೆಯಲ್ಲಿ ಸಂಶೋಧಕರಾಗಿ ಸೇರಿದ ಅವರು ಆಮೇಲೆ ತಾವು ಓದಿದ ಕ್ಯಾಂಬ್ರಿಜ್ ವಿಶ್ವವಿದ್ಯಾಲಯಕ್ಕೆ ಅಧ್ಯಾಪಕರಾಗಿ ವಾಪಸು ಬಂದರು.

ಈ ನಡುವೆ ಬರ್ನಾಲ್ ತಮ್ಮ ಕ್ಯಾಥೋಲಿಕ್ ಧರ್ಮ ತೊರೆದು ತಾವು ನಾಸ್ತಿಕ ಹಾಗೂ ಮಾರ್ಕ್ಸ್‌ವಾದಿ ಎಂದು ಘೋಷಿಸಿಕೊಂಡರು. ಮಗನನ್ನು 'ಸರಿದಾರಿ'ಗೆ ತರಲು ಬರ್ನಾಲ್ ತಂದೆ ಒಬ್ಬ ಪಾದ್ರಿಯನ್ನು ಮಗನ ಬಳಿ ಕಳಿಸಿದವಂತೆ, ಪಾದ್ರಿ ಬರ್ನಾಲ್‌ರ ಹತ್ತಿರ ದೀರ್ಘ ಚರ್ಚೆ ನಡೆಸಿದರಂತೆ. ಆದರೆ ಅವರ ಪರಿಣಾಮ ತಿರುವು ಮುರುವಾಯಿತಂತೆ - ಪಾದ್ರಿಗೆ ಧರ್ಮದ ಮೇಲೆ ನಂಬಿಕೆ ಹೋಗಿ ಆತ ಚರ್ಚ್ ಬಿಟ್ಟನಂತೆ!

ಜೀವನದ ರಹಸ್ಯ ಭೇಧಿಸಿದ ವಿಜ್ಞಾನಿ

ಬರ್ನಾಲ್ ವಿವಿಧ ವಸ್ತುಗಳ ಭೌತಿಕ, ರಾಸಾಯನಿಕ ಗುಣಗಳನ್ನು ನಿರ್ಧರಿಸುವುದರಲ್ಲಿ ಅವುಗಳ ಆಂತರಿಕ ಸಂರಚನೆ ಪಾತ್ರದ ಬಗ್ಗೆ ಮೂಲಭೂತ ಕೊಡುಗೆ ನೀಡಿದ್ದಾರೆ. ಎಕ್ಸ್-ರೇ ಬಳಸಿ ಸ್ಫಟಿಕಗಳ ಆತಂಕ ಸಂರಚನೆ ತಿಳಿಯುವ ಎಕ್ಸ್-ರೇ ಸ್ಫಟಿಕ ಶಾಸ್ತ್ರದ ಜನಕ ಎಂದು ಬರ್ನಾಲ್ ಹೆಸರಾಗಿದ್ದಾರೆ. ಗ್ರಾಫೈಟ್ (ಎಂಬ ಇಂಗಾಲದ ಒಂದುದೂತ)ನ ಆಂತರಿಕ ಸಂರಚನೆಯನ್ನು ಕಂಡುಹಿಡಿದ ಅವರು, ಇದಕ್ಕಾಗಿ ಎಕ್ಸ್‌ರೇ ಕ್ಯಾಮೆರಾ ಒಂದನ್ನು ಅಭಿವೃದ್ಧಿಪಡಿಸಿದರು. ಸ್ಫಟಿಕಗಳ ಆಂತರಿಕ ಸಂರಚನೆಯ ಎಲ್ಲಾ ಸಾಧ್ಯವಿರುವ ವಿನ್ಯಾಸಗಳ ಬಗ್ಗೆ ಮೊದಲು ಪೂರ್ವ ಚಿತ್ರಕೊಟ್ಟರು. ಇದನ್ನು ಬಳಸಿ ಅವರ ಹಲವಾರು ವಿದ್ಯಾರ್ಥಿಗಳು ಪ್ರೋಟೀನ್, ಹೀಮೊಗ್ಲೋಬಿನ್, ಮಯೊಗ್ಲೋಬಿನ್, ವೈರಸ್-ಮುಂತಾದವುಗಳ ಆಂತರಿಕ ವಿನ್ಯಾಸ ಕಂಡುಹಿಡಿದರು. ಅವರು ಐದಾರು ವಿದ್ಯಾರ್ಥಿಗಳಿಗೆ ನೊಬೆಲ್ ಪ್ರಶಸ್ತಿ ಬಂದಿದೆ. ಇವರೆಲ್ಲಾ ತಮ್ಮ ಸಂಶೋಧನೆಯಲ್ಲಿ ಹಲವು ಹಂತಗಳಲ್ಲಿ ಬರ್ನಾಲ್‌ರು ಪ್ರಮುಖ ಮಾರ್ಗದರ್ಶನ ಮಾಡಿದ್ದರು. ನಿಜವಾಗಿಯೂ ತಮ್ಮ ನೊಬೆಲ್ ಪ್ರಶಸ್ತಿಯನ್ನು ಬರ್ನಾಲ್ ಜತೆ ಹಂಚಿಕೊಳ್ಳಬೇಕಾಗಿತ್ತು ಎಂದು ಹೇಳಿದ್ದಾರೆ. ಆದರೆ ಅವರ ರಾಜಕೀಯ, ಸೈದ್ಧಾಂತಿಕ ಧೋರಣೆಗಳಿಂದಾಗಿಯೋ ಏನೋ, ಬರ್ನಾಲ್‌ಗೆ ಎಂದೂ ನೊಬೆಲ್ ಪ್ರಶಸ್ತಿ ಬರಲಿಲ್ಲ. ಆದರೆ ಜೀವಶಾಸ್ತ್ರದಲ್ಲಿ



ಜೀವಿಗಳ ಮೂಲಭೂತ ಸಂರಚನೆಯ ರಹಸ್ಯ ಭೇದಿಸುವುದರಲ್ಲಿ ಬರ್ನಾಲ್‌ರ ಕೊಡುಗೆ ದೊಡ್ಡದು.

ಬರ್ನಾಲ್ ಹೆಚ್ಚು ಪ್ರಸಿದ್ಧರಾಗಿರುವುದು ಅವರು ತಮ್ಮ ಪ್ರೋಯಗಶಾಲೆಯ, ವಿಶ್ವ ವಿದ್ಯಾಲಯದ ಹೊರಗೆ ಮಾಡಿದ ಕೆಲಸಗಳಿಗಾಗಿ. ಕ್ಯಾಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಪ್ರಗತಿಪರ ವಿಚಾರಗಳಿಗೆ ಆಕರ್ಷಿತರಾದವರಲ್ಲಿ ಬರ್ನಾಲ್ ಏಕಾಂಗಿಯಾಗಿರಲಿಲ್ಲ. ಪ್ರೊ। ಜೋಸೆಫ್ ಸಿರಾಮ್, ಪ್ರೊ। ಹಾಲ್ಡೇನ್ ಕ್ಯಾಂಬ್ರಿಜ್‌ನಲ್ಲೇ ಬರ್ನಾಲ್‌ರ ಸಹೋದ್ಯೋಗಿಗಳಾಗಿದ್ದವರು. ಇವರೆಲ್ಲರಿಗೂ ಬರ್ನಾಲ್ ನಾಯಕರಾಗಿದ್ದರು. ಬರ್ನಾಲ್ ನಾಯಕತ್ವದಲ್ಲಿ 'ಯುದ್ಧವಿರೋಧಿ ಕ್ಯಾಂಬ್ರಿಜ್ ವಿಶ್ವವಿದ್ಯಾಲಯ ಗುಂಪು ರಚಿತವಾಗಿತ್ತು. ಈ ಗುಂಪು 30ರ ದಶಕದ ಆರಂಭದ ಮಹಾನ್ ಕುಸಿತ, ಹಿಟ್ಲರ್ ಜರ್ಮನಿಯಲ್ಲಿ ನಾಜಿಗಳ ಭಯಾನಕ ಅಪರಾಧಗಳ ವಿರುದ್ಧ, ಸ್ಪೈನ್‌ನಲ್ಲಿ ಫ್ಯಾಸಿಸ್ಟ್‌ರ ವಿರುದ್ಧ ಯುದ್ಧ, ಬ್ರಿಟಿಷ್ ವಸಾಹತುಗಳಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿ, ಚೀನಾದ ಮೇಲೆ ಜಪಾನಿನ ಆಕ್ರಮಣ ವಿರುದ್ಧ ಚಳುವಳಿಗಳಲ್ಲಿ ಈ ಗುಂಪು ತೊಡಗಿಸಿಕೊಂಡಿತು. ನಾಜಿ ಜರ್ಮನಿಯಲ್ಲಿ ವಿಜ್ಞಾನದ ದುರ್ಬಳಕೆ ಬಗ್ಗೆ ಅಧ್ಯಯನ ನಡೆಸಿ ಅದರ ವಿರುದ್ಧ ದನಿಎತ್ತಿದರು. ವಿಜ್ಞಾನದ ಒಟ್ಟಾರೆ ದುರ್ಬಳಕೆಗೆ ಕಾರಣ, ಜನಸಾಮಾನ್ಯರ ಕಲ್ಯಾಣಕ್ಕೆ ವಿಜ್ಞಾನದ ಸರಿಯಾದ ಬಳಕೆಮಾಡಿದ ಸಾಧ್ಯತೆ ಬಗ್ಗೆ ಅವರು ತಮ್ಮ ಅಧ್ಯಯನವನ್ನು ವಿಸ್ತರಿಸಿದರು.

ಸಾಮಾಜಿಕ ಕಳಕಳಿ

ಬರ್ನಾಲ್ 1923ರಲ್ಲೇ ಬ್ರಿಟಿಷ್ ಕಮ್ಯೂನಿಸ್ಟ್ ಪಕ್ಷದ ಸಕ್ರಿಯ ಸದಸ್ಯರಾಗಿರಲು ಅವರ ಪತ್ನಿ ಸಹ ಪಕ್ಷದ ಸದಸ್ಯರಾಗಿದ್ದರು. ಬರ್ನಾಲ್ ತಮ್ಮ ವಿಶ್ವವಿದ್ಯಾಲಯದ ಕೆಲಸ ಮುಗಿದ ಮೇಲೆ ತಮ್ಮ ಕಾಲೇಜಿನಲ್ಲೇ ಕಾರ್ಮಿಕರಿಗೆ ವಿಜ್ಞಾನದ, ಸಮಾಜ ವಿಜ್ಞಾನದ ಪಾಠ ರಾತ್ರಿ ಕ್ಲಾಸುಗಳನ್ನು ನಡೆಸುತ್ತಿದ್ದರು. ಮಧ್ಯಾಹ್ನ ಊಟದ ವಿರಾಮದ ವೇಳೆ ತಮ್ಮ ವಿಶ್ವವಿದ್ಯಾಲಯ ಎಂದಿನ ಬೇಟಿಯಲ್ಲಿ ಮೂಲೆಂಡುಲ್ಲಿ ನಿಂತು ದಾರಿಹೋಕರಿಗೆ ಬ್ರಿಟಿಷ್ ಕಮ್ಯೂನಿಸ್ಟ್ ಪಕ್ಷದ ದಿನಪತ್ರಿಕೆ 'ಡೈಲಿ ವರ್ಕರ್' ಮಾರುವುದು ಅವರ ದಿನಚರಿಯ ಭಾಗವಾಗಿತ್ತು.

1926ರಲ್ಲಿ ಬ್ರಿಟನ್‌ನಲ್ಲಿ ನಡೆದ ಪ್ರಸಿದ್ಧ ಸಾರ್ವತ್ರಿಕ ಮುಷ್ಕರದಲ್ಲಿ ಸಕ್ರಿಯವಾಗಿ ಕೆಲಸಮಾಡಿದ್ದರು. ಆಗಿನ ಕಾಲದಲ್ಲಿ ಕಮ್ಯೂನಿಸ್ಟರು ಆಳುವವರ, ಮೂಲಕ ದಬ್ಬಾಳಿಕೆ ಎದುರಿಸಬೇಕಾಗಿತ್ತು. ದೈಹಿಕ ದಾಳಿ ಅಪರೂಪವೇನಾಗಿರಲಿಲ್ಲ. ಕಮ್ಯೂನಿಸ್ಟ್-ವಿರೋಧಿ ಗುಂಪೊಂದು ರಾತ್ರಿಯಲ್ಲಿ ಅವರ ಮೇಲೆ ಹಲ್ಲೆ ಮಾಡಲು ಬಂತು. ಭಾರತದ ಕೊನೆಯ ವೈಸ್-ರಾಯ್ ಮೊದಲ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ಮೌಂಟ್ ಬ್ಯಾಟನ್ ಈ ಗುಂಪಿನ ಜತೆ ಸಂಪರ್ಕ ಹೊಂದಿದ್ದ ಎಂದು ಸುದ್ದಿಯಿದೆ. ಆದರೆ ಅವರು ಒಂದು 'ತ್ರಿಕ ನಷ್ಟ' ಮಾಡಿದ್ದರು. ರಾತ್ರಿಯಲ್ಲಿ ಸಿಗರೇಟು ಸೇದುತ್ತಾ ಬಂದಿದ್ದರು. ಹಲ್ಲೆ ಮಾಡಲು ಬಂದಿದ್ದಾರೆ ಎಂದು ಗೊತ್ತಾದ ಕೂಡಲೇ ಬರ್ನಾಲ್ ದೀಪ ಆರಿಸಿದರು. ಬರ್ನಾಲ್ ಎಲ್ಲಿದ್ದಾರೆ ಎಂದು ಹಲ್ಲೆ ಕೋರರಲಿಗೆ ತಿಳಿಯಲಿಲ್ಲ. ಸಿಗರೇಟಿನಿಂದ ಹಲ್ಲೆಕೋರರು ಎಲ್ಲಿದ್ದಾರೆ ಎಂದು ಬರ್ನಾಲರಿಗೆ ಗೊತ್ತಾಗುತ್ತಿತ್ತು. ಹಲ್ಲೆಕೋರರು ಬರ್ನಾಲರಿಂದ ಹಿಗ್ಗಾಮುಗ್ಗಾ ಏಟು ತಿಂದು ಓಡಿ ಹೋದರಂತೆ.

ಹಿಟ್ಲರನ ಫ್ಯಾಸಿಸ್ಟ್ ಜರ್ಮನಿ ವಿಶ್ವದ ಮೇಲೆ ಯುದ್ಧ ಹೇರುತ್ತದೆ. ಎಂದು ಮೊದಲೇ ಅಂದುಕೊಂಡ ಬರ್ನಾಲ್, ಅದನ್ನು ಸೋಲಿಸುವುದು ಎಲ್ಲಾ ಜನ-ಪರ ಪ್ರಗತಿಪರ ವಿಜ್ಞಾನಿಗಳ ಕರ್ತವ್ಯ ಎಂದು ತಿಳಿದು ಯುದ್ಧ ಕೆಲಸದಲ್ಲಿ ವಿಜ್ಞಾನಿಗಳನ್ನು ತೊಡಗಿಸಲು ಶ್ರಮವಹಿಸಿದರು. ಅವರ ಕೊಡುಗೆ ಎಷ್ಟಿತ್ತೆಂದರೆ ಕಮ್ಯೂನಿಸ್ಟ್‌ರಾದರೂ, ಎರಡನೇ ಮಹಾ ಯುದ್ಧದ ಅವಧಿಯಲ್ಲಿ ಅವರನ್ನು ರಕ್ಷಣಾ ಖಾತೆಗೆ ವೈಜ್ಞಾನಿಕ ಸಲಹಾಗಾರರಾಗಿ ನೇಮಿಸಲಾಯಿತು. ಬ್ರಿಟನ್ ಮೇಲೆ ಹಿಟ್ಲರನ ವಿಮಾನಪಡೆ ನಡೆಸುತ್ತಿರುವ ದಾಳಿಯಲ್ಲಿ ನಾಗರಿಕರನ್ನು ರಕ್ಷಿಸಲು ಬಾಂಬ್-ನಿರೋಧಕ ಆಶ್ರಯಗಳ ರಚನೆ, ಫ್ರೆಂಚ್ ನಾರ್ಮಂಡಿ ಕರಾವಳಿಯಲ್ಲಿ ಆಂಗ್ಲೋ-ಅಮೆರಿಕನ್ ಟ್ಯಾಂಕ್, ಭಾರಿ ಶಸ್ತ್ರಾಸ್ತ್ರ ಸಜ್ಜಿತ ವಾಹನಗಳನ್ನು ದೊಡ್ಡ ಸಂಖ್ಯೆಯಲ್ಲಿ ಇಳಿಸಬಹುದೇ ಎಂಬುದರ ಬಗ್ಗೆ ನಡೆದ ವೈಜ್ಞಾನಿಕ ಅಧ್ಯಯನದಲ್ಲಿ ಬರ್ನಾಲ್‌ರ ಪಾತ್ರ ದೊಡ್ಡದು. ಬ್ರಿಟನ್‌ನಲ್ಲಿ ಮಾತ್ರವಲ್ಲ ಯೂರೋಪು, ಜಗತ್ತಿನಾದ್ಯಂತ ವಿಜ್ಞಾನಿಗಳನ್ನು ಫ್ಯಾಸಿಸ್ಟ್-ವಿರೋಧಿ ಯುದ್ಧ ಪ್ರಯತ್ನಗಳಲ್ಲಿ ತೊಡಗಿಸುವುದರಲ್ಲಿ ಶ್ರಮವಹಿಸಿದರು.

ಯುದ್ಧಾನಂತರ ಇಂತಹ ಪ್ರಗತಿಪರ ವಿಜ್ಞಾನಿಗಳಿಗೆ ಕೊಟ್ಟ ಮನ್ನಣೆಯನ್ನು ಬ್ರಿಟಿಷ್ ಫ್ರೆಂಚ್, ಮತ್ತಿತರ ಸರ್ಕಾರಗಳು ವಾಪಸು

(ಮುಂದಿನ ಪುಟಕ್ಕೆ)

ಬರ್ನಾಲ್ ಶತಮಾನೋತ್ಸವ

ಭಾರತ ಜ್ಞಾನ-ವಿಜ್ಞಾನ ಸಮಿತಿಯ ಕರ್ನಾಟಕ ರಾಜ್ಯ ಶಾಖೆ ಈ ಇಡೀ ವರ್ಷವನ್ನು ಬರ್ನಾಲ್ ಶತಮಾನೋತ್ಸವ ಆಚರಿಸುವ ಕಾರ್ಯಕ್ರಮ ಹಮ್ಮಿಕೊಂಡಿದೆ. ಇದರ ಆರಂಭದ ಕಾರ್ಯಕ್ರಮವಾಗಿ ಮೇ 26 ರಂದು ಮಿಥಿಕ್ ಸೊಸೈಟಿಯಲ್ಲಿ ಇಡೀ ದಿನದ ಸೆಮಿನಾರು ಸಂಘಟಿಸಿತ್ತು. ಸೆಮಿನಾರಿನಲ್ಲಿ ಪ್ರೊ॥ ಬರ್ನಾಲ್‌ರಿಂದ ನೇರವಾಗಿ ವೈಜ್ಞಾನಿಕ, ಸಾಮಾಜಿಕ ಕಳಕಳಿಯ ಕೆಲಸದಲ್ಲಿ ಪ್ರಭಾವಿತರಾದ ಹಲವಾರು ಪ್ರಮುಖ ವಿಜ್ಞಾನಿಗಳು ಭಾಗವಹಿಸಿದ್ದರು. ಪ್ರೊ. ಮೂರ್ತಿ ಬರ್ನಾಲರ ವೈಜ್ಞಾನಿಕ ಕೊಡುಗೆಗಳ ಬಗ್ಗೆ ಮಾತನಾಡಿದರೆ, ಪ್ರೊ. ವಿಜಯನ್ ಭಾರತೀಯ ವಿಜ್ಞಾನದ ಮೇಲೆ ಅಂತರ್‍ರಾಷ್ಟ್ರೀಯ ಪ್ರಭಾವದ ಸಾಧಕ-ಬಾಧಕ, ಇತ್ತೀಚಿನ ಜಾಗತೀಕರಣದ ದುಷ್ಪರಿಣಾಮಗಳ ಬಗ್ಗೆ ಮಾತನಾಡಿದರು. ಪ್ರೊ॥ ಮಾಧವ ಗಾಡ್ಗೀಳ್ ಭಾರತ ವಿಜ್ಞಾನ-ತಂತ್ರಜ್ಞಾನ ಪರಂಪರೆಯಲ್ಲಿ ಶಾಸ್ತ್ರೀಯ, ಜನಪದ ಶಾಖೆಗಳ ಬಗ್ಗೆ ಪರಿಚಯಿಸಿ ಜನಪದ ವಿಜ್ಞಾನದ ಬಗ್ಗೆ ಅದನ್ನು ಕಾಪಾಡಿ ಬೆಳೆಸುವ ಬಗ್ಗೆ ಮಾತನಾಡಿದರು. ಬಾಬಾ ಅಣು ಸಂಸ್ಥೆಯ ಮಾಜಿ ವಿಜ್ಞಾನಿ ಡಾ॥ ಹೇಮು ಅಧಿಕಾರಿ ಬರ್ನಾಲ್ 'ಚರಿತ್ರೆಯಲ್ಲಿ ವಿಜ್ಞಾನ'ದಲ್ಲಿ ಬಳಸಿದ ವಿಧಾನವನ್ನು ಭಾರತದ ವೈಜ್ಞಾನಿಕ- ತಾಂತ್ರಿಕ ಚರಿತ್ರೆಗೆ ಅನ್ವಯಿಸಿ ತೋರಿಸಿ ದರು. ಡಾ॥ ಜಿ.ರಾಮಕೃಷ್ಣರವರು ಬರ್ನಾಲ್‌ತೋರಿಸಿದ ವೈಜ್ಞಾನಿಕ ವಿಧಾನವನ್ನು ತತ್ವಶಾಸ್ತ್ರ, ಸಮಾಜ ವಿಜ್ಞಾನಿಗಳಲ್ಲಿ ಬಳಸುವುದು ಹೇಗೆ ಎಂದು ಉದಾಹರಣೆ ಸಹಿತ ವಿವರಿಸಿದರು. ಹೆಚ್ಚಿನ ಭಾಷಣಕಾರರು ಒಂದು ಕಡೆ ಜಾಗತೀಕರಣ, ಇನ್ನೊಂದು ಕಡೆ ಜ್ಯೋತಿಷ್ಯ-ವಾಸ್ತುವನ್ನು ವಿಜ್ಞಾನವೆಂದು ವಿಶ್ವವಿದ್ಯಾಲಯದಲ್ಲಿ ಅಳವಡಿಸಲು ಹೊರಟಿರುವ ಕಾವಿ ಸರ್ಕಾರದ ನೀತಿಗಳನ್ನು ಲೇವಡಿ ಮಾಡುತ್ತಾ ಭಾರತದ ವಿಜ್ಞಾನಕ್ಕೆ ಹೇಗೆ ಅಪಾಯಕಾರಿ ಎಂದು ತೋರಿಸಿಕೊಟ್ಟರು.

ಡಾ॥ ಸಿದ್ದಲಿಂಗಯ್ಯ ಬಿಜಿವಿಎಸ್ 'ಬರ್ನಾಲ್' ಬಗ್ಗೆ ಕಿರುಪುಸ್ತಕ ಬಿಡುಗಡೆ ಮಾಡಿದರು. ಎಲ್ಲಾ ಜಿಲ್ಲೆಗಳಲ್ಲೂ ಬಿಜಿವಿಎಸ್ ಬರ್ನಾಲರ ಸಂದೇಶ ಒಯ್ಯುವ ಕಾರ್ಯಕ್ರಮ ಹಮ್ಮಿಕೊಂಡಿದೆ.


ನೇಪಾಳ ರಾಜಮನೆತನದ ಸಾಮೂಹಿಕ ಕೊಲೆ

ಅರಮನೆಯಲ್ಲಿ ದುರಂತ ಪ್ರಜಾಪ್ರಭುತ್ವಕ್ಕೆ ತೊಡಕಾಗದಿರಲಿ

ನೇಪಾಲದ ಹೆಚ್ಚುಕಡಿಮೆ ಇಡೀ ರಾಜಮನೆತನದ ನರಮೇಧ ದಂಗು ಬಡಿಸುವ ಪೈಶಾಚಿಕ ಕೃತ್ಯ. ರಾಜಕುಮಾರ ದೀಪೇಂದ್ರ ಈ ಕೃತ್ಯ ಎಸಗಿದ್ದು ಎಂದು ಅರಮನೆಯ ಅಧಿಕೃತ ವಕ್ತಾರರು ಮತ್ತು ರಾಜ ನೇಮಿಸಿದ ತನಿಖಾ ಸಮಿತಿ ಹೇಳಿದೆ. ಆದರೆ ನೇಪಾಳದ ಜನತೆ ಇದನ್ನು ಪೂರ್ಣವಾಗಿ ನಂಬಿಲ್ಲ. ಅರಮನೆಯೊಳಗೆ ಪಿತೂರಿ ಬಗ್ಗೆ ಹಲವು ವದಂತಿಗಳು, ಪುಕಾರುಗಳು ಹಬ್ಬಿವೆ. ಒಂದು ವಾರ ಕಾಲ ಅರಮನೆಯಲ್ಲಿ ನರಮೇಧದ ಬಗ್ಗೆ ಸತ್ಯ ತಿಳಿಯದೆ ಹೋದ ಜನರ ರೊಚ್ಚು ಬೀದಿಗಳಿಗೆ ಹರಿದಿತ್ತು. ಒಂದು ವಾರಕ್ಕೂ ಹೆಚ್ಚು ಕಾಲ ನೇಪಾಳದ ಬಹುಭಾಗದಲ್ಲಿ ಕರ್ಫ್ಯೂ ಜಾರಿಯಲ್ಲಿತ್ತು. ನಿರಂಕುಶ ರಾಜಪ್ರಭುತ್ವವನ್ನು ಹೋರಾಟದಲ್ಲಿ ಕಿತ್ತೊಗೆದು ಪ್ರಜಾಪ್ರಭುತ್ವ ಮತ್ತು ಸಂವೈಧಾನಿಕ ಔಪಚಾರಿಕ ಅರಸೊತ್ತಿಗೆಯನ್ನು ನೇಪಾಳದ ಜನ ಸ್ಥಾಪಿಸಿದ್ದಾರೆ. ಅರಮನೆಯ ಆಗುಹೋಗುಗಳು ಏನೇ ಇರಲಿ, ನೇಪಾಳದ ಜನರ ದಶಕಗಳ ಹೋರಾಟದ ಫಲವಾದ ಪ್ರಜಾಪ್ರಭುತ್ವಕ್ಕೆ ಈ ದುರಂತವನ್ನು ಬಳಸಿ ಯಾವುದೇ ಶಕ್ತಿಗಳು ತೊಡಕಾಗದಿರಲಿ. ಈ ಘಟನೆಗಳನ್ನು ಬಳಸಿ ಭಾರತ-ನೇಪಾಳ ಸರ್ಕಾರಗಳ ಮತ್ತು ಜನತೆ ನಡುವೆ ಇರುವ ಪಾರಂಪರಿಕ ಸ್ನೇಹ, ಭ್ರಾತೃತ್ವ, ಸಹಕಾರಕ್ಕೆ ಧಕ್ಕೆ ತರುವ ಪ್ರಯತ್ನಗಳೂ ಸಫಲವಾಗದಿರಲಿ ಎಂದು ಆಶಿಸಬೇಕಾಗಿದೆ.



ದೀಪೇಂದ್ರ



ಜ್ಞಾನೇಂದ್ರ

ನೇಪಾಳದಲ್ಲಿ ರಾಜಮನೆತನದ ನರಮೇಧದ ಘಟನೆ ನೇಪಾಳದ ಜನತೆಯನ್ನು ಮಾತ್ರವಲ್ಲ, ನಮ್ಮ ದೇಶದ ಜನತೆ ಸೇರಿದಂತೆ ಇಡೀ ಜಗತ್ತನ್ನು ದಂಗು ಬಡಿಸಿದೆ. ಇಂತಹ ಘಟನೆ ಜಗತ್ತಿನಲ್ಲೇ ಅಭೂತಪೂರ್ವ ಘಟನೆ. ರಾಜಮನೆತನ, ನೇಪಾಳಕ್ಕೆ ಅತ್ಯಂತ ದೊಡ್ಡ ದುರಂತ. ಈ ದುರಂತಕ್ಕೆ ನೇಪಾಳದ ಜನತ ಕೊಪ, ಹತಾಶೆಯಿಂದ ಪ್ರತಿಕ್ರಿಯಿಸಿದ್ದಾರೆ. ತಲೆ ಬೋಳಿಸಿಕೊಂಡ ಶೋಕತಪ್ತ ಜನ ಬೀದಿಗಿಳಿದಿದ್ದರು. ನೇಪಾಳದ ಬಹುಭಾಗದಲ್ಲಿ ಕರ್ಫ್ಯೂ ಜಾರಿ ಮಾಡಬೇಕಾಯಿತು. ಹಲವು ದಿನಗಳ ಕಾಲ ಜನ ಜೀವನ ಅಸ್ತವ್ಯಸ್ತವಾಗಿತ್ತು.

ನೇಪಾಳದ ಸರ್ಕಾರ ಮತ್ತು ಅರಮನೆಯ ಗೊಂದಲಕಾರಿ ಹೇಳಿಕೆಗಳು ಈ ಗಲಭೆಗಳಿಗೆ ಕಾರಣವಾದವು. ಮೊದಲ ಸುದ್ದಿಗಳ ಪ್ರಕಾರ ರಾಜ, ರಾಣಿ ಅವರ ಎಲ್ಲಾ ಮಕ್ಕಳು, ರಾಜನ ಸೋದರರು - ಇತ್ಯಾದಿ ಸುಮಾರು 10-12 ಜನರು ಕೊಲೆಯಾಗಿದ್ದಾರೆ. ಯುವರಾಜ ದೀಪೇಂದ್ರನೇ ಈ ಕೊಲೆ ಮಾಡಿ, ತನಗೆ ಗುಂಡು ಹೊಡೆದುಕೊಂಡು ಮರಣಾಂತಿಕ ಸ್ಥಿತಿಯಲ್ಲಿ ಆಸ್ಪತ್ರೆಯಲ್ಲಿದ್ದಾನೆ. ಮರಣಾಂತಿಕ ಸ್ಥಿತಿಯಲ್ಲೇ ದೀಪೇಂದ್ರನನ್ನು 'ರಾಜ'ನಾಗಿ ನೇಮಿಸಿದ್ದು, 2-3 ದಿನಗಳ ನಂತರ ಯುವರಾಜ ದೀಪೇಂದ್ರನ ಮರಣ, ರಾಜ ಬೀರೇಂದ್ರನ ಸೋದರ ಜ್ಞಾನೇಂದ್ರನನ್ನು ರಾಜನಾಗಿ ನೇಮಿಸಿದ್ದು - ಈ ಘಟನಾವಳಿಯ ವೇಗ ಎಲ್ಲರಿಗೂ ದಂಗು ಬಡಿಸಿದವು. ದೀಪೇಂದ್ರ ಆಸ್ಪತ್ರೆಯಲ್ಲಿದ್ದಾಗ, ಈ ಇಡೀ ದುರಂತ ಒಂದು 'ಅಪಘಾತ, ಆಕಸ್ಮಿಕ' ಎಂದು ಈಗಿನ ರಾಜ ಜ್ಞಾನೇಂದ್ರ ಬಣ್ಣಿಸಿದ್ದು ಇನ್ನಷ್ಟು ಗೊಂದಲ ಉಂಟು ಮಾಡಿತು. ದೀಪೇಂದ್ರನ ಮರಣ ನಂತರ ಜ್ಞಾನೇಂದ್ರ ತನ್ನ ಮೊದಲ ಹೇಳಿಕೆ ವಾಪಸು ತೆಗೆದುಕೊಂಡಿದ್ದು. ಇಡೀ ಪ್ರಕರಣದ ಬಗ್ಗೆ ಸರ್ಕಾರದ ಮೌನ, ನಿಷ್ಕ್ರಿಯೆ, ಪ್ರಧಾನಿ ತನಿಖೆಗೆ ಆಜ್ಞೆ ಮಾಡಿ ವಾಪಾಸು ತೆಗೆದುಕೊಂಡಿದ್ದು, ರಾಜ ಜ್ಞಾನೇಂದ್ರರಿಂದ ತನಿಖಾ ಸಮಿತಿಯಿಂದ ತನಿಖೆಯ ಪ್ರಕಟಣೆ - ಇವೆಲ್ಲ ಇಡೀ ಪ್ರಕರಣವನ್ನು ಇನ್ನಷ್ಟು ನಿಗೂಢಗೊಳಿಸಿದವು.

ನಿಗೂಢ ಪ್ರಕರಣ

ತನಿಖಾ ಸಮಿತಿಯ ಸದಸ್ಯರಲ್ಲಿ ಒಬ್ಬರಾದ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಮಾಧವ ನೇಪಾಳಿ ಸಮಿತಿಯಲ್ಲಿ ಕೆಲಸ ಮಾಡಲು ನಿರಾಕರಿಸಿದ್ದು, ಸಮಿತಿಯ ವರದಿಯ ನಂಬಲರ್ಹತೆಯನ್ನು ಇನ್ನಷ್ಟು ಕಡಿಮೆ ಮಾಡಿದೆ. ನರಮೇಧದ ಬಗ್ಗೆ ವರದಿ, ಟೀಕೆ-ಟಿಪ್ಪಣಿಗಳನ್ನು ಪ್ರಕಟಿಸದಂತೆ ಸರ್ಕಾರ ಪತ್ರಿಕೆ, ಸಮೂಹ ಮಾಧ್ಯಮಗಳ ಮೇಲೆ ನಿರ್ಬಂಧ ಹೇರಿದ್ದು, ಇದನ್ನು ಉಲ್ಲಂಘಿಸಿದ ಪತ್ರಿಕೆಯೊಂದರ ಸಂಪಾದಕ, ವ್ಯವಸ್ಥಾಪಕ ವರ್ಗದ ಬಂಧನ ಇನ್ನಷ್ಟು ಸಂಶಯಕ್ಕೆಡೆ ಮಾಡಿಕೊಟ್ಟಿತು. ತನಿಖಾ ಸಮಿತಿ ಕೆಲ ಮಾಡಲು ಆರಂಭ ಮಾಡುವ ಮೊದಲೇ ರಾಜನ ಒಬ್ಬ ನಿಕಟ ಸಂಬಂಧಿ(ರಾಜನ ತಮ್ಮನ ಅಳಿಯ ಮತ್ತು ಮಿಲಿಟರಿ ಆಸ್ಪತ್ರೆ ಅಧಿಕಾರಿ) ಸೇರಿದಂತೆ ಹಲವು ಅರಮನೆಯಲ್ಲಿದ್ದ ಸಂಬಂಧಿಗಳು, ಸಿಬ್ಬಂದಿ ತಮ್ಮ 'ಪ್ರತ್ಯಕ್ಷದರ್ಶಿ' ವಿವರಗಳನ್ನು ದೇಶೀಯ, ಅಂತರ್‍ರಾಷ್ಟ್ರೀಯ ಮಾಧ್ಯಮಗಳಿಗೆ ಕೊಡಲಾರಂಭಿಸಿದ್ದು ನಿಗೂಢತೆ ಹೆಚ್ಚಲು ಕಾರಣವಾಯಿತು. ತನಿಖಾ ಸಮಿತಿಯ ವರದಿ ಪ್ರಕರಣದ ನಿಗೂಢತೆ ಕಡಿಮೆ ಮಾಡುವಲ್ಲಿ ಸಹಾಯಕವಾಗಿಲ್ಲ.

ಈಗಿನ ಅಧಿಕೃತ ಹೇಳಿಕೆ ಪ್ರಕಾರ ಯುವರಾಜ ದೀಪೇಂದ್ರ ದೇವಯಾನಿ ಎಂಬುವಳ ಜತೆ ಮದುವೆ ಬಗ್ಗೆ ರಾಜ ಕುಟುಂಬದೊಳಗೆ ವಿವಾದ ಈ ಇಡೀ ದುರಂತಕ್ಕೆ ಕಾರಣವಾಯಿತು. ರಾಜ ಬೀರೇಂದ್ರ, ರಾಣಿ ಐಶ್ವರ್ಯದೇವಿ ಈ ಮದುವೆಯನ್ನು ವಿರೋಧಿಸಿದ್ದರು. ದುರಂತದ ರಾತ್ರಿ ಈ ಬಗ್ಗೆ ವಾಗ್ವಾದ ನಡೆದು, ಕುಡಿದ ಮತ್ತಿನಲ್ಲಿದ್ದ ಯುವರಾಜ ಕೋಪದಲ್ಲಿ ಗುಂಡು ಹಾರಿಸಿ ಅಲ್ಲಿದ್ದ ಎಲ್ಲರನ್ನು ಕೊಂದ, ತನ್ನ ತಲೆಗೂ ಗುಂಡು ಹಾರಿಸಿಕೊಂಡ. ತನಿಖಾ ಸಮಿತಿ ವರದಿ ಪ್ರಕಾರ ದಿಪೇಂದ್ರ ಮಾದಕ ದ್ರವ್ಯಗಳ ಸೇವನೆ ಸಹ ಮಾಡಿದ್ದ. ಈ ಕೊಲೆ 10-15 ನಿಮಿಷಗಳ ಅಂತರದಲ್ಲಿ ನಡೆಯಿತು. ಈ ನಡುವೆ ದೀಪೇಂದ್ರ ದೇವಯಾನಿ ಜತೆಗೆ ಮೊಬೈಲ್ ಫೋನ್‌ನಲ್ಲಿ ಮೂರು ಬಾರಿ ಮಾತಾಡಿದ. ಈ ಇಡೀ ಘಟನಾವಳಿಯಲ್ಲಿ ಹಲವು ಹುಳುಕುಗಳನ್ನು ನೇಪಾಳದ ಜನ ಕಂಡಿದ್ದಾರೆ. 10-15 ನಿಮಿಷಗಳ ಕಾಲ ಗುಂಡು ಹಾರಿಸುವಾಗ ರಾಜನ ಅಂಗರಕ್ಷಕ ಪಡೆ, ಅರಮನೆಯ ಕಾವಲಿಗೆ ನಿಯುಕ್ತವಾಗಿರುವ ಸೈನ್ಯದ ತುಕಡಿ ಏನು ಮಾಡುತ್ತಿತ್ತು? ದೀಪೇಂದ್ರನಿಗೆ ಎಲ್ಲವನ್ನೂ ಕೊಲೆ ಮಾಡುವ ಉದ್ದೇಶವಾದರೂ ಏನಿರಬಹುದು? ಮಡಿದ ರಾಜಮನೆತನದ ಎಲ್ಲರ ಶವ-ಪರೀಕ್ಷೆ ಯಾಕೆ ಮಾಡಲಿಲ್ಲ? ಯುವರಾಜನ ಶವ ಪರೀಕ್ಷೆ ಯಾಕೆ ಮಾಡಲಿಲ್ಲ. ನಿಜವೇ?! ಯುವರಾಜನ ಬೆನ್ನ ಮೇಲೂ ಒಂದು ಗುಂಡು ತಗಲಿತ್ತು ಎನ್ನುವುದು ನಿಜವೇ? ಶವಗಳಲ್ಲಿ ಇರಬಹುದಾಗಿದ್ದ ಗುಂಡು ಮತ್ತು ದೀಪೇಂದ್ರನ ಬಂದೂಕಿನ ಗುಂಡುಗಳ ತುಲನಾತ್ಮಕ ವಿಶ್ಲೇಷಣೆ ನಡೆಸದೆ, ಶವ ಪರೀಕ್ಷೆ ನಡೆಸದೆ ದೀಪೇಂದ್ರ ಕೊಲೆಗಾರ ಎಂಬ ತೀರ್ಮಾನಕ್ಕೆ ಬರುವುದು ಎಷ್ಟು ಸರಿ. ಇವೆಲ್ಲ ಪ್ರಶ್ನೆಗಳ ಜತೆ ಈಗಿನ ರಾಜ ಜ್ಞಾನೇಂದ್ರ ಆ ರಾತ್ರಿ ಅರಮನೆಯಲ್ಲಿ ಇಲ್ಲದ್ದು, ಆತನ ಮಗ ಪಾರಸ್ ಸ್ಥಳದಲ್ಲಿದ್ದೂ ಯಾವುದೇ ಅಪಾಯವಿಲ್ಲದೇ ಪಾರಾದ್ದು, ಪಾರಸ್ ಒಬ್ಬ ಸಂಗೀತಗಾರನನ್ನು ಕೊಲೆ ಮಾಡಿದ ಎಂಬ ಆರೋಪದ ಹಿನ್ನೆಲೆ-ಅರಮನೆಯಲ್ಲಿ ಪಿತೂರಿ ಬಗ್ಗೆ ಹಲವು ವದಂತಿಗಳು, ಪುಕಾರುಗಳು ಹರಡಲು ಕಾರಣವಾಗಿವೆ.

ಮುಂದೇನು?

ರಾಜಮನೆತನಗಳಲ್ಲಿ ಪಿತೂರಿ, ಮೇಲಾಟ ಸಾಮಾನ್ಯ. ಇದರ ಭಾಗವಾಗಿ ಹಿಂಸಾಚಾರ, ಕೊಲೆಗಳು ಅಪರೂಪವೇನಲ್ಲ. ಆದರೂ ನೇಪಾಳದಲ್ಲಿ ಆದ ದುರಂತ ಅತ್ಯಂತ ಭೀಕರವಾದದ್ದು. ಆದರೂ ಈ ದುರಂತವನ್ನು ಮರೆತು ನೇಪಾಳದ ಜನತೆ ಬದುಕು ಮುಂದೆ ಸಾಗಬೇಕಾಗಿದೆ. ದಶಕಗಳ ಹೋರಾಟದ ನಂತರ ನೇಪಾಳದ ಜನತೆ ಸ್ಥಾಪಿಸಿರುವ ರಾಜಕೀಯ ವ್ಯವಸ್ಥೆಯಲ್ಲಿ ಪಾರ್ಲಿಮೆಂಟು ಪ್ರಜಾಪ್ರಭುತ್ವದ ಜತೆಗೆ ಔಪಚಾರಿಕ ಸಂವೈಧಾನಿಕ ರಾಜ ಪ್ರಭುತ್ವ ಇದೆ. ಈ ವ್ಯವಸ್ಥೆಯಲ್ಲಿ ರಾಜ ಅನುವಂಶಿಕವಾಗಿ ಬಂದರೂ ಔಪಚಾರಿಕ ಸಂವೈಧಾನಿಕ ಮುಖ್ಯಸ್ಥ ಅಷ್ಟೇ. ಹಿಂದಿನ ರಾಜ ಬೀರೇಂದ್ರ 1972 ರಿಂದ 1990 ರವರೆಗೆ ನಿರಂಕುಶ ಆಡಳಿತ ಮಾಡಿದರೂ, ಪ್ರಜಾಪ್ರಭುತ್ವ ಚಳುವಳಿಯ ಒತ್ತಡಕ್ಕೆ ಮಣಿದು ಈಗಿನ ವ್ಯವಸ್ಥೆಗೆ ಒಪ್ಪಿಕೊಂಡಿದ್ದ. ನಿರಂಕುಶ ರಾಜ ಪ್ರಭುತ್ವದಿಂದ ಪೂರ್ಣ ಪ್ರಜಾಪ್ರಭುತ್ವದತ್ತ ಬದಲಾವಣೆಯಲ್ಲಿ ಇದು ಪ್ರಮುಖಹೆಜ್ಜೆ. ಹಿಂದಿನ ರಾಜ ಬೀರೇಂದ್ರ ಈ ಬದಲಾವಣೆಯ ಪ್ರತೀಕವಾಗಿದ್ದ - ಈ ಬದಲಾವಣೆಗೆ ರಕ್ತಪಾತವಿಲ್ಲದೆ ಒಪ್ಪಿಕೊಳ್ಳುವ ಮೂಲಕ. ರಾಜನ ಕೊಲೆ ಈ ಬದಲಾವಣೆಯ ಪ್ರಕ್ರಿಯೆಗೆ ತಡೆಯೊಡ್ಡುವ, ತೊಡಕಾಗುವಂತೆ ಆಗಬಾರದು. ರಾಜ ಮನೆತನದ ಕಗ್ಗೊಲೆಯ ಭೀಕರತೆ ಬಗ್ಗೆ ಶೋಕ, ಅನುಕಂಪ, ರೋಷ-ರಾಜಪ್ರಭುತ್ವದ ಬಗ್ಗೆ ಭಕ್ತಿ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆ ವಿರುದ್ಧ ಆಶಾಭಂಗವಾಗಿ ತಿರುಗದಂತೆ - ಎಚ್ಚರವಹಿಸುವುದು ನೇಪಾಳದ ಎಡ-ಪ್ರಗತಿಪರ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಕರ್ತವ್ಯ. ಈಗಿನ ರಾಜನ ಬಗೆಗೆ ಜನತೆಯಲ್ಲಿರಬಹುದಾದ ಸಂಶಯ, ಕೋಪಗಳನ್ನು ಬಳಸಿ ರಾಜಪ್ರಭುತ್ವವನ್ನು ಕಿತ್ತೊಗೆಯಲು ಪ್ರಯತ್ನಿಸಬಹುದಾದ ದುಸ್ಸಾಹಸವಾದಿಗಳ ಅಕಾಲಿಕ ಪ್ರಯತ್ನ ಇನ್ನೂ ಗಟ್ಟಿಯಾಗಿ ಬೇರು ಬಿಡಬೇಕಾದ ನೇಪಾಳದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮುಳುವಾಗಬಹುದು. ಅಮೆರಿಕದ ರಾಯಭಾರ ಕಛೇರಿ ಚೀನಾ ಪರ ಮಾವೋವಾದಿಗಳು ನೇಪಾಳದ ಈಗಿನ ಅರಾಜಕತೆ ಬಳಸಿ ಅಧಿಕಾರ ಕಸಿಯುವ ಪ್ರಯತ್ನದ ಬಗ್ಗೆ ಎಚ್ಚರವಹಿಸುವುದು - ಈ ಉಪಖಂಡದಲ್ಲಿ ಸಾಮ್ರಾಜ್ಯಶಾಹಿಯ ಮೂಗು ತೂರಿಸುವ ಪ್ರಯತ್ನದ ಅಪಾಯದ ಸಂಕೇತ. ಈ ಬಗೆಗೂ ಎಚ್ಚರ ಅಗತ್ಯ.

ರಾಜಮನೆತನದ ದುರಂತದ ಬಗ್ಗೆ ನೇಪಾಳದ ಜನರ ರೋಷ, ಬಾಗಶಃ ಭಾರತದ ಕಡೆಗೂ ತಿರುಗಿತ್ತು. ಭಾರತ ಮತ್ತು ಅಮೆರಿಕದ ಬೇಹುಗಾರಿಕೆ ಸಂಸ್ಥೆಗಳು ಈ ಕಗ್ಗೊಲೆ ಎಸಗಿವೆ ಎಂಬ ವದಂತಿ ಆಗುವವರೆಗೂ ಹೋಗಿತ್ತು. ಈ ನೇಪಾಳದ ದುರಂತದ ಬಗ್ಗೆ ವರದಿ ಮಾಡುವಾಗ ಆ ದೇಶದ ಜನರ ಭಾವನೆಗಳಿಗೆ ಗೌರವ ಕೊಡುವ ಸಂಯಮ ಬಳಸದೆ, ಅದರ ಬಗ್ಗೆ ಅತಿರಂಜಿತ, ಅನಗತ್ಯ ಅನಪೇಕ್ಷಿತ ವಿವರಗಳ ಮೂಲಕ 'ಗುಲ್ಲು' ಮಾಡಿದ ಭಾರತದ ಸುದ್ದಿ ಮಾಧ್ಯಮಗಳು ಇದಕ್ಕೆ ಭಾಗಶಃ ಕಾರಣ. ಇದರ ಜತೆಗೆ ನೈಜ ಸಮಾನತೆ, ಭ್ರಾತೃತ್ವ, ಸಹಕಾರದ ಬಗ್ಗೆ, ನೆರೆಯ 'ದೊಡ್ಡಣ್ಣ'ನ ಮೂಗು ತೂರಿಸುವ ಮನೋಭಾವ ಭಾರತಕ್ಕೆ ಇಲ್ಲ ಎಂಬ ಬಗ್ಗೆ ಭರವಸೆ ಮೂಡಿಸುವಲ್ಲಿ ವೈಫಲ್ಯತೆಯೂ ಕಾರಣ. ಭಾರತ-ನೇಪಾಳದ ಜನತೆ ನಡುವೆ ವೈಷಮ್ಯ ತರಲು ಅಮೆರಿಕ ಮತ್ತು ಎರಡೂ ದೇಶಗಳ ಪಟ್ಟಭದ್ರ ಹಿತಾಸಕ್ತಿಗಳು ಪ್ರಯತ್ನಿಸುತ್ತಿವೆ. ಈ ಹಿನ್ನೆಲೆಯಲ್ಲಿ ಎರಡೂ ದೇಶಗಳ ನಡುವೆ ನೈಜ ಸಮಾನತೆ, ಭ್ರಾತೃತ್ವ, ಸಹಕಾರಕ್ಕೆ ಧಕ್ಕೆ ತರುವ ಪ್ರಯತ್ನಗಳ ಬಗೆಗೂ ಎರಡೂ ದೇಶಗಳ ಎಡ-ಪ್ರಗತಿಪರ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಎಚ್ಚರವಹಿಸಬೇಕಾಗಿದೆ.

- ಶರತ್ ಚಂದ್ರ

ಪ್ರೊಫೆಸರ್ ಜೆ.ಡಿ.ಬರ್ನಾಲ್ ಶತಮಾನೋತ್ಸವ..........

ತೆಗೆದುಕೊಂಡವು. ಅಣುಯುದ್ಧದ ವಿರುದ್ಧ ಅವರು ಆರಂಭಿಸಿದ್ದ ಪ್ರಚಾರ ಪ್ರತಿಭಟನೆ ಆಳುವವರಿಗೆ ಹಿಡಿಸಲಿಲ್ಲ. ವಿಶ್ವ ಶಾಂತಿ ಕೌನ್ಸಿಲ್, ಪ್ರಗವಾರ್ ಯುದ್ಧ ವಿರೋಧಿ ಸಮ್ಮೇಳನ, ವಿಶ್ವ ವೈಜ್ಞಾನಿಕ ಕರ್ಮಗಳ ಸಂಘಟನೆ, ಆಗ ಸ್ವತಂತ್ರ್ಯವಾಗಿದ್ದ ಮಾಜಿ ವಸಾಹತು ದೇಶಗಳ ವೈಜ್ಞಾನಿಕ ಯೋಜನೆ ನೇರವಾಗಿ ಹಾಗೂ ಯುನೆಸ್ಕೊದ ಮೂಲಕ ಸಹಾಯ-ಇತ್ಯಾದಿ ಕೆಲಸದಲ್ಲಿ ಬರ್ನಾಲ್ ತೊಡಗಿದರು. ಇಡೀ ವಿಶ್ವ ಅವರ ಕಾರ್ಯಕ್ಷೇತ್ರವಾಗಿತ್ತು.

ಬರ್ನಾಲ್ ಮತ್ತು ಭಾರತ

ಬರ್ನಾಲ್ ಭಾರತದಲ್ಲಿ ವಿಜ್ಞಾನದ ಬೆಳವಣಿಗೆಯಲ್ಲಿ ವಿಶೇಷ ಆಸಕ್ತಿ ಹೊಂದಿದ್ದರು. ಅದಕ್ಕಾಗಿ ನೇರವಾಗಿ ಹಾಗೂ ಅವರ ಹಲವು ವಿದ್ಯಾರ್ಥಿಗಳ, ... ಸಹಯೋಗಿಗಳ ಮೂಲಕ ದುಡಿದರು. ಅವರ ಹಲವು ಭಾರತೀಯ ವಿದ್ಯಾರ್ಥಿಗಳು ಸ್ವದೇಶಕ್ಕೆ ಮರಳಿ ವಿಜ್ಞಾನದ ಸಂಶೋಧನೆ ಗುಂಪುಗಳನ್ನು ಆರಂಭಿಸುವಂತೆ ಪ್ರೋತ್ಸಾಹಿಸಿದರು. ಭಾರತ ಪ್ರಾಚೀನ ವಿಜ್ಞಾನ-ತಂತ್ರಜ್ಞಾನಗಳ ಬಗ್ಗೆ ಸಂಶೋಧನೆ ಅದರ ಪಾತ್ರದ ಬಗ್ಗೆ ವಿಶ್ಲೇಷಣೆ ನಡೆಯುವುದರಲ್ಲೂ ಬರ್ನಾಲ್ ಪಾತ್ರವಿದೆ. ಈ ಕ್ಷೇತ್ರದಲ್ಲಿ ದುಡಿವ ಪ್ರೊ। ಕೋಸಾರು ಮತ್ತು ಇತರ ಹಲವು ಪ್ರಗತಿಪರ ವಿಜ್ಞಾನಿಗಳಿಗೆ ಅವರು ಪ್ರೋತ್ಸಾಹಿಸಿ, ಸಹಕರಿಸಿದರು.

ಆದರೆ ಅವರ ಮಹಾನ್ ಕೊಡುಗೆ ವಿಶ್ವಕೋಶದಂತಿರುವ ನಾಲ್ಕು ಸಂಪುಟಗಳ ಚರಿತ್ರೆಯಲ್ಲಿ ವಿಜ್ಞಾನ ಎಂಬ ಮಹಾ ಗ್ರಂಥ. ಮೂರು ಸಾವಿರಗಳ ವಿಶ್ವ ವಿಜ್ಞಾನದ ಚರಿತ್ರೆ ಮಾತ್ರವಲ್ಲ. ಕೊಡಲಿಯಿಂದ ಹೈಡ್ರೋಜನ್ ಬಾಂಬ್‌ವರೆಗೆ, ಬೆಂಕಿಯಿಂದ ಕಂಪ್ಯೂಟರ್‌ವರೆಗೆ ವಿಜ್ಞಾನ-ತಂತ್ರಜ್ಞಾನದ ಆವಿಷ್ಕಾರಗಳಲ್ಲಿ ಸಮಾಜ, ಸಾಮಾಜಿಕ ವ್ಯವಸ್ಥೆಯ ಪಾತ್ರದ (ಆ ಆವಿಷ್ಕಾರಗಳಿಗೆ ಕಾರಣವಾದ ಅವನ್ನು ತಡೆಯಲು ಪ್ರಯತ್ನಿಸಿದ ಶಕ್ತಿಗಳೆರಡರ ಬಗ್ಗೆಯೂ) ವಿವರವಾದ ಚಿತ್ರಣ ಅಲ್ಲಿದೆ. ಪ್ರಾಚೀನ ಸಮಾನತೆಯ, ಗುಲಾಮ ಪದ್ಧತಿ, ಪಾಳೆಯಗಾರಿ, ಬಂಡವಾಳಶಾಹಿ, ಸಮಾಜವಾದಿ ವ್ಯವಸ್ಥೆ ವಿಜ್ಞಾನ ತಂತ್ರಜ್ಞಾನದ ಬೆಳವಣಿಗೆ ಸಮಾಜದ ಆರ್ಥಿಕ ಸಾಮಾಜಿಕ, ರಾಜಕೀಯ ಆಚಾರ-ವಿಚಾರಗಳ ಬದಲಾವಣೆಯ ಬಗ್ಗೆ ಒಳನೋಟ ಸಿಗುತ್ತದೆ. ಈ ಮಹಾನ್ ಗ್ರಂಥ ವಿಜ್ಞಾನ-ಸಮಾಜಗಳ ಪರಸ್ಪರ ಸಂಬಂಧದ ಬಗ್ಗೆ ಸಮಗ್ರ ಚಿತ್ರಣ ಸಮಾಜ-ವಿಜ್ಞಾನ ಮತ್ತು ಅದರ ಉನ್ನತ ರೂಪವಾದ ಮಾರ್ಕ್ಸ್‌ವಾದದ ಬಗೆಗೂ ಬೆಳಕು ಚೆಲ್ಲುವ ಈ ಮಹಾನ್‌ಗ್ರಂಥವನ್ನು ಅಧ್ಯಯನ ಮಾಡಿ ಅದನ್ನು ಸಾಮಾಜಿಕ ಚಳುವಳಿಯಲ್ಲಿ ವಿಜ್ಞಾನದ ಪಾತ್ರ ಯೋಜಿಸುವುದರಲ್ಲಿ ಅಳವಡಿಸುವುದು ಬರ್ನಾಲ್‌ರಿಗೆ ನಾವು ಸಲ್ಲಿಸಬಹುದಾದ ಅತ್ಯುತ್ತಮ ಶ್ರದ್ಧಾಂಜಲಿ. ವೈಜ್ಞಾನಿಕ-ತಾಂತ್ರಿಕ ಕೆಲಸದ ಜತೆ ಸಾಮಾಜಿಕ ಜವಾಬ್ದಾರಿಯನ್ನು ಹೇಗೆ ಜತೆ-ಜತೆಗೆ ನಿರ್ವಹಿಸಬಹುದು, ಅವರು ಎಲ್ಲಾ ಪ್ರಗತಿಪರ ವಿಜ್ಞಾನಿಗಳಿಗೆ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ.

ಲವಲವಿಕೆಯ 'ಚಿತ್ರ'

ಹೊಸ ಮುಖಗಳು, ಚುರುಕು ಸಂಭಾಷಣೆ, ಇಲ್ಲಿಯ ಪರಿಸರಕ್ಕೆ ಹೊರತು ಎನ್ನಬಹುದಾದ ಕಥೆಯೇ 'ಚಿತ್ರ' ಸಿನಿಮಾ.

ಕಾಲೇಜು ಜೀವನದಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿರುವ ಹದಿಹರೆಯದವರ ಪ್ರೇಮ-ಕಾಮಗಳ ಕಣ್ಣಾಮುಚ್ಚಾಲೆ ಇರಬಹುದಾದರೂ ವಿದ್ಯಾರ್ಥಿ ದೆಸೆಯಲ್ಲೇ ಮದುವೆ, ಮಕ್ಕಳು-ಗರ್ಭಿಣಿಯಾಗಿ ಕಾಲೇಜಿಗೆ ಭರುವಂತಹ ಉದಾಹರಣೆ ತೀರಾ ಅಪರೂಪ ನಮ್ಮ ಸಮಾಜದಲ್ಲಿ.

ಮುಂದುವರಿದ ರಾಷ್ಟ್ರಗಳಲ್ಲಿ ತೀರಾ ಸಾಮಾನ್ಯ ಎಂಬತಾಗಿರುವ 'ಟೀನ್ ಏಜ್'ನಲ್ಲಿ ತಾಯಿ ಯರಾಗುವ ಸಮಸ್ಯೆಯನ್ನು ಎಳೆಯಾಗಿಟ್ಟುಕೊಂಡು ಕಥೆ ಹೆಣೆದ ತೆಲುಗು'ಚಿತ್ರ'ವನ್ನು ಕನ್ನಡಕ್ಕಿಳಿಸಿದ್ದಾರೆ ದಿನೇಶ್‌ಬಾಬು.

ವ್ಯಾಸಂಗ ಕಾಲದಲ್ಲಿನ ಇಂತಹ 'ಎಡವಟ್ಟು'ಗಳಿಂದ ತಮ್ಮ ಶಿಕ್ಷಣ, ಭವಿಷ್ಯವನ್ನು ಕಳೆದುಕೊಳ್ಳುವ ವಿದ್ಯಾರ್ಥಿಗಳ ಪರಿಪಾಟಲನ್ನು ಬಿಂಬಿಸುವುದೇ ಈ 'ಚಿತ್ರ'ದ ಮೂಲ ಉದ್ದೇಶವಾಗಿದೆ.

ರಾಮು-ಚಿತ್ರ ಕಾಲೇಜಿನಲ್ಲಿ ಒಬ್ಬರಿಗೊಬ್ಬರು ಆಕರ್ಷಿತರಾಗಿ ಯೌವನದ ಉನ್ಮಾದದಲ್ಲಿ ಮೈಮರೆಯುತ್ತಾರೆ. ರಾಮು ಗರ್ಭಿಣಿಯಾದ ಚಿತ್ರಳನ್ನು ಮದುವೆಯಾಗಲು ಮತ್ತು ಚಿತ್ರ ಅಬಾರ್ಷನ್ ಮಾಡಿಸಿಕೊಳ್ಳಲು ನಿರಾಕರಿಸಿ ಕೊನೆಗೆ ಬೇರೆ ದಾರಿಯೇ ಕಾಣದೆ ಮದುವೆ ಎಂಬ ಬಂಧನಕ್ಕೆ ಕೊರಳೊಡ್ಡಬೇಕಾಗುತ್ತದೆ.

ಮನೆ, ಹೆಂಡತಿ, ಮಗು-ಅವರನ್ನು ಸಾಕುವ ಜವಾಬ್ದಾರಿ-ಶಿಕ್ಷಣ ಇದಾವುದಕ್ಕೂ ನ್ಯಾಯ ಒದಗಿಸಲಾರದೆ ರಾಮು ಬಳಲುತ್ತಾನೆ. ಚಿತ್ರ ಕೂಡ ಶಿಕ್ಷಣದಿಂದ ವಂಚಿತಳಾಗುತ್ತಾಳೆ. ಆಕರ್ಷಣೆ ಗೊಳಗಾಗಿ ಒಂದಾದವರು ನಂತರ ಘರ್ಷಣೆ ಗಿಳಿಯುತ್ತಾರೆ. ಮಾಡಿದ ತಪ್ಪನ್ನು ಮನಗಂಡು ಸೋಲನ್ನೊಪ್ಪಿಕೊಳ್ಳುತ್ತಾರೆ. ಇದು 'ಚಿತ್ರ'ದ ಸಾರಾಂಶ.

ಆದರೆ ಕಥೆಗಿಂತಲೂ ಕಾಲೇಜು ಹುಡುಗರ 'ಹುಡುಗುತನ', ತುಂಟಾಟ, ತರಲೆ ಮಾತುಗಳು ಗಮನಸೆಳೆಯುತ್ತವೆ. ಅವರ ಅಭಿನಯವೂ ಲವಲವಿಕೆ, ತಾಜಾತನದಿಂದ ಕೂಡಿದೆ. ಅದಕ್ಕೆ ಪೂರಕವಾಗಿ ಸಂಭಾಷಣೆಯು ಕೂಡ ಚುರುಕಾಗಿದ್ದು ಮನಸ್ಸಿಗೆ ಕಚಗುಳಿಯಿಡುತ್ತದೆ.

ಮಧ್ಯಮವರ್ಗದ ಸಂಸಾರಿಗಳಾಗಿ ಅನಂತ್‌ನಾಗ್-ವನಿತಾ ವಾಸು ಅಭಿನಯ ಚೆನ್ನಾಗಿದೆ. ಜಗಳಕ್ಕಿಳಿದಾಗ ಬಡಿದಾಡುವ ಪರಿ ಅತಿರೇಕವೆನಿಸಿದರೂ ನಗೆಯುಕ್ಕಿಸುವಲ್ಲಿ ಸಫಲವಾಗಿವೆ. ಅಶ್ಲೀಲತೆಯಿಲ್ಲದ ನವಿರಾದ ಹಾಸ್ಯ ಸನ್ನಿವೇಶಗಳು ಮನಸ್ಸಿಗೆ ಮುದ ನೀಡುತ್ತವೆ. ಚಿತ್ರದ ಹಾಡುಗಳು ಗುನುಗುನಿಸು ವಂತಿದ್ದರೂ ಕನ್ನಡದಲ್ಲಿ ಹಾಡುತ್ತಿದಾರೋ, ಇಂಗ್ಲೀಷಿನಲ್ಲಿ ಹಾಡುತ್ತಿದ್ದಾರೋ ಗೊತ್ತಾಗುವುದಿಲ್ಲ. ಬಹುಶಃ ಗುರುಕಿರಣರ ಸಂಗೀತದ ಶೈಲಿಯೇ ಹಾಗೇನೋ. ಏಕೆಂದರೆ ಅವರ ಸಂಗೀತ ನಿರ್ದೇಶನದ ಚಿತ್ರಗಳ ಸರಿಸುಮಾರು ಹಾಡುಗಳು ಹೀಗೆಯೇ ಇರುತ್ತವೆ. ಏನು ಹಾಡುತ್ತಿದ್ದಾರೆ ಎನ್ನುವುದೇ ಅರ್ಥವಾಗುವುದಿಲ್ಲ.

ಚಿತ್ರದ ಮೊದಲಾರ್ಧ ಹಾಸ್ಯದ ಲೇಪನದೊಂದಿಗೆ ನವಿರಾದ ನಿರೂಪಣೆಯಿಂದ ಮನಸ್ಸಿಗೆ ಮುದ ನೀಡುವುದರಿಂದ 'ರಿಲ್ಯಾಕ್ಸ್' ಬಯಸುವವರು



ಈ 'ಚಿತ್ರ' ನೋಡಲಡ್ಡಿಯಿಲ್ಲ. ಆದರೆ ಅಲ್ಲಿನ ಆಕರ್ಷಣೀಯವೆನಿಸುವ ಪ್ರೀತಿ-ಪ್ರೇಮದ ದೃಶ್ಯಗಳಿಗೆ ಮರುಳಾಗಿ ತಾವು ಅದೇ ದಾರಿ ಹಿಡಿಯದಿದ್ದರೆ ಸರಿ.

- ರಾಮು

ವಿಶ್ವಕಪ್ ಫುಟ್‌ಬಾಲ್: ಕಮರಿದ ಭಾರತದ ಕನಸು

ಭಾರತ ಫುಟ್ ಬಾಲ್ ತಂಡ ವಿಶ್ವಕಪ್ ಅರ್ಹತಾ ಸುತ್ತಿನ ಏಷ್ಯಾ ವಲಯದ ಎಂಟನೇ ಗುಂಪಿನಲ್ಲಿ ಎರಡನೇ ಸ್ಥಾನವನ್ನು ಪಡೆಯುವಲ್ಲಿ ವಿಫಲವಾಗಿ, ಎರಡನೇ ಸುತ್ತಿಗೆ ಪ್ರವೇಶ ಪಡೆಯುವ ಅವಕಾಶದಿಂದ ವಂಚಿತಗೊಂಡಿತು. ಹೀಗೆ ವಿಶ್ವಕಪ್ ಸ್ಪರ್ಧೆಯಲ್ಲಿ ಭಾಗವಹಿಸುವ ಅದ್ದರ ಕನಸು ಕಮರಿ ಹೋಯಿತು.

ಭಾರತದಲ್ಲಿ ಫುಟ್ ಬಾಲ್ ಇಲ್ಲಿವರೆಗೆ ಪೂರ್ಣವಾಗಿ ಪ್ರೇಕ್ಷಕರನ್ನು ತನ್ನತ್ತ ಸೆಳೆಯಲು ಸಫಲವಾಗದಿದ್ದರೂ, ಕ್ರಿಕೆಟ್‌ನಂತೆ ಕೇವಲ ಅಂತರ ರಾಷ್ಟ್ರೀಯ ಪಂದ್ಯಗಳು ಮಾತ್ರ ಜನಪ್ರಿಯವಾಗಿರದೆ ಕೆಳಮಟ್ಟದಿಂದಲೂ ತನ್ನದೆ ಆದ ಪ್ರೇಕ್ಷಕರನ್ನು ಹಾಗೂ ಆಕರ್ಷಣೆಯನ್ನು ಹೊಂದಿದೆ.

ಜಗತ್ತಿನ ನೂರಾರು ತಂಡಗಳು ವಿಶ್ವಕಪ್ ಸ್ಪರ್ಧೆಯಲ್ಲಿ ಸ್ಪರ್ಧಿಸುವ ಬಯಕೆ ಹೊಂದಿರುವುದರಿಂದ 2002ನೇ ಇಸ್ವಿಯಲ್ಲಿ ಏಷ್ಯಾದ ಜಪಾನ್ ದಕ್ಷಿಣಕೋರಿಯದಲ್ಲಿ ನಡೆಯುವ ವಿಶ್ವಕಪ್ ಪಂದ್ಯಗಳಿಗೆ ಪೂರ್ವಬಾವಿಯಾಗಿ ಆಯಾ ಖಂಡಗಳ ತಂಡಗಳ ನಡುವೆ ಅರ್ಹತಾ ಸ್ಪರ್ಧೆಗಳು ಪ್ರಾರಂಭಗೊಂಡಿವೆ.

ಏಷ್ಯಾ ವಲಯದಲ್ಲಿ 10 ಗುಂಪುಗಳಿದ್ದು ಪ್ರತಿಗುಂಪಿನಿಂದ ತಲಾ ಒಂದು ತಂಡ ಮುಂದಿನ ಸುತ್ತು ತಲುಪುತ್ತವೆ. ಅಂದರೆ ಒಟ್ಟು ಹತ್ತು ತಂಡ ಮುಂದಿನ ಹಂತ ತಲುಪಲಿದ್ದು ಅಲ್ಲಿ ತಲಾ 5 ತಂಡಗಳ ಎರಡು ಗುಂಪಿನಲ್ಲಿ ಮತ್ತೊಂದು ಸ್ಪರ್ಧೆ ನಡೆಯುತ್ತಿದೆ. ಈ ಎರಡೂ ಗುಂಪಿನಿಂದ ತಲಾ ಒಂದು ತಂಡ ವಿಶ್ವಕಪ್‌ಗೆ ಅರ್ಹತೆ ಪಡೆದರೆ, ಎರಡನೇ ಸ್ಥಾನ ಪಡೆದ ತಂಡಗಳ ನಡುವೆ ವಿಜೇತ ತಂಡ ಯೂರೋಪಿನ ಒಂದು ತಂಡದೊಂದಿಗೆ ಅಂತಿಮ ಸ್ಪರ್ಧೆಗೆ ಅರ್ಹತೆ ಪಡೆಯಲು ಪೈಪೋಟಿ ನಡೆಸಲಿದ್ದು ವಿಜೇತ ತಂಡಕ್ಕೆ ಈ ಗೌರವ ಸಲ್ಲುತ್ತದೆ.

ವಿಶ್ವವ್ಯಾಪಿ ಹೀಗೆ ಶೋಧಿಸಿದ ನಂತರ 32 ತಂಡಗಳು ಅಂತಿಮ ಸ್ಪರ್ಧೆಗೆ ಅರ್ಹತೆ ಪಡೆಯುತ್ತವೆ. ಈಗ ಊಹಿಸಬಹುದು. ಫುಟ್‌ಬಾಲ್‌ನ ಆಳ ಮತ್ತು ವಿಶಾಲತೆಯನ್ನು.


ಎಂಟನೇ ಗುಂಪಿನಲ್ಲಿ ಅತ್ಯಂತ ಬಲಿಷ್ಠ ತಂಡವಾದ ಯುನೈಟೆಡ್ ಅರಬ್ ಎಮಿರೇಟ್ಸ್ ತಂಡವನ್ನು ಏಪ್ರಿಲ್ 7 ರಂದು ಬೆಂಗಳೂರಿನಲ್ಲಿ ನಡೆದ ಪಂದ್ಯದಲ್ಲಿ ಭಾರತ ಮಣಿಸಿತು. ಮತ್ತೆ ಎರಡನೇ ಪಂದ್ಯದಲ್ಲಿ ಅದಕ್ಕೆ ಶರಣಾಯಿತು.

ಯೆಮೆನ್ ವಿರುದ್ಧದ ಬೆಂಗಳೂರು ಪಂದ್ಯ ಡ್ರಾ ಗೊಂಡರೆ ಮತ್ತೊಂದು ಪಂದ್ಯವೂ ಡ್ರಾ ಆಯಿತು. ಇದು ಭಾರತಕ್ಕೆ ಮೊದಲ ಆಘಾತವಾಯಿತು.

ಮೂರನೇ ಎದುರಾಳಿ ಬ್ರೂನಿ ತಂಡದೆದುರು ಭಾರತ ಪ್ರಯಾಸದ ಜಯಗಳಿಸಿ, ಬೆಂಗಳೂರಿನ 2ನೇ ಪಂದ್ಯದಲ್ಲಿ ಭರ್ಜರಿ 5 ಗೋಲುಗಳ ಜಯ ದಾಖಲಿಸಿದರೂ ಭಾರತ ವಿಶ್ವಕಪ್ ಸ್ಪರ್ಧೆಯಲ್ಲಿ ಭಾಗವಹಿಸಬೇಕೆಂಬ ಅಭಿಮಾನಿಗಳ ಹೆಬ್ಬಯಕೆ ಹಾಗೆಯೇ ಉಳಿಯಿತು. ಎಂಟನೇ ಗುಂಪಿನಲ್ಲಿ ಯುನೈಟೆಡ್ ಅರಬ್ ಎಮಿರೇಟ್ಸ್ 12 ಪಾಯಿಂಟ್‌ಗಳಿಂದ ಮುಂದಿನ ಸುತ್ತು ತಲುಪಿದರೆ ಯೆಮೆನ್ 11 ಪಾಯಿಂಟ್‌ಗಳಿಂದ 2ನೇ ಸ್ಥಾನ ಪಡೆದು ಹೋರಾಟದಂಗಳದಲ್ಲಿದೆ.

ಭಾರತ ತಂಡ ಬೈಚುಂಗ್ ಬುಟಿಯ ನೇತೃತ್ವದಲ್ಲಿ ಪ್ರಾರಂಭದಿಂದಲೂ ಹಲವು ಉತ್ತಮ ಅವಕಾಶಗಳನ್ನು ತಮ್ಮದಾಗಿಸಿಕೊಳ್ಳುವಲ್ಲಿ ಹಾಗೂ ತಂತ್ರಗಾರಿಕೆ ಹಾಗೂ ಆಕ್ರಮಣ ನಡೆಸುವಲ್ಲಿ ವಿಫಲವಾಗಿ ಏಷ್ಯಾದ ಚಾಂಪಿಯನ್ ಪಟ್ಟ ಪಡೆದಿರುವ ಭಾರತ ವಿಶ್ವಕಪ್‌ನಲ್ಲಿ ಇತಿಹಾಸ ಸೃಷ್ಟಿಸುವ ಅದರ ಕನಸು ಸಧ್ಯಕ್ಕೆ ಕನಸಾಗಿಯೆ ಉಳಿಯಿತು.

ಎಂ. ಜಯರಾ[illegible]



ಪೇಸ್-ಭೂಪತಿಗೆ ಫ್ರೆಂಚ್ ಓಪನ್ ಗ್ರ್ಯಾಂಡ್ ಸ್ಲಾಮ್ ಡಬಲ್ಸ್ ಪ್ರಶಸ್ತಿ

ಜೂನ್ 9 ರಂದು ನಡೆದ ಫ್ರೆಂಚ್ ಓಪನ್ ಗ್ರ್ಯಾಂಡ್‌ಸ್ಲಾಮ್ ಡಬಲ್ಸ್ ಪ್ರಶಸ್ತಿಯ ಅಂತಿಮ ಪಂದ್ಯದಲ್ಲಿ ಭಾರತದ ಲಿಯಾಂಡರ್ ಪೇಸ್ ಮತ್ತು ಮಹೇಶ್ ಭೂಪತಿ ಜೋಡಿ ಜೆಕ್ ಜೋಡಿಯಾದ ಹತ್ತನೇ ಶ್ರೇಯಾಂಕಿತ ಪೆಟ್ರಪಾಲಾ ಮತ್ತು ಪಾವೆಲ್ ಮಿಜ್ನರ್‌ರನ್ನು ನೇರ ಸೆಟ್‌ಗಳಲ್ಲಿ ಮಣಿಸಿ ಈ ಪ್ರಶಸ್ತಿ ಗಳಿಸಿದರು. 1999 ರಲ್ಲಿಯೂ ಈ ಜೋಡಿ ಇದೇ ಪ್ರಶಸ್ತಿ ಗಳಿಸಿತ್ತು.

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ: 2236462,
ಮುದ್ರಣ: ಹಂಸ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Farty of India(Marxist), Karnataka State Committee. Editor : S.Y.GURUSHANTH